## ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

+ ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ನಾನು ಸ್ವಾಗತಿಸುತ್ತಾ ಕೆಲವಾರು ವಿಚಾರಗಳನ್ನು ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರ ಭಾಷಣದ ನಂತರ ವಿರೋಧ ಪಕ್ಷದ ಸದಸ್ಯರು, ನಾಯಕರು ಮಾಡಿದ ಟೀಕೆ ನೋಡಿ ಅದರಲ್ಲಿ ಹುರುಳಿಲ್ಲವೆಂದು ಅನ್ನಿಸಿತು. ಹಿರಿಯ ವಿರೋಧ ಪಕ್ಷದ ಮುಖಂಡರು ರಾಜ್ಯಪಾಲರ ಭಾಷಣದಲ್ಲಿ ಏನೂ ಸಾರಾಂಶವಿಲ್ಲ, ಜೊಳ್ಳು, ಸುಳ್ಳಿನ ಕಂತೆ ಎಂದು ಹೇಳಿದರು. ಹೊಸ ಹೊಸ ಯೋಜನೆಗಳನ್ನು ನಾವು ಹೇಳಿದ್ದೇವೆ ಆರಂಭ, ಪುನಶ್ಚೇತನ ಇವುಗಳ ಬಗ್ಗೆ ಬಹಳ ಕಟುವಾಗಿ ಟೀಕೆ ಮಾಡಿದ್ದರು. ಯಾರಿಗೇ ಆಗಲಿ ಒಳ್ಳೆಯ ಕೆಲಸ ಮಾಡಲಿಕ್ಕೆ ಹೊರಟಾಗ ನಮ್ಮ ಶತ್ರುವಾದರೂ ಕೂಡ ಅವರನ್ನು ಶ್ಲಾಘನೆ ಮಾಡಬೇಕಾಗುತ್ತದೆ. ಅದನ್ನು ಸ್ವಾಗತಿಸುವಂತಹ ವಿಶಾಲ ಹೃದಯ ಇರಬೇಕಾಗುತ್ತದೆ. ಕಾಮಾಲೆ ಕಣ್ಣಿಗೆ ಎಲ್ಲಾ ಹಳದಿಯಾಗಿ ಕಾಣುತ್ತದೆ ಎನ್ನುವ ಹಾಗೆ ವಿರೋಧ ಪಕ್ಷದವರು ಅಲ್ಲಿ ಕುಳಿತುಕೊಂಡು ಆಡಳಿತ ಪಕ್ಷದವರು ಏನು ಮಾಡಿದರೂ ಸಹ ಸರಿಯಲ್ಲವೆಂದು ಟೀಕೆ ಮಾಡುವುದೇ ನಮ್ಮ ಚಾಳಿಯೆಂದು ಮಾತನಾಡಿದರೆ ಅದು ಸರಿಯಲ್ಲವೆಂದು ನನಗನ್ನಿಸುತ್ತದೆ. ಹಿಂದೆ ಆಶ್ರಯ ಮತ್ತು ಕೆಲವೊಂದು ಯೋಜನೆಗಳು ಬಂದಾಗ ಕಟುವಾಗಿ ಟೀಕೆ ಮಾಡಿದ್ದರು. ಆಶ್ರಯ, ನೆರಳಿನ ಭಾಗ್ಯ, ಆರಾಧನೆ ಈ ಮೂರು ಯೋಜನೆಗಳಿಂದ ಜನರಿಗೆ ಬಹಳ ಸಹಾಯವಾಗಿದೆ ಮತ್ತು ಸಾಕಷ್ಟು ಜನರ ಬೇಡಿಕೆ ಇದರ ಬಗ್ಗೆ ಇದೆ. ಆಶ್ರಯದಲ್ಲಿ ಮನೆ ಕೊಡಿ ಎಂದು ನಮಗೆ ಸಾವಿರಾರು ಜನರ ಬೇಡಿಕೆ ಇದೆ. ನೆರಳಿನ ಭಾಗ್ಯವನ್ನು ಜನರು ತುಂಬು ಹೃದಯದಿಂದ ಸ್ವಾಗತಿಸುತ್ತಿದ್ದಾರೆ.

(ಮಾನ್ಯ ರಾಜೂಗೌಡರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಎಷ್ಟೋ ಜನ ಬಡವರಿಗೆ ಕಟ್ಟಲಾಗಿದೆ. ಮನೆ ಬಿದ್ದು ಹೋಗುವ ಹಾಗಿದ್ದರೆ ಅದನ್ನು ರಿಪೇರಿ ಮಾಡಲಿಕ್ಕೆ ಅವರಿಗೆ ಶಕ್ತಿಯಿರಲಿಲ್ಲ. 3 ಸಾವಿರ ರೂಪಾಯಿ ಒಂದು ರೀತಿಯ ವರದಾನ ಅವರಿಗಾಗಿದೆ. ಎಷ್ಟೋ ವರ್ಷದಿಂದ ಬಡವರು ಜಮೀನನ್ನು ಒತ್ತುವರಿ ಮಾಡಿಕೊಂಡು ಬಂದಿದ್ದರು ಆದರೂ ಕೂಡ ಅವರಿಗೆ ಹಕ್ಕುಪತ್ರ ಸಿಕ್ಕಿರಲಿಲ್ಲ. ಒತ್ತುವರಿಯನ್ನು ಸಕ್ರಮ ಮಾಡುತ್ತೇವೆಂದು ಹೇಳಿದಾಗ ಸಾವಿರಾರು ಅರ್ಜಿಗಳು ನಮಗೆ ಬಂದವು. ಆ ಅರ್ಜಿಗಳನ್ನು ತೀರ್ಮಾನ ಮಾಡಲಿಕ್ಕೆ ನಮಗೆ ಸಾಕಷ್ಟು ಸಮಯವಾಗುತ್ತಿಲ್ಲ. ಆದರೂ ಸಹ ಆ ಜನರಿಗೆ ಬಹಳ ಧೈರ್ಯಬಂದಿದೆ ಇದು ನಮ್ಮದೆಂದು ಜಮೀನಿಗೆ ಬೇಲಿ ಹಾಕಿ ಬೆಳೆ ಬೆಳೆಸಿದ್ದಾರೆ. ಇದು ನಮಗೆ ದಕ್ಕುತ್ತದೆಂಬ ನಂಬಿಕೆ ಬಂದಿದೆ. ಒಳ್ಳೆ ಕೆಲಸ ಮಾಡಿದಾಗ ಒಳ್ಳೆ ಕೆಲಸ ಮಾಡಿದ್ದೀ ಎಂದು ಹೇಳುವಂತಹ ಹೃದಯವಂತಿಕೆ ವಿರೋಧಪಕ್ಷದವರಿಗೇ ಆಗಲೀ ಯಾವುದೇ ಪಕ್ಷದ ಜನರಿಗಾಗಲೀ ಇರಬೇಕೆಂದು ನನ್ನ ಮನವಿ. ನಮ್ಮ ಸರಕಾರದ ದುರಂತವೆಂದರೆ ಕಳೆದ ವರ್ಷ ಇಡೀ ರಾಜ್ಯದಲ್ಲಿ ಬರ ಪರಿಹಾರ ಮತ್ತು ಭೂಕಂಪದ ಬೇಗೆಗೆ ನಾವು ಒಳಗಾಗಿ ಬಹಳ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು.

ಅದಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ವ್ಯಯ ಮಾಡಬೇಕಾಯಿತು ಬೆಳೆಗೆ ಹಾನಿಯುಂಟಾದಾಗ ಅದಕ್ಕೆ ಪರಿಹಾರವೆಂದು 6.68 ಕೋಟಿ ರೂಪಾಯಿಗಳನ್ನು ಕೊಡಬೇಕಾಯಿತು. ಹಾಗೆಯೇ ದೀರ್ಘಾವಧಿ ಸಾಲವೆಂದು ಸುಮಾರು 200 ಕೋಟಿ ರೂಪಾಯಿಗಳನ್ನು ಸರ್ಕಾರ ಒದಗಿಸಬೇಕಾದಂಥ ಪ್ರಸಂಗ ಬಂತು. ಆದರೂ ಸಹ ಧೃತಿಗೆಡದೆ ಹಲವಾರು ಯೋಜನೆಗಳನ್ನು ಬಡವರಿಗೆ ಏನೇನು ಹಾಕಿದ್ದರೋ ಅದನ್ನು ಮುಂದುವರಿಸಿಕೊಂಡು ಬಂದು ಜನರಿಗೆ ತಲುಪಿಸುವ ಒಂದು ಪ್ರಯತ್ನವನ್ನು ಮಾಡಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದಕ್ಕೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕು

ಅಷ್ಟೇ ನಂಬಿಕೆ ವಿಶ್ವಾಸ ಜನರಲ್ಲಿ ಬರಬೇಕು ಎನ್ನುವ ದೃಷ್ಟಿಯಿಂದ ದಕ್ಷ ಮತ್ತು ಪ್ರಾಮಾಣಿಕ ಆಡಳಿತ ಕೊಡುವಲ್ಲಿ ನಮ್ಮ ಸರ್ಕಾರ ಇವತ್ತು ಮುಂದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಭ್ರಷ್ಟಾಚಾರವನ್ನು ತೊಡೆದು ಹಾಕಲು ಪ್ರಯತ್ನ ಸಾಕಷ್ಟು ಈ ಒಂದು ಸರ್ಕಾರದಲ್ಲಿ ನಡೆದಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳಬೇಕಾಗಿದೆ. ಇದನ್ನು ವಿರೋಧ ಪಕ್ಷದವರೂ ಸಹ ಮೆಚ್ಚಿಕೊಳ್ಳುತ್ತಾರೆ ಎಂದು ನಾನಂತೂ ನಂಬಿದ್ದೇನೆ. ಯಾವುದೇ ಭ್ರಷ್ಟಾಚಾರದ ಅಪಾದನೆ ಈ ಸರ್ಕಾರಕ್ಕೆ ಇವತ್ತು ಬಂದಿಲ್ಲ. ಆದರೆ ಕೆಲವೊಂದು ಯೋಜನೆಗಳನ್ನು ಜಾರಿ ಕೊಡಬೇಕಾದರೆ ಸಣ್ಣಪುಟ್ಟ ತೊಡಕಾಗಿರಬಹುದು. ಆದರೂ ಸಹ ಸಂಪೂರ್ಣವಾಗಿ ಈ ಯೋಜನೆಗಳನ್ನು ಜಾರಿಗೆ ಕೊಡುವಲ್ಲಿ ವಿಫಲರಾಗಿದ್ದೇವೆ ಎಂದು ಒಪ್ಪಿಕೊಳ್ಳುವುದಕ್ಕೆ ನಾನಂತೂ ತಯಾರಾಗಿಲ್ಲ. ಈ ಆಡಳಿತ ಯಂತ್ರವನ್ನು ಇನ್ನಷ್ಟು ಚುರುಕುಗೊಳಿಸಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದ ಮಟ್ಟದಲ್ಲಿ, ಕ್ಯಾಬಿನೆಟ್ ಒಂದು ಸಮಿತಿಯನ್ನು ಮಾಡಿ ಪ್ರತಿ ತಿಂಗಳು ರೆವ್ಯೂ ವರ್ಕನ್ನು ಮಾಡುತ್ತಿದ್ದಾರೆ. ಆದರೂ ನಾನು ಕಿವಿ ಮಾತು ಸರ್ಕಾರಕ್ಕೆ ಹೇಳಬೇಕೆಂದರೆ ಯಾವುದೇ ಯೋಜನೆಗಳು ಇವತ್ತು ಜನಸಾಮಾನ್ಯರಿಗೆ ಮುಟ್ಟಬೇಕಾದರೆ ಆಡಳಿತ ಯಂತ್ರ ಬಹಳ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಬೇಕಾಗುತ್ತದೆ. ಸಚಿವಾಲಯದಲ್ಲಿ ಅಧಿಕಾರಿಗಳು ಮತ್ತು ಜಿಲ್ಲಾಮಟ್ಟದ ಆಡಳಿತ ಯಂತ್ರ ಏನಿದೆ, ಅವರು ಪ್ರಾಮಾಣಿಕವಾಗಿ ದಕ್ಷವಾಗಿ ಕೆಲಸಮಾಡಿ ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸಿದಾಗ ಮಾತ್ರ ಸರ್ಕಾರಕ್ಕೆ ಮತ್ತು ಜನರಿಗೆ ಅನುಕೂಲವಾಗುತ್ತದೆ ಎಂದು ನಾನಂತೂ ನಂಬಿಕೊಂಡಿದ್ದೇನೆ. ಆದರೆ, ಈ ಅಧಿಕಾರಿಗಳ ಧೋರಣೆ ನಮಗೆ ಅರ್ಥವೇ ಆಗುವುದಿಲ್ಲ, ಯಾವ ಸರ್ಕಾರ ಬರಲಿ, ಯಾವ ಸರ್ಕಾರ ಹೋಗಲಿ ಅವರು ಒಂದು ಮನೋಭಾವನೆ ಒಂದೇ ರೀತಿಯಾಗಿರುತ್ತದೆ ಎಂದು ನನಗನಿಸುತ್ತದೆ. ತಾವು ವಿರೋಧ ಪಕ್ಷದಲ್ಲಿ ಕುಳಿತುಕೊಂಡು, ನಿಮ್ಮ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡುವುದಿಲ್ಲ, ನಿಮ್ಮ ಅಧಿಕಾರಿಗಳು ಭ್ರಷ್ಟರಿದ್ದಾರೆ ಎಂದು ದೂರುವುದು ಒಂದು. ಆದರೆ ಯಾವುದೇ ಸರ್ಕಾರ ಬಂದರೂ ಅದೇ ಅಧಿಕಾರಿಗಳಿರುತ್ತಾರೆ. ಇದು ದೊಡ್ಡ ದುರಂತ ಎಂದು ಹೇಳಿದರೆ ಅವರಿಗೂ ಏನೂ ಭಯವಿಲ್ಲ ಎನಿಸುತ್ತದೆ. ಈ ಸರ್ಕಾರದಲ್ಲಿದ್ದ ಅಥವಾ ಈ ಶಾಸನಸಭೆಯಲ್ಲಿದ್ದ ಶಾಸಕರು ಮುಂದೆ ಬರುತ್ತಾರೋ ಇರುತ್ತಾರೋ ಅಥವಾ ಮಂತ್ರಿಗಳು ಮುಂದೆ ಇರುತ್ತಾರೋ ಇರುವುದಿಲ್ಲವೋ ಆದರೆ ನಾನಂತೂ ಗಟ್ಟಿಯಾಗಿರುತ್ತೇವೆ, ನಮ್ಮದೇ ಆದ ಒಂದು ಹಾದಿಯಲ್ಲಿ ನಾವು ನಡೆಯಬೇಕು, ನಾವು ಏತಕ್ಕೆ ಕೇರೆ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡಿಕೊಂಡು ಹೋಗುತ್ತಾರೇನೋ ಎಂದು ನನಗಂತೂ ಅನಿಸುತ್ತದೆ. ಎಷ್ಟೋ ಸಾರಿ ಸರ್ಕಾರದ ಆದೇಶ ಜನರಿಗೆ ಮುಟ್ಟಬೇಕಾದರೆ ಬಹಳ ತಡವಾಗುತ್ತದೆ. ವಿಧಾನಸೌಧದಲ್ಲಿ ಯಾವುದೇ ಒಂದು ಆದೇಶವನ್ನು ಹೊರಡಿಸಿದರೆ ಅದು ಕೆಳಹಂತಕ್ಕೆ ತಲುಪಬೇಕಾದರೆ ಕನಿಷ್ಟ ಎಂದು ಹೇಳಿದರೆ ಎರಡು ತಿಂಗಳು ಒಂದು ತಿಂಗಳಾದರೂ ಸಹ ಜನರಿಗೆ ತಲುಪುವುದಿಲ್ಲ. ಇದು ಬಹಳ ವ್ಯಸನಕರವಾದ ಸಂಗತಿ. ಆದ್ದರಿಂದ ಆಡಳಿತ ಯಂತ್ರ ಬಹಳ ಚುರುಕಾಗಬೇಕಾಗುತ್ತದೆ. ಮೇಲಟ್ಟದ ಅಧಿಕಾರಿಗಳಿಂದ ಹಿಡಿದು ಕೆಳಮಟ್ಟದ ಅಧಿಕಾರಿಗಳಿಗೆ ನನ್ನದೊಂದು ಮನವಿ ಎಂದರೆ ತಮಗೆ ಯಾರೂ ಸರ್ಟಿಫಿಕೇಟನ್ನು ಕೊಡುವುದಿಲ್ಲ, ನಮಗೂ ಸಹಾ ಯಾರೂ ಸರ್ಟಿಫಿಕೇಟ್ ಕೊಡುವುದಿಲ್ಲ. ಆದರೆ ನಮ್ಮೆಲ್ಲರಿಗೂ ಜನರ ಸರ್ಟಿಫಿಕೇಟ್ ಬಹಳ ಮುಖ್ಯ. ಅದು ನಮಗೆ ಸಹಾಯಕ್ಕೂ ಬರುವುದಿಲ್ಲ, ನಮಗೆ ಸಮಾಧಾನ ಮಾತ್ರ ತರುತ್ತದೆ. ಅಧಿಕಾರಿಗಳು ಅವರ ಮಟ್ಟದಲ್ಲಿ ಜನರು ಅವರನ್ನು ಬಹಳ ಒಳ್ಳೆಯ ಅಧಿಕಾರಿಗಳು ಎಂದು ವಿಶ್ವಾಸದಿಂದ ಕಾಣುತ್ತಾರೆ. ನಾನು ಉದಾಹರಣೆಗೆ ಹೇಳಬೇಕೆಂದು ಹೇಳಿದರೆ ಜಿಲ್ಲಾಧಿಕಾರಿಗಳನ್ನು ನಮ್ಮ ಜಿಲ್ಲೆಯಲ್ಲಿ ಕೆಲವಾರು ಜನರು ಬಂದು ಹೋದರು. ಆದರೆ ಕೆಲವೇ ಕೆಲವು ಜಿಲ್ಲಾಧಿಕಾರಿಗಳಾಗಿ ಜನರು ಇವತ್ತು ನೆನೆಸುತ್ತಾರೆ. ನಮ್ಮಲ್ಲಿ ಸೆಕ್ರಟರಿಯಾಗಿರುವ ಕೆ.ಪಿ. ಪಾಂಡೆಯವರು

ನಮ್ಮಲ್ಲಿ ಜಿಲ್ಲಾಧಿಕಾರಿಗಳಾಗಿದ್ದರು. ಡಾ|| ಸುಬ್ರಹ್ಮಣ್ಯಂ ಅವರು ಜಿಲ್ಲಾಧಿಕಾರಿಗಳಾಗಿದ್ದರು ಇವರನ್ನು ಇವತ್ತಿಗೂ ಜನರು ನೆನೆಸುತ್ತಾರೆ. ಒಳ್ಳೆಯ ಜಿಲ್ಲಾಧಿಕಾರಿಗಳಿದ್ದರು. ಇವರ ಕಾಲದಲ್ಲಿ ಒಳ್ಳೆಯ ಕೆಲಸವಾಯಿತು ಎಂದು. ಹಾಗೆಯೆ ನಮ್ಮಲ್ಲಿ ಮುಖ್ಯಕಾರ್ಯದರ್ಶಿಯಾಗಿ ಬಹಳ ಜನರು ಬಂದು ಹೋದರು. ಅದರಲ್ಲಿ ಹೆಣ್ಣು ಮಗಳಾಗಿ ಗೌರಿ ತ್ರಿವೇದಿ ಅವರು ಬಂದರು. ಇವತ್ತು ಆಕೆಯನ್ನು ಜನರು ನೆನೆಸುತ್ತಾರೆ. ಬಹಳಷ್ಟು ಕೆಲಸ ಮಾಡುತ್ತಿದ್ದರು. ಯಾವುದೇ ಒಂದು ತಾರತಮ್ಯವಿಲ್ಲದೆ ಜನರಿಗೆ ಹಗಲಿರುಳು ಕೆಲಸ ಮಾಡುವುದಕ್ಕೆ ಅವರು ಮುಂದಾಗುತ್ತಿದ್ದರು ಎಂದು ಜನರು ನೆನೆಸುತ್ತಾರೆ. ಆ ರೀತಿ ಅಧಿಕಾರಿಗಳು ಕೆಲಸ ಮಾಡಬೇಕೆ ವಿನಹ ಜಿಡ್ಡುಗಟ್ಟಿ ಸರ್ಕಾರ ಬರುತ್ತದೆ, ಹೋಗುತ್ತದೆ ಆದರೆ ನಮಗೇನು ಆಗುವುದಿಲ್ಲ ಮೊಂಡು ಸ್ವಭಾವ ಇಟ್ಟುಕೊಂಡು ಹೋದರೆ ಜನರಿಗೆ ನಿಜವಾಗಲೂ ಇವರು ಯಾವುದೇ ಯೋಜನೆಗಳನ್ನು ತಲುಪಿಸುವುದಕ್ಕೆ ಸಾಧ್ಯವಿಲ್ಲ.

ಆ ದೃಷ್ಟಿಯಿಂದ ನಾನು ಇಲ್ಲಿರುವ ಅಧಿಕಾರಿಗಳಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ ಅದರಲ್ಲೂ ಸೆಕ್ರೆಟರಿಯೇಟ್ನಲ್ಲಿ ಕುಳಿತುಕೊಂಡು ಕೆಲವರು ಕೆಲವೊಂದು ಕಾನೂನುಗಳನ್ನು ಮಾಡುತ್ತಾರೆ. ದೇವರು ಅವರಿಗೆ ಯಾವ ರೀತಿ ಮನಸ್ಸು ಕೊಡುತ್ತಾನೇ ನನಗೆ ಅರ್ಥ ಆಗುತ್ತಿಲ್ಲ. ಜನರಿಗೆ ಅನುಕೂಲ ಆಗುವ ರೀತಿ ಕಾನೂನು ಮಾಡಿದರೆ ಬಹಳ ಸಹಾಯ ಆಗುತ್ತದೆ ಏನೋ ಎಂದು ಅನಿಸುತ್ತದೆ. ಆದರೆ ಸುಮ್ಮನೆ ಕಾನೂನು ಮಾಡಿದರೆ ಬಹಳ ಸಹಾಯ ಆಗುತ್ತದೆ ಏನೋ ಎಂದು ಅನಿಸುತ್ತದೆ ಆದರೆ ಸುಮ್ಮನೇ ಕಾನೂನು ಮಾಡಿದರೆ ಅದು ಮಲೆನಾಡಿಗೆ ಅಷ್ಟೆ ಆದ ಬಯಲು ಸೀಮೆಯವರೆಗೆ ಅಷ್ಟೆ ಆಗುವುದಿಲ್ಲ. ಬಯಲು ಸೀಮೆಗೆ ಈ ಕಾನೂನು ಅನುಕೂಲ ಆದರೆ ಮಲೆನಾಡಿಗೆ ಅಷ್ಟೆ ಆಗುವುದಿಲ್ಲ. ಉದಾಹರಣೆಗೆ ಈ ಒತ್ತುವರಿ ಸಕ್ರಮ ಜನರಿಗೆ ಇವತ್ತು ಬಹಳ ವರದಾನ ಆಗಿದೆ. ಇದರಲ್ಲಿ ಏನು ಮಾಡಿದರು ಎಂದರೆ ಒಂದು ಸಣ್ಣ ರಾಜಕೀಯ ಎಂಬ ಪದ ಬಳಸಬಹುದೋ ಇಲ್ಲವೋ ನನಗೆ ಗೊತ್ತಿಲ್ಲ. ಈಗ ಒತ್ತುವರಿ ಸಕ್ರಮ ಯಾವ ಒಂದು ಜಮೀನನ್ನು ಬಡವರಿ ನಾವು ಸಕ್ರಮ ಮಾಡಬಹುದು ಎನ್ನುವುದನ್ನು ಆ ಲ್ಯಾಂಡ್ ಕ್ಲಾಸಿಫಿಕೇಶನ್ನಲ್ಲಿ ಹೇಳಿದ್ದಾರೆ. ತರಿ, ಖುಷ್ಕಿ, ಗೋಮಾಳ ಇಂತಹವನ್ನು ಅವರು ಸಕ್ರಮ ಮಾಡಬಹುದು ಆದರೆ ರಿಸರ್ವ್‌ಲ್ಯಾಂಡ್ ಆದ ಕುಂಕಿ, ಖುಷ್ಕಿ ಮತ್ತು ಕಾಫಿ ಖರಾಫೆ ಇಂತಹ ಭೂಮಿಯನ್ನು ಒತ್ತುವರಿ ಸಕ್ರಮ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇ ಆದರೆ ದುರಂತ ಎಂದು ಹೇಳಿದರೆ ನಮ್ಮ ಏರಿಯಾದಲ್ಲಿ ಬರೀ ಖುಷ್ಕಿಯಲ್ಲಿ ಜ ಕಾಫಿ ಬೆಳೆದಿದ್ದಾರೆ. ಏಕೆಂದರೆ ನಮ್ಮಲ್ಲಿ ಕಾಫಿ ಬೆಳೆಯುವುದನ್ನು ಬಿಟ್ಟರೆ ಬೇ ಯಾವುದೇ ಬೆಳೆಯಲಿಕ್ಕೆ ಸಾಧ್ಯ ಇಲ್ಲ. ಗೋಧಿ, ರಾಗಿ, ಜೋಳ ಇತ್ಯಾದಿಗಳ ಬೆಳೆಯುವುದಕ್ಕೆ ಸಾಧ್ಯ ಇಲ್ಲ. ನೀವು ತರಿ, ಖುಷ್ಕಿಯಲ್ಲಿ ಕಾಫಿ ಬೆಳೆಯುತ್ತಿದ್ದೀ ಈ ಭೂಮಿಯನ್ನು ನೀವು ಸಕ್ರಮ ಮಾಡುವುದಕ್ಕೆ ಆಗುವುದಿಲ್ಲ. ಇದು ಕಾ ಪ್ಲಾಂಟೇಶನ್ ಆಗುತ್ತದೆ ಎಂದು ಹೇಳಿದರೆ ಇದು ಹೇಗೆ ಸಾಧ್ಯ? ಸಾಮಾನ್ಯ ಜ ಹೇಳುತ್ತಾರೆ. ನಮಗೆ ಕಾಫಿ ಪ್ಲಾಂಟೇಷನ್ ಎಂದು ಹೇಳಬೇಕಾದರೆ ಅದು ಟೆನ್ಯೂ ಛೇಂಜ್ ಆಗಬೇಕಾಗುತ್ತದೆ. ಜೊತೆಗೆ ತರಿ ಇದ್ದುದ್ದನ್ನು ಅದು ಕಾಫಿ ಎಂ ಆಗಬೇಕಾದರೆ ಸಿ ಆರ್ ಸಿ ಅಂದರೆ ಕಾಫಿ ರೆಜಿಸ್ಟ್ರೇಷನ್ ಸರ್ಟಿಫಿಕೇಟ್ ತೆಗೆದುಕೊಂ ನಂತರ ಅದು ಕಾಫಿ ಪ್ಲಾಂಟೇಷನ್ ಲ್ಯಾಂಡ್ ಆಗುತ್ತದೆ. ಅದಕ್ಕೆ ಮೊದ ಇವರು ಪ್ಲಾಂಟೇಷನ್ ಲ್ಯಾಂಡ್ ಎಂದು ಹೇಳಿ ಇದನ್ನು ವಜಾ ಮಾಡುತ್ತಾರೆ ಇದು ಯಾವ ನ್ಯಾಯ? ಇದು ಅನ್ಯಾಯ. ಯಾರು ಈ ಕಾನೂನನ್ನು ಮಾಡಿದ್ದು ಎಂದು ನಮ್ಮನ್ನು ಪ್ರಶ್ನೆ ಮಾಡುತ್ತಾರೆ. ಅಂದರೆ ಸಾಮಾನ್ಯ ಜನರಿಗೆ ಅರ್ಥ ಆಗು ಈ ಒಂದು ಸಮಸ್ಯೆ ಅಥವಾ ಪ್ರಶ್ನೆ ಇಲ್ಲಿ ಸೆಕ್ರೆಟರಿಯೇಟ್ ನಲ್ಲಿ ಕುಳಿತು ಕಾನೂನು ಮಾಡಿದವರಿಗೆ ಏಕೆ ಅರ್ಥ ಆಗುವುದಿಲ್ಲ ಎಂದು ನನಗಂತೂ ಅ

ಆಗುವುದಿಲ್ಲ, ಇಂತಹ ಅನಾಹುತಗಳು, ಅನ್ಯಾಯಗಳು ಸಾಕಷ್ಟು ನಡೆಯುತ್ತವೆ. ಅದಕ್ಕೆ ಜನ ಸಾಮಾನ್ಯರ ಬಗ್ಗೆ ಯಾವುದೇ ಕಾನೂನನ್ನು ತಯಾರು ಮಾಡಬೇಕಾದರೆ ನಿರೂಪಣೆ ಮಾಡಬೇಕಾದರೆ ಅಧಿಕಾರಿಗಳು ಸ್ವಲ್ಪ ಮನಸ್ಸು ಬಿಚ್ಚಿ, ಹೃದಯ ಬಿಚ್ಚಿ ಕೆಲಸ ಮಾಡಬೇಕಾಗುತ್ತದೆ. ಸಾಮಾನ್ಯ ಜನರಿಗೆ ಈ ಕಾನೂನು ಎಷ್ಟರಮಟ್ಟಿಗೆ ತಲುಪುತ್ತದೆ, ಸಹಾಯ ಆಗುತ್ತದೆ, ಎನ್ನುವುದನ್ನು ವಿಚಾರ ಮಾಡಿದರೆ ಬಹಳಷ್ಟು ಜನರಿಗೆ ಅನುಕೂಲ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಜೊತೆಗೆ ಯಾವುದೇ ಅಧಿಕಾರಿ ಯಾವುದೇ ಯೋಜನೆಯನ್ನು ತಲುಪಿಸುವಲ್ಲಿ ಜನರಿಗೆ ಮುಟ್ಟಿಸುವಲ್ಲಿ ಎಲ್ಲಿ ಫೇಲ್ಯೂರ್ ಆಗುತ್ತಾನೆ, ಅಂತಹವರ ಬಗ್ಗೆ ನಾವು ಕಠಿಣವಾಗಿ ನಡೆಸಿಕೊಳ್ಳಬೇಕಾಗುತ್ತದೆ. ಅವರಿಗೆ ಯಾವ ರೀತಿ ಪನಿಷ್ಮೆಂಟ್ ಕೊಡಲಿಕ್ಕೆ ಸಾಧ್ಯ ಆ ರೀತಿ ಪನಿಷ್ಮೆಂಟ್ ಕೊಟ್ಟಾಗ ಬೇರೆ ಅಧಿಕಾರಿಗಳು ಸ್ವಲ್ಪ ಎಚ್ಚತ್ತುಕೊಂಡು ಕೆಲಸ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಏನೋ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಜೊತೆಗೆ ಒಳ್ಳೆಯ ಅಧಿಕಾರಿಗಳಿಗೆ ನಾವು ಪ್ರೋತ್ಸಾಹ ಕೊಡಬೇಕಾಗುತ್ತದೆ. ಯಾವುದೇ ಇಲಾಖೆಯಲ್ಲಿ ಯಾರೇ ಕಮೀಷನರ್ ಆಗಿರಬಹುದು, ಸೆಕ್ರೇಟರಿ ಆಗಿರಬಹುದು, ಅಥವಾ ಪೋಲೀಸ್ ಇಲಾಖೆಯಲ್ಲಿ ಒಳ್ಳೆಯ ಕೆಲಸಗಾರರು ಇದ್ದಾರೆ ಎಂದು ಹೇಳಿದಾಗ ಅವರಿಗೆ ನಾವು ಬೆನ್ನು ತಟ್ಟ ಬೇಕಾಗುತ್ತದೆ. ಒಳ್ಳೆಯ ಕೆಲಸ ಮಾಡಿದ್ದೀರಿ ಎಂದು ಹೇಳಿ ಅವರನ್ನು ನಾವು ಗುರ್ತಿಸಬೇಕಾಗುತ್ತದೆ. ಆಗ ಅವರಿಗೂ ಹುರುಪು ಬರುತ್ತದೆ. ಬೇರೆ ಯಾರು ಸೋಂಬೇರಿಗಳಾಗಿ ಕೆಲಸ ಮಾಡಲಿಕ್ಕೆ ಮನಸ್ಸು ಇಲ್ಲದೆ ಕೇವಲ ಸಂಬಳಕ್ಕೋಸ್ಕರ ಕೆಲಸ ಮಾಡುವ ಅಧಿಕಾರಿಗಳಿಗೆ, ಆ ಅಧಿಕಾರಿಗೆ ಒಳ್ಳೆಯ ಹೆಸರು ಬಂತು, ನಾನು ಮಾಡಬೇಕು ಎನ್ನುವ ಆಲೋಚನೆ ಬರುತ್ತದೆ ಎಂದು ನಾನಂತೂ ಅಂದುಕೊಂಡಿದ್ದೇನೆ. ಕೆಲಸ ಮಾಡಲಿಕ್ಕೆ ನಾವು ಅವಕಾಶ ಮಾಡಿಕೊಡಬೇಕಾಗುತ್ತದೆ. ಇದು ಇಷ್ಟೇ ಅಲ್ಲದೇ ನೀವು ಐದು ನಿಮಿಷಕ್ಕೇ ಬೆಲ್ ಹೊಡೆದರೆ ಮಾತನಾಡಲು ಬಹಳ ಕಷ್ಟ ಆಗುತ್ತದೆ.

ಛೇರ್ಮನ್: ಹದಿನೈದು ನಿಮಿಷ ಆಯಿತು. ದಯಮಾಡಿ ಮುಗಿಸಿ.

ಶ್ರೀಮತಿ ಮೋಟಮ್ಮ : ಆಮೇಲೆ ಬಹಳ ಮುಖ್ಯವಾಗಿ ಹೇಳಬೇಕಾಗಿದೆ. ನಾವು ಮಂಡಲ್ ಪಂಚಾಯತಿ ಚುನಾವಣೆ ನಡೆಸುವುದೇ ಇಲ್ಲ ಎಂದು ವಿರೋಧ ಪಕ್ಷದವರು ಅಂದುಕೊಂಡಿದ್ದರು. ನಾವು ದೇಶದಲ್ಲಿ ಪ್ರಥಮ ಬಾರಿಗೆ ಮಂಡಲ್ ಪಂಚಾಯತಿ ಚುನಾವಣೆ ನಡೆಸಿ ಗ್ರಾಮಾಂತರ ಪ್ರದೇಶದಲ್ಲಿ ಅಧಿಕಾರ ವಿಕೇಂದ್ರೀಕರಣ ಎಂದರೆ ಏನು ಎನ್ನುವುದನ್ನು ತೋರಿಸಿಕೊಟ್ಟಿದ್ದೇವೆ. ಅದರಲ್ಲೂ ಪ್ರಥಮ ಬಾರಿಗೆ ಮಹಿಳೆಯರಿಗೆ 33 ಪರ್ಸೆಂಟ್ ಎಂದು ಸರ್ಕಾರ ಅಥವಾ ಜಿಲ್ಲಾ ಪರಿಷತ್ತಿನ ತಿದ್ದುಪಡಿಯಲ್ಲಿ ಹೇಳಿದ್ದರೂ ಸಹ ಅದಕ್ಕೂ ಜಾಸ್ತಿ ಹೆಣ್ಣು ಮಕ್ಕಳು ಆಯ್ಕೆಯಾಗಿ ಬಂದಿದ್ದಾರೆ. ಅದಕ್ಕೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಇನ್ನೂ ಹೆಚ್ಚು ಹೆಣ್ಣುಮಕ್ಕಳು ಆಯ್ಕೆಯಾಗಿ ಬರಬೇಕು ಎಂಬುದು ನನ್ನ ಅಭಿಲಾಷೆ. ಇವತ್ತು 33 ಪರ್ಸೆಂಟ್ನಲ್ಲಿ ಎಲ್ಲಾ ವರ್ಗದ ಹೆಣ್ಣು ಮಕ್ಕಳು ಅಧ್ಯಕ್ಷರಾಗಿ ಬರುತ್ತಾರೆ. ಅವರು ಅಧ್ಯಕ್ಷರಾಗಿ ಬಂದಲ್ಲಿ ಒಳ್ಳೆಯ ದಕ್ಷ ಮತ್ತು ಪ್ರಾಮಾಣಿಕ ಆಡಳಿತ ಕೊಡುವುದಕ್ಕೆ ಸಾಧ್ಯತೆ ಇದೆ ಎನ್ನುವ ಮಾತನ್ನು ಹೇಳುತ್ತೇನೆ. ಇದಲ್ಲದೇ ಮಹಿಳೆಯರಿಗಾಗಿ ಸಮಗ್ರ ಮಹಿಳಾ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಅದರಲ್ಲಿ ಸುಮಾರು ಒನ್ ಥರ್ಡ್ ಗ್ರಾಂಟನ್ನು ಎಲ್ಲಾ ಇಲಾಖೆಯಲ್ಲೂ ಮಹಿಳೆಯರ ಅಭಿವೃದ್ಧಿಗಾಗಿ ಖರ್ಚು ಮಾಡಬೇಕು ಎಂದು ಹೇಳಿ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿದೆ. ಇದು ಕೇವಲ ಕಾನೂನು ಆಗಿ ಮಾತ್ರ ಉಳಿಯಬಾರದು. ಇದು ತಕ್ಷಣ ಜಾರಿಗೊಳಿಸಬೇಕಾಗುತ್ತದೆ. ಆ ರೀತಿ ಮಾಡಿದರೆ ಮಹಿಳೆಯರ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ ಹಾಗೆ ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

4.20 ಪಿ.ಎಂ.

ಮತ್ತು ಎಲ್ಲಾ ಜಿಲ್ಲೆಗಳಲ್ಲೂ ಪ್ರತ್ಯೇಕವಾಗಿ ಮಹಿಳೆಯರ ಒಂದು ಪೋಲಿಸ್ ಠಾಣೆ ತೆರೆದು ಮಹಿಳೆಯರ ಹಿತರಕ್ಷಣೆ ಮಾಡುತ್ತಿರುವುದು ಬಹಳ ಹೆಮ್ಮೆಯ ವಿಷಯವಾಗಿರುವುದರಿಂದ ನಾನು ಸಮಗ್ರ ಮಹಿಳೆಯರ ಪರವಾಗಿ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ಏಕೆಂದರೆ, ಮಹಿಳೆಯರಿಗೆ ಎಷ್ಟೋ ಸಾರಿ ರಕ್ಷಣೆ ಸಿಗುವುದಿಲ್ಲ. ಈ ಪೋಲಿಸ್ ಠಾಣೆ ಸ್ಥಾಪಿಸುವ ದಿಸೆಯಿಂದಲಾದರೂ ಮಹಿಳೆಯರಿಗೆ ಹೆಚ್ಚಿನ ರಕ್ಷಣೆ ಮತ್ತು ನ್ಯಾಯ ಸಿಗುತ್ತದೆಂಬ ನಂಬಿಕೆಯನ್ನು ಇಟ್ಟುಕೊಂಡಿದ್ದೇನೆ. ಹಾಗೆಯೇ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಭಡ್ತಿ, ನೌಕರಿ ಮುಂತಾದ ಸೌಲಭ್ಯಗಳನ್ನು ಒದಗಿಸುವಲ್ಲಿ ಬಹಳ ಆದ್ಯತೆ ಕೊಟ್ಟಿದ್ದೇವೆಂದು ಸರ್ಕಾರ ಹೆಮ್ಮೆಯಿಂದ ಹೇಳಿಕೊಂಡಿರುವುದನ್ನು ಒಪ್ಪುತ್ತೇನೆ. ಆದರೆ, ಇದು ಎಷ್ಟರಮಟ್ಟಿಗೆ ಜಾರಿಯಾಗಿದೆ, ಎಷ್ಟರಮಟ್ಟಿಗೆ ಸಹಾಯವಾಗಿದೆ ಎನ್ನುವುದನ್ನು ನಮ್ಮ ಅಧಿಕಾರಿ ವರ್ಗ (ಆಡಳಿತ ಯಂತ್ರ) ಎದೆ ಮುಟ್ಟಿ ನೋಡಿಕೊಳ್ಳಬೇಕಾಗಿದೆ. ಬರೀ ಕಾನೂನು ಇದ್ದರೆ ಸಾಲದು, ಅದು ಕಾರ್ಯಗತವಾಗಬೇಕಾಗುತ್ತದೆ. ಎಷ್ಟೋ ಇಲಾಖೆಗಳಲ್ಲಿ ಇವೊತ್ತು ಬ್ಯಾಕ್ಲಾಗ್ ಹುದ್ದೆಗಳನ್ನು ತುಂಬಬೇಕಾದ್ದು, ಇವೊತ್ತಿನವರೆಗೂ ತುಂಬಿಲ್ಲ. ನಾನು ವಿಧಾನಮಂಡಲದ ಪರಿಶಿಷ್ಟ ಜಾತಿ: ವರ್ಗಗಳ ಕಲ್ಯಾಣ ಸಮಿತಿಯ ಅಧ್ಯಕ್ಷೆಯಾಗಿದ್ದಾಗ ಇಲಾಖೆಗಳಿಗೆ ಹೋಗಿ ಪರಿಶೀಲಿಸಿದ್ದು ಅದರಲ್ಲಿ ಕೆಲವು ಇಲಾಖೆಗಳು ಉದ್ದೇಶಪೂರ್ವಕವಾಗಿ ಈ ವರ್ಗದ ಜನರಿಗೆ ಬಡ್ತಿ, ನೌಕರಿ ಇನ್ನಿತರ ವಿಚಾರಗಳಲ್ಲಿ ನ್ಯಾಯವಾಗಿ ದೊರಕಬೇಕಾದ ಸೌಲಭ್ಯಗಳಿಗೆ ತಡೆಯೊಡ್ಡುತ್ತಿರುವುದು ಕಂಡುಬಂದು, ಇದರ ಬಗ್ಗೆ ಸರ್ಕಾರಕ್ಕೆ ವರದಿ ಮಾಡಿದೆ. ಆದರೆ, ಸರ್ಕಾರ ಇದುವರೆಗೆ ಕ್ರಮ ಕೈಗೊಂಡಿಲ್ಲ. ಉದಾಹರಣೆಗೆ ಹೇಳಬೇಕೆಂದರೆ, ಬೆಂಗಳೂರು ಡೈರಿಯಲ್ಲಿ ಪರಿಶಿಷ್ಟರಿಗೆ ಬಡ್ತಿ ಹಾಗೂ ಬ್ಯಾಕ್ಲಾಗ್ ಹುದ್ದೆಗಳು ತುಂಬುವುದರಲ್ಲಿ ಸಾಕಷ್ಟು ಅನ್ಯಾಯವೆಸಗಿದ್ದಾರೆ. ಹಾಗೆಯೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ(ಕೆಐಎಡಿಬಿ), ಕರ್ನಾಟಕ ಅರ್ಬನ್ ವಾಟರ್ ಸಪ್ಲೈ (ಕೆಯುಡಬ್ಲ್ಯೂಎಸ್) ಅಲ್ಲದೆ ಹಲವಾರು ಇಲಾಖೆಗಳಲ್ಲಿ ಪರಿಶಿಷ್ಟರ ವಿಚಾರದಲ್ಲಿ ಅನ್ಯಾಯವಾಗುತ್ತಿದೆ. ಅದೇ ರೀತಿ ಹರಿಜನರಿಗೆ ರಕ್ಷಣೆ ಕೊಡುವ ದೃಷ್ಟಿಯಿಂದ ಇವೊತ್ತು ಪ್ರಿವೆನ್ಷನ್ ಆಫ್ ಅಟ್ರಾಸಿಟಿ ಆಕ್ಟ್ ಇದ್ದರೂ ಸಹ ರಾಜ್ಯದ ಕೆಲವಾರು ಕಡೆಗಳಲ್ಲಿ ಹರಿಜನರ ಮೇಲೆ ದೌರ್ಜನ್ಯಗಳಾಗುತ್ತಿವೆ. ಇದನ್ನು ತಡೆಗಟ್ಟಬೇಕು, ಇಲ್ಲದಿದ್ದರೆ ದೌರ್ಜನ್ಯವೆಸಗುವ ಯಾರಿಗೇ ಆಗಲಿ ಹೆದರಿಕೆಯಾಗುವುದಿಲ್ಲವೆನ್ನುವ ದೃಷ್ಟಿಯಿಂದ ನಾನು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಅದಿನ್ನೂ ಸರ್ಕಾರ ಜಾರಿಗೆ ಕೊಟ್ಟಿಲ್ಲ, ಆದರೆ, ಮೊನ್ನೆ ದಿವಸ ಕೋಲಾರ ಜಿಲ್ಲೆಯ ಒಂದು ಪ್ರಕರಣ ನೋಡಿದಾಗ ನಮಗೆಲ್ಲರಿಗೂ ದಿಗ್ಭ್ರಮೆಯಾಯಿತು. ಇಂತಹ ಒಂದು ದುಷ್ಕೃತ್ಯ ಕೂಡ ಸಮಾಜದಲ್ಲಿ ನಡೆಯಲು ಸಾಧ್ಯವೆಂದು ನನಗನ್ನಿಸಿತು. ಸಮಿತಿಯ ಪರವಾಗಿ ನಾನು ಅಲ್ಲಿಗೆ ಹೋಗಿ ವಿಚಾರಿಸಿದಾಗ, ಕಂಡುಬಂದುದೇನೆಂದರೆ , ಹರಿಜನರ ಮೇಲೆ ದೌರ್ಜನ್ಯ ನಡೆಸಿ ಆ ಜನಾಂಗದದ ಮೇಲೆ ಕೆಟ್ಟ ಹೆಸರನ್ನು ತರುವುದಕ್ಕೆ ಪ್ರಯತ್ನಿಸಿ ಹಾಗೂ ಇಲ್ಲಸಲ್ಲದ ಅಪಪ್ರಚಾರ ಮಾಡಿ, ದೂಷಿಸಿ ಈ ಜನಾಂಗದವರನ್ನು ಕೆಳಮಟ್ಟದಲ್ಲಿ ನೋಡುವುದಕ್ಕೆ ಸಮಾಜ ಪ್ರಯತ್ನ ಮಾಡುತ್ತಿದೆ ಎಂದು ನನಗನ್ನಿಸಿತು. ಈ ಜನಾಂಗದ ಬಗ್ಗೆ ಅಪಪ್ರಚಾರವಾಗಿದ್ದರೂ ಅದೊಂದು ಪ್ರಮಾದವೆಂದು ನಾನಂತೂ ತಿಳಿದುಕೊಂಡಿದ್ದೇನೆ. ಹಾಗೆಯೇ ಇವೊತ್ತು ಮಹಿಳೆಯರ ಓದಿಗಾಗಿ ಸರ್ಕಾರ ಸಾಕಷ್ಟು ಹಣವನ್ನು.....

ಛೇರ್ಮನ್ : ತಾವು ಬೇಗ ಮುಗಿಸಿ.

ಶ್ರೀಮತಿ ದಮಯಂತಿ ಬೋರೇಗೌಡ : ಅಧ್ಯಕ್ಷರೇ ಇಡೀ ಸದನದಲ್ಲಿ ಆಡಳಿತ ಪಕ್ಷದಲ್ಲಿ ಒಬ್ಬ ಮಹಿಳೆಗೆ ಮಾತ್ರ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಆದರೂ ಬೇಗ ಮುಗಿಸುವುದಕ್ಕೆ ತಾವು ಬೆಲ್ ಬಾರಿಸುತ್ತಿದ್ದೀರಿ.

ಶ್ರೀಮತಿ ಮೋಟಮ್ಮ : ಇಡೀ ಸದನದಲ್ಲಿ ಎಂಟು ಜನ ಮಹಿಳಾ ಸದಸ್ಯರಿದ್ದೇವೆ. ನಮ್ಮ ಪ್ರಶ್ನೆಗಳು ಸದನದಲ್ಲಿ ಬಂದಾಗ ಅದಕ್ಕೆ ಸಪ್ಲಿಮೆಂಟರಿ ಕೇಳುವುದಕ್ಕೂ ನಮಗೆ ಅವಕಾಶ ಕೊಡುವುದಿಲ್ಲ. ಆದುದರಿಂದ, ಎಂಟು ಜನ ಮಹಿಳಾ ಸದಸ್ಯರು ಮಾತನಾಡುವಷ್ಟು ಸಮಯವನ್ನು ನನಗೊಬ್ಬಳಿಗೇ ಕೊಡಬೇಕು.

ಛೇರ್ಮನ್ : ಬೇಕಾದರೆ ಇನ್ನೊಬ್ಬ ಮಹಿಳಾ ಸದಸ್ಯರು ಮಾತನಾಡಬಹುದು. ಆದರೆ, ನಿಮಗೆ 15 ನಿಮಿಷಗಳ ಕಾಲಾವಕಾಶ ಕೊಟ್ಟಿದ್ದು, ಈಗ 20 ನಿಮಿಷಗಳಾಗಿದೆ.

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯಾಂಗದಲ್ಲಿ ತಿದ್ದುಪಡಿ ಮಾಡಿ ಮಹಿಳಾ ಶಾಸಕಿಯರಿಗೂ ಶೇಕಡಾ 30ರಷ್ಟು ಅವಕಾಶ ಸಿಗುವಂತೆ ಒತ್ತಾಯಿಸಲಿ.

ಶ್ರೀ ವಾಟಾಳ್ ನಾಗರಾಜ್: ಶ್ರೀಮತಿ ಮೋಟಮ್ಮನವರಿಗೆ ಹೆಚ್ಚು ಹೊತ್ತು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನೂ ಕೂಡ ಒತ್ತಾಯ ಮಾಡುತ್ತಿದ್ದೇನೆ. ನಾವು ಸುಮ್ಮನೆ ಏಕೆ ಮೌನವಾಗಿ ಕುಳಿತಿದ್ದೇವೆಂದರೆ, ಕಾಮಾಲೆ ರೋಗ ಬಂದಿರುವವರ ಕಣ್ಣಿಗೆಲ್ಲಾ ಕಾಣುವುದೆಲ್ಲಾ ಹಳದಿ ಬಣ್ಣ ಎಂದು ಹೇಳುವುದಕ್ಕೆ ನಾವು ಅಪವಾದವಾಗಿ, ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಹಿಳಾ ಸದಸ್ಯರಿಗೆ ಎಷ್ಟು ಹೊತ್ತು ಮಾತನಾಡಿದರೂ ಅವಕಾಶ ಕೊಡಿ.

ಛೇರ್ಮನ್ : ತಾವು ದಯಮಾಡಿ ಬೇಗ ಮುಗಿಸಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ : ನಾವುಗಳು ಮಾತನಾಡುವುದಕ್ಕಿಂತ ಅವರೇ ಮಾತನಾಡಲಿ. ಏಕೆಂದರೆ, ಸರ್ಕಾರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ಮೀಸಲಿಟ್ಟ 78 ಕೋಟಿ ರೂಪಾಯಿಗಳಲ್ಲಿ 9 ಕೋಟಿ ರೂಪಾಯಿಗಳ ಕೆಲಸವನ್ನು ಮಾಡಿಲ್ಲ. ನಾವು ಮಾತನಾಡಿ ಸರ್ಕಾರವನ್ನು ಹೊಗಳುವುದಕ್ಕಿಂತ ಅವರೇ ತಮ್ಮ ಸರ್ಕಾರವನ್ನ ಹೊಗಳಲಿ.

ಶ್ರೀಮತಿ ಮೋಟಮ್ಮ : ಇನ್ನು ಶಾಲೆಯನ್ನು ಮಧ್ಯದಲ್ಲೇ ಬಿಟ್ಟು ಮಕ್ಕಳಿಗೋಸ್ಕರ 'ಪುನರಾರಂಭ' ಯೋಜನೆ ಏನಿದೆ, ಆ ರೀತಿ ಮಧ್ಯದಲ್ಲಿ ಶಾಲೆ ಬಿಟ್ಟ ಮಕ್ಕಳ ಭವಿಷ್ಯ ಹಾಳಾಗುತ್ತದಾದ್ದರಿಂದ ಅವರಿಗೆ ಉತ್ತೇಜನ ಕೊಟ್ಟು ಪುನಃ ಶಾಲೆಗೆ ಹೋಗುವಂತೆ ಅವಕಾಶ ಮಾಡಿಕೊಟ್ಟಿರುವುದು ಇದೊಂದು ಬಹುಮುಖ್ಯವಾದ ಯೋಜನೆಯೆಂದು ಹೇಳಿದರೆ ತಪ್ಪಾಗಲಾರದು. ಇಂತಹ ಯೋಜನೆಗಳು ಬಹಳ ಆಗಬೇಕೆಂದು ನಾನಂತೂ ಬಯಸುತ್ತೇನೆ. ಇವೊತ್ತು ನಿರುದ್ಯೋಗ ಸಮಸ್ಯೆ ನಮ್ಮ ದೇಶದಲ್ಲಿ ಬಹಳವಾಗಿದೆ. ಇವರಿಗಾಗಿ 'ಪುನಶ್ಚೇತನ' ಯೋಜನೆ ಜಾರಿಗೆ ತಂದು ಅವರ ಪ್ರತಿಭೆಗೆ ತಕ್ಕ ತರಬೇತಿ ಕೊಟ್ಟು ಅವರುಗಳು ತಮ್ಮ ಕಾಲ ಮೇಲೆ ನಿಲ್ಲುವಂತೆ ಅವಕಾಶ ಕಲ್ಪಿಸಿಕೊಡುವುದು ಬಹಳ ಮುಖ್ಯ ಎಂದೆನಿಸುತ್ತದೆ. ಇವೊತ್ತು ಜನರಿಗೆ ಸಂಪೂರ್ಣ ಆರೋಗ್ಯ, ಶುಶ್ರೂಷಾ ಮುಂತಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವ ದೃಷ್ಟಿಯಿಂದ ಸಾಕಷ್ಟು ಆಸ್ಪತ್ರೆಗಳನ್ನು ಹೊಸದಾಗಿ ಕೊಟ್ಟಿದ್ದು ಮತ್ತು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗಿದೆ. ಆದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಬರೀ ಆಸ್ಪತ್ರೆಗಳನ್ನು ಪ್ರಾರಂಭಿಸಿದರೆ ಸಾಲದು, ವೈದ್ಯರುಗಳು ಅಲ್ಲಿ ಹೋಗಿ ಕೆಲಸ ಮಾಡಬೇಕು. ಅದರಲ್ಲೂ ಮಲೆನಾಡು ಪ್ರದೇಶದ ವಿಷಯದಲ್ಲಿ ದೊಡ್ಡ ದುರಂತ. ಅಲ್ಲಿ ಆಸ್ಪತ್ರೆಗಳಿದ್ದರೆ ವೈದ್ಯರುಗಳಿರುವುದಿಲ್ಲ. ಈ ಕುರಿತು ಎಷ್ಟೋ ಬಾರಿ ನಾವು ಶಾಸನ ಸಭೆಯಲ್ಲಿ ಚರ್ಚಿಸಿದ್ದೇವೆ. ಹೊಟ್ಟೆ ತುಂಬಿದ ಯಾವುದೇ ವೈದ್ಯರನ್ನು ಮಲೆನಾಡು ಪ್ರದೇಶಕ್ಕೆ ನೇಮಿಸಬೇಡಿ. ಯಾರು ಹೊಟ್ಟೆಪಾಡಿಗೋಸ್ಕರ ಕೆಲಸ ಮಾಡಿ, ನನ್ನ ಹುದ್ದೆಯಿಂದ ನಾನು ಅನ್ನ ತಿನ್ನುತ್ತೇನೆಂದು ಕೆಲಸ ಮಾಡುವುದಕ್ಕೆ ತಯಾರಿದ್ದಾರೋ ಅಂತಹ ವೈದ್ಯರುಗಳನ್ನು ಮಲೆನಾಡು ಪ್ರದೇಶಕ್ಕೆ ನೇಮಿಸಿ.

ನಮ್ಮ ಜಿಲ್ಲೆಯಲ್ಲಿಯೇ ಕೆಲಸ ಮಾಡಿದವರು ಇರುತ್ತಾರೆ. ಅವರನ್ನು ಬಿಟ್ಟು ಬೆಂಗಳೂರಿನಿಂದ ಪೋಸ್ಟ್ ಮಾಡುತ್ತಾರೆ. ಲೋಕಲ್ ವೈದ್ಯರುಗಳನ್ನು ಪೋಸ್ಟಿಂಗ್

ಮಾಡುತ್ತೇನೆಂದು ಹೇಳಿದ್ದರು, ಆದರೆ ಇದುವರೆಗೆ ಲೋಕಲ್ ವೈದ್ಯರುಗಳ ಪೋಸ್ಟಿಂಗ್ ಆಗಿಲ್ಲ. ನಮ್ಮ ಜಿಲ್ಲೆಯಲ್ಲೇ ಸುಮಾರು 20 ಆಸ್ಪತ್ರೆಗಳಲ್ಲಿ ವೈದ್ಯರುಗಳಿಲ್ಲವೆಂದರೆ, ಅದು ನಾವೆಲ್ಲರೂ ತಲೆತಗ್ಗಿಸುವಂಥ ವಿಷಯ. ಹಾಗೆಯೇ ಪ್ರಾಥಮಿಕ ಶಾಲೆಗಳಿಗೆ ಈ ರಾಜ್ಯದಲ್ಲೇ ಪ್ರಪ್ರಥಮಬಾರಿ 18 ಸಾವಿರ ಶಿಕ್ಷಕರ ಹುದ್ದೆಗಳನ್ನು ತುಂಬಲು ಸರ್ಕಾರ ಪ್ರಯತ್ನ ಮಾಡಿದೆ. ಅದನ್ನು ನಾನು ಸ್ವಾಗತಿಸುತ್ತೇನೆ ಮತ್ತು ಸಂತೋಷಪಡುತ್ತೇನೆ. ಆದರೆ ದುರಂತವೇನೆಂದರೆ ನಮ್ಮ ಪ್ರದೇಶಗಳಲ್ಲಿ ಶಿಕ್ಷಕರ ಹುದ್ದೆಗಳು ಯಾವಾಗಲೂ ಖಾಲಿ ಇರುತ್ತದೆ. ಮಲೆನಾಡು ಪ್ರದೇಶ ಒಳ್ಳೆಯ ಸುಂದರವಾದ ತಾಣವೆಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದರೆ ಮಳೆಗಾಲದಲ್ಲಿ ಇಲ್ಲಿದ್ದರೆ ಹೆಂಡತಿ ಮಕ್ಕಳಿಗೆ ಚಳಿ, ಜ್ವರ ಬರುತ್ತದೆಂದು ಹೇಳಿ ಬಯಲು ಸೀಮೆಗೆ ವರ್ಗಾವಣೆ ಮಾಡಿಸಿಕೊಳ್ಳುವಲ್ಲಿ ಶಿಕ್ಷಕರು ಪ್ರಯತ್ನ ಮಾಡುತ್ತಾರೆ. ಆದ್ದರಿಂದ ಆ ತಾಲ್ಲೂಕಿನಲ್ಲಿ ಯಾರು ನೇಮಕವಾಗುತ್ತಾರೆ ಅವರು ನಿವೃತ್ತಿಯಾಗುವವರೆಗೆ ಆ ತಾಲ್ಲೂಕಿನ ಒಂದಲ್ಲ ಒಂದು ಭಾಗದಲ್ಲೇ ಸೇವೆ ಸಲ್ಲಿಸಬೇಕೆಂದು ಕಡ್ಡಾಯ ಮಾಡಿ ಆದೇಶವನ್ನು ಹೊರಡಿಸಬೇಕಾಗುತ್ತದೆ. ಆಗ ಮಾತ್ರ ನಮ್ಮ ಭಾಗದ ಶಿಕ್ಷಕರ ಕೊರತೆಯನ್ನು ನಿಭಾಯಿಸಲು ಸಾಧ್ಯ. 18 ಸಾವಿರ ಪ್ರಾಥಮಿಕ ಶಾಲೆಗಳ ಶಿಕ್ಷಕರ ಹುದ್ದೆಗಳನ್ನು ತುಂಬುವುದರಲ್ಲಿ ಒಂದು ಮಾತನ್ನು ಹೇಳಬೇಕಾಗುತ್ತದೆ. ಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಅವರ ತೀರ್ಮಾನ ಒಳ್ಳೆಯದು. ಆದರೆ ಬೆಳಿಗ್ಗೆ ಅದರ ಬಗ್ಗೆ ಪ್ರಶ್ನೆ ಬಂದಾಗ ನನಗೆ ಬಹಳ ದುಃಖವೆನಿಸಿತು. ಏಕೆಂದರೆ ನಾವು ಏಜ್ಬಾರ್ ನವರಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ. ನಮ್ಮ ಮಕ್ಕಳೇ ಎಂ.ಎ., ಬಿ.ಎಡ್. ಟಿ.ಸಿ. ಹೆಚ್. ಮಾಡಿ ಶಿಕ್ಷಕರೇ ಆಗಬೇಕೆಂದು ಕಾದು ಕುಳಿತುಕೊಂಡಿದ್ದರೆ ಅವರಿಗೆ ಮೆರಿಟ್ ಬೇಕು, ನಿಮಗೆ ಏಜ್ ಬಾರ್ ಆಗಿ ಹೋಗಿದ್ದು ನಿಮಗೆ ಕೆಲಸ ಕೊಡುವುದಿಲ್ಲ, ನಿಮಗೆ ಟೀಚಿಂಗ್ ನಾಲೆಡ್ಜ್ ಮರೆತು ಹೋಗಿದೆ ಎಂದು ಹೇಳಿದರೆ ಅದು ಯಾವ ಧರ್ಮ? ಆ ರೀತಿ ಆಗಲಾರದು. ಏಕೆಂದರೆ ರ್‍ಯಾಂಕ್ ಬಂದವರೆಲ್ಲರೂ ಒಳ್ಳೆಯ ಶಿಕ್ಷಕರಲ್ಲ. ಕೆಲವರು ಚಿನ್ನದ ಪದಕವನ್ನು ತೆಗೆದುಕೊಂಡಿದ್ದವರು ನಮಗೆ ಟೀಚರ್, ಲೆಕ್ಚರರ್ ಆಗಿದ್ದರು, ಅವರ ಪಾಠವನ್ನು ಮಾಡುತ್ತಿದ್ದರೆ ನಮಗೆ ನಿದ್ರೆ ಬರುತ್ತಿತ್ತು. ಟೀಚಿಂಗ್ ಎನ್ನುವುದೂ ಸಹ ಒಂದು ಕಲೆ. ಎಲ್ಲರಿಗೂ ಆ ಕಲೆ ಇರುವುದಿಲ್ಲ. ಆದ್ದರಿಂದ ಏಜ್ ಮೆರಿಟನ್ನು ಕನ್ಸಿಡರ್ ಮಾಡಬೇಕೆಂದು ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇದರ ಜೊತೆಗೆ ಗ್ರಾಮಾಂತರ ಪ್ರದೇಶದ ವಿದ್ಯುದ್ದೀಕರಣಕ್ಕೆ ಆದ್ಯತೆಯನ್ನು ಕೊಡಬೇಕು. ನಮ್ಮ ಭಾಗದ ಸುಮಾರು ಇನ್ನೂ 50 ಪರ್ಸೆಂಟ್ ಗ್ರಾಮಗಳಿಗೆ ವಿದ್ಯುದ್ದೀಕರಣವಾಗಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾಗುತ್ತಾ ಬಂತು ಆದರೆ ನಮಗೆ ಇನ್ನು ವಿದ್ಯುತ್ತನ್ನು ಒದಗಿಸಲು ಆಗಿಲ್ಲವೆಂದು ಜನರು ಮಾತನಾಡಿಕೊಂಡು ನಗುತ್ತಾರೆ. ಆ ಮಾತನ್ನು ತಡೆಯಬೇಕಾದರೆ ನಮ್ಮಲ್ಲಿರುವ ಸಮಸ್ಯೆಗಳೇನಿದೆ ಅದನ್ನು ತೊಡೆದು ಹಾಕಿ ಈ ಉಪಗ್ರಾಮಗಳ ವಿದ್ಯುದ್ದೀಕರಣಕ್ಕೆ ಸಾಕಷ್ಟು ಮುಂದಾಗಬೇಕಾಗುತ್ತದೆ ಸರ್ಕಾರ ಅದಕ್ಕೆ ಬೇಕಾದ ಮೆನ್ ಅಂಡ್ ಮೆಟೀರಿಯಲ್‌ನ್ನು ಕೊಟ್ಟು ಸಾಕಷ್ಟು ಜಾಗ್ರತೆಯಾಗಿ ಕೆಲಸವನ್ನು ಮುಗಿಸಲು ಹೇಳಿದರೆ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುದ್ದೀಕರಣವನ್ನು ಚೆನ್ನಾಗಿ ಮಾಡಲು ಸಾಧ್ಯ. ಮತ್ತೊಂದು ಕಳಕಳಿಯ ಮನವಿ ಏನೆಂದರೆ ಈ ರಾಜ್ಯದಲ್ಲಿ ಒಳ್ಳೆಯ ಯೋಜನೆಗಳಿದ್ದು ಅದು ಜನರಿಗೆ ತಲುಪಬೇಕು ಎನ್ನತಕ್ಕ ಕೆಲಸವನ್ನು ನಾವು ಮತ್ತು ಆಡಳಿತ ಯಂತ್ರವೇನಿದೆ, ಅಫಿಷೀಯಲ ಮೆಷಿನರಿ ಏನಿದೆ ಅದು ಕೆಲಸ ಮಾಡಬೇಕಾಗುತ್ತದೆ. ಅದು ಮಾಡದಿದ್ದರೆ ಜನರಿಗೆ ಈ ಯೋಜನೆಯ ಫಲವನ್ನು ತಲುಪಿಸಲು ಸಾಧ್ಯವಿಲ್ಲ. ಆ ದೃಷ್ಟಿಯಲ್ಲಿ ಅಫಿಷೀಯಲ ಮೆಶಿನರಿ ಏನು ಇದೆ, ಅದು ಸಚಿವಾಲಯದ ಮಟ್ಟದಲ್ಲಿರಬಹುದು, ತಾಲ್ಲೂಕ ಮಟ್ಟದ ಅಧಿಕಾರಿಗಳು ಇರಬಹುದು, ಜಿಲ್ಲಾಮಟ್ಟದ ಅಧಿಕಾರಿಗಳು ಇರಬಹುದು ಅವರನ್ನು ಸರ್ಕಾರ ಚುರುಕುಮಾಡಬೇಕಾಗುತ್ತದೆ. ಯಾರೇ ಅಧಿಕಾರಿಗಳು ತಪ್ಪು ಮಾಡಿದರೂ ಸಹ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮೊನ್ನೆ ತಮ

ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಜಿಲ್ಲಾ ಅಭಿವೃದ್ಧಿ ಆಂಧೋಳನವನ್ನು ಉದ್ಘಾಟನೆ ಮಾಡಿದೆ. ಆಗ ನಾನು ಅಧಿಕಾರಿಗಳಿಗೆ ನಿಮಗೆ ಯಾರೂ ಸರ್ಟಿಫಿಕೇಟನ್ನು ಒಳ್ಳೆಯ ಕೆಲಸ ಮಾಡಿದ್ದೀರೆಂದು ಕೊಡಬೇಕಾಗಿಲ್ಲ, ನಿಮಗೆ ಆತ್ಮ ಸಂತೋಷ ಒಂದೇ ಬೇಕಾಗಿರುವುದು, ಅದೊಂದೇ ಉಳಿಯುವುದು, ಜನರು ತಮ್ಮ ಬಗ್ಗೆ ಎಲ್ಲಿಯವರೆಗೆ ನೆನಸಿಕೊಳ್ಳುತ್ತಾರೋ ಅಲ್ಲಿಯವರೆಗೆ ಮಾತ್ರ ನಿಮಗೆ ಆತ್ಮಸಂತೋಷ ಸಿಗುತ್ತದೆ. ಆ ದೃಷ್ಟಿಯಲ್ಲಿ ಜನರು ಮೆಚ್ಚುವ ರೀತಿಯಲ್ಲಿ ಕೆಲಸಮಾಡಿ. ಈ ಯೋಜನೆಯ ಫಲಗಳನ್ನು ಜರಿಗೆ ತಲುಪಿಸಿ. ನೀವು ಎಲ್ಲಿದ್ದರೇನು ಕೊನೆಗೆ ನಾನು ಇಂತಹ ಕಡೆ ಜಿಲ್ಲಾಧಿಕಾರಿಯಾಗಿ, ತಹಶೀಲ್ದಾರರಾಗಿ ಬಿ.ಡಿ.ಓ. ಆಗಿದ್ದೆ, ಆ ಜನರು ಎಷ್ಟು ನನ್ನನ್ನು ಗೌರವಿಸುತ್ತಿದ್ದರು, ಎಷ್ಟೊಂದು ವಿಶ್ವಾಸದಿಂದ ಕಾಣುತ್ತಿದ್ದರು ಎನ್ನತಕ್ಕ ಒಂದು ಸಂತೋಷ ತೃಪ್ತಿ ನಿಮಗೆ ಬರಬೇಕಾಗಿದ್ದರೆ ನೀವು ಜನರ ಸಲುವಾಗಿ ಹಗಲು ಇರುಳು ಕೆಲಸವನ್ನು ಮಾಡಬೇಕಾಗುತ್ತದೆಂದು ಹೇಳಿದ್ದೇನೆ. ಇವತ್ತೂ ಸಹ ಆ ಮಾತನ್ನು ಹೇಳುತ್ತಿದ್ದೇನೆ. ಈ ದೃಷ್ಟಿಯಲ್ಲಿ ಸರ್ಕಾರ ಅವರನ್ನು ಚುರುಕುಗೊಳಿಸಿ, ಜನರ ಕೆಲಸವನ್ನು ಮಾಡುವುದಕ್ಕೆ ಮುಂದಾಗಬೇಕೆಂದು ಹೇಳಿ, ಈ ರಾಜ್ಯಪಾಲರ ಭಾಷಣದ ಮೇಲೆ ನಾಲ್ಕು ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ವಿಧಾನ ಮಂಡಲದಲ್ಲಿ ರಾಜ್ಯಪಾಲರ ಮುಖಾಂತರ ಮಾಡಿಸಿದಂಥ ಭಾಷಣವನ್ನು ವಿರೋಧಿಸುತ್ತಾ ನನ್ನ ಎರಡು ಮಾತುಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿಜವಾಗಿಯೂ ರಾಜ್ಯಪಾಲರ ಭಾಷಣವೆಂದರೆ, ಹೋದವರ್ಷ ಸರ್ಕಾರದವರು ಹಾಕಿಕೊಂಡಂಥ ಯಾವಯಾವ ಕಾರ್ಯಕ್ರಮಗಳನ್ನು ಮಾಡಿರುವರು ಮತ್ತು ಮುಂದಿನ ವರ್ಷ ಸರ್ಕಾರದವರು ಯಾವ್ಯಾವ ಕಾರ್ಯಕ್ರಮಗಳನ್ನು ಮಾಡಬೇಕೆಂದು ಇಟ್ಟುಕೊಂಡಿದ್ದಾರೋ ಅದರ ಬಗ್ಗೆ ವಿಶ್ಲೇಷಣೆಯನ್ನು ಕೊಡುತ್ತಿರುತ್ತಾರೆ. ಆದರೆ ನಿಜವಾಗಿಯೂ ಇದನ್ನು ನೋಡಿದಾಗ ಯಾವುದೇ ಹೊಸದಾದ ಕಾರ್ಯಕ್ರಮವನ್ನು ರಾಜ್ಯಪಾಲರ ಮುಖಾಂತರ ಈ ಸರ್ಕಾರದವರು ಹಾಕಿಕೊಂಡಿಲ್ಲವೆಂದು ನಾನು ಹೇಳುತ್ತಿದ್ದೇನೆ. ಮುಖ್ಯವಾಗಿ ನಾನು ನಾಲ್ಕು ವಿಷಯಗಳನ್ನು ಮಾತ್ರ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಉತ್ತರ ಕರ್ನಾಟಕದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವುದೇ ಒಂದು ವಿಷಯ ಇಲ್ಲ ಎಂದು ವಿಷಾದದಿಂದ ಹೇಳಬಯಸುತ್ತೇನೆ. ಮೊದಲನೆಯದಾಗಿ ಉತ್ತರ ಕರ್ನಾಟಕದಲ್ಲಿ ಒಂದು ಹೈಕೋರ್ಟ್ ಪೀಠವನ್ನು ಧಾರವಾಡ-ಹುಬ್ಬಳ್ಳಿಯಲ್ಲಾಗಲಿ ಅಥವಾ ಬೆಳಗಾವ್ದಲ್ಲಾಗಲಿ ಸ್ಥಾಪಿಸಬೇಕೆಂದು ಅವರ ಬೇಡಿಕೆ ಇದೆ. ಆ ಬೇಡಿಕೆಯನ್ನು ಪರಿಶೀಲಿಸುವುದಾಗಿ ಹಿಂದಿನ ಮುಖ್ಯ ಮಂತ್ರಿಗಳು ಪದೇ ಪದೇ ಹೇಳಿದ್ದರು. ಆದರೆ ಅದರ ಬಗ್ಗೆ ಯಾವುದೇ ಒಂದು ಚಕಾರ ಶಬ್ದವೂ ಸಹ ಈ ರಾಜ್ಯಪಾಲರ ಭಾಷಣದಲ್ಲಿ ಇರುವುದಿಲ್ಲ, ಇವತ್ತು ನಿಜವಾಗಿಯೂ ನೋಡಿದಾಗ ಉತ್ತಕ ಕರ್ನಾಟಕದ ಅತಿ ಮುಖ್ಯವಾದ ಬೇಡಿಕೆಯ ಬಗ್ಗೆ ಸರ್ಕಾರದವರು ಎಷ್ಟೊಂದು ಆಸಕ್ತಿ ವಹಿಸುತ್ತಿದ್ದಾರೆ ಎನ್ನುವುದು ತಿಳಿದು ಬರುತ್ತದೆ. ಎರಡನೆಯದಾಗಿ ಬೆವಗಾವಿನಲ್ಲಿ ವಿಶ್ವ ವಿದ್ಯಾನಿಲಯವನ್ನು ಆರಂಭಿಸುವುದಾಗಿ ಮಾನ್ಯ ಮುಖ್ಯ ಮಂತ್ರಿಗಳು ಭರವಸೆಗಳನ್ನು ಕೊಟ್ಟರು. ಪಿ ಬಿ ಕೋರ್ಸ್ ಬೆಳಗಾಂನಲ್ಲಿರುವುದರಿಂದ ವಿಶ್ವವಿದ್ಯಾನಿಲಯ ಅತಿ ಅವಶ್ಯಕವಾಗಿರತ್ತದೆ. ಬೆಳಗಾವ್ ಜಿಲ್ಲೆ ಹಾಗೂ ಬಿಜಾಪುರ ಜಿಲ್ಲೆ ಕೂಡಿಕೊಂಡು ಇವತ್ತಿನ ದಿವಸ ಬೆಳಗಾನಲ್ಲಿ ವಿಶ್ವವಿದ್ಯಾನಿಲಯವನ್ನು ಮಾಡಬೇಕೆಂದು ಇದ್ದೇವೆ. ಅದರ ಬಗ್ಗೆ ಯಾವುದೇ ಒಂದು ಪ್ರಸ್ತಾಪ ರಾಜ್ಯಪಾಲರ ಭಾಷಣದಲ್ಲಿರುವುದಿಲ್ಲ, ಅದೂ ಅಲ್ಲದದೆ, ಹೋದ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಒಂದು ತಾಂತ್ರಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದಾಗಿ ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿತ್ತು. ಆದರೆ ಇವತ್ತು ಬೆಳಗಾವಿನಲ್ಲಿ ತಾಂತ್ರಿಕ

ವಿಶ್ವ ವಿದ್ಯಾಲಯ ಪ್ರಾರಂಭ ಮಾಡುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ನಮ್ಮ ಹಿಂದಿನ ಶಿಕ್ಷಣ ಮಂತ್ರಿಗಳು ತುಮಕೂರಿನಲ್ಲಿ ಮಹಿಳಾ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವುದಾಗಿ ಹೇಳಿದ್ದರು. ಆಶ್ವಾಸನೆ ಕೊಟ್ಟಿದ್ದರೂ ಸಹ ಇವತ್ತಿನವರೆಗೂ ಅದರ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಹೇಳಲಿಚ್ಛಿಸುತ್ತೇನೆ. ಅದರ ಬಗ್ಗೆ ಏನು ಕ್ರಮ ಕೈಗೊಳ್ಳುತ್ತಾರೆಂಬುದನ್ನು ತಿಳಿಸಿಕೊಡಬೇಕು. ಮತ್ತೊಂದು ವಿಷಯ ಬೆಳಗಾವಿಯಲ್ಲಿ ಕನ್ನಡಿಗರು ವೃತ್ತಿಗೆ ವಲಸೆ ಹೋಗುವುದನ್ನು ತಪ್ಪಿಸುವುದಕ್ಕಾಗಿ ಹೌಸಿಂಗ್ ಬೋರ್ಡಿನಿಂದ ಹೆಚ್ಚಿನ ಮನೆಗಳನ್ನು ಕಟ್ಟಿಸಿ ಕೊಡಲಾಗುವುದು ಎಂದು ಇದೇ ವಿಧಾನ ಸಭೆಯಲ್ಲಿ ತಿಳಿಸಲಾಗಿತ್ತು. ಅದರ ಬಗ್ಗೆ ಯಾವುದೇ ಒಂದು ಕ್ರಮ ಕೈಗೊಂಡಿಲ್ಲ, ಅವರ ಭಾಷಣದಲ್ಲಿಯೂ ಸಹಿತ ಯಾವುದೇ ಚಕಾರ ಶಬ್ದ ಇರುವುದಿಲ್ಲ. ಇದೂ ಅಲ್ಲದೆ ಬೆಂಗಳೂರಿನಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಮಾಡುವುದಾಗಿ ಹಿಂದಿನ ವಿಧಾನ ಸಭೆಯ ರಾಜ್ಯಪಾಲರ ಭಾಷಣದಲ್ಲಿ ಹೇಳಲಾಗಿತ್ತು. ಆದರೆ ಅದರ ಬಗ್ಗೆಯೂ ಸಹಿತ ಇವತ್ತಿನ ದಿವಸ ಪ್ರಸ್ತಾಪ ಮಾಡಿಲ್ಲ. ಆರೋಗ್ಯ ವಿಶ್ವವಿದ್ಯಾನಿಲಯವನ್ನು ಏಕೆ ಪ್ರಾರಂಭ ಮಾಡಿಲ್ಲ, ಮುಂದಾದರೂ ಮಾಡುತ್ತೇವೆಂದು ತಿಳಿಸಬೇಕು.

ಸನ್ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಎಂದರೆ ಬರೀ ಭರವಸೆಗಳನ್ನು ಕೊಡುವ ಸರ್ಕಾರ ಎಂದು ನಾನು ತಮ್ಮ ಮುಂದೆ ಹೇಳುತ್ತೇನೆ. ಎಲ್ಲೆಲ್ಲಿ ಹೋಗುತ್ತಾರೆ ಅಲ್ಲಲ್ಲಿ ಭರವಸೆಗಳನ್ನು ಕೊಡುತ್ತಾರೆ ಆ ಭರವಸೆಗಳನ್ನು ಈಡೇರಿಸುವುದಕ್ಕೆ ಪ್ರಯತ್ನ ಮಾಡಿರುವುದಿಲ್ಲ. ಸನ್ಮಾನ್ಯ ವೀರೇಂದ್ರಪಾಟೀಲರಿದ್ದಾಗ, ರಾಜ್ಯದಲ್ಲಿ ಸುಮಾರು 18 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಜೂನ್ ತಿಂಗಳೊಳಗೆ ತುಂಬಲಾಗುವುದು ಎಂದು ಹೇಳಿದ್ದರು. ಇವತ್ತಿನ ದಿವಸ 1:5ರ ಪ್ರಕಾರ 26 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಸ್ಯಾಂಕ್ಷನ್ ಪೋಸ್ಟ್ 18,600 ಇದ್ದಾವೆ, ಆದರೆ ೧-೫೦ರ ಪ್ರಕಾರ ೨೬ ಸಾವಿರ ಜನ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ 26 ಸಾವಿರ ಶಿಕ್ಷಕರನ್ನು ತುಂಬುವ ಸರ್ಕಾರ, ಶಾಲೆ ಬಿಟ್ಟ ಮಕ್ಕಳನ್ನೂ ಮರು ಕಳಿಸುವ ಪ್ರಯತ್ನ ಮಾಡುತ್ತೇನೆಂದು ಹೇಳುತ್ತಾರೆ. ಇದ್ದ ಮಕ್ಕಳಿಗೆ ನೀವು ಮೊದಲು ವಿದ್ಯಾಭ್ಯಾಸ ಕೊಡಿ ಆ ನಂತರ ಉಳಿದ ಮಕ್ಕಳನ್ನು ಕರೆದು ಕೊಂಡು ಬನ್ನಿ ನಂತರ ನೀವೇನಾದರೂ ಮಾಡಿ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಅದೂ ಅಲ್ಲದೆ ಇವತ್ತಿನ ದಿವಸ ಇವರು ಏನು ಅಕ್ಷಯ ಯೋಜನೆ ಎಂಬ ಯೋಜನೆಯನ್ನು ಹೋದ ವರ್ಷ ತೆಗೆದುಕೊಂಡು ಬಂದರು. ಅಕ್ಷಯ ಯೋಜನೆ ತಂದಾಗ ಸುಮಾರು 80ಕೋಟಿ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿಟ್ಟರೂ, ಈ ಯೋಜನೆಗೆ ಖರ್ಚು ಮಾಡಿದ ಹಣ ಎಷ್ಟು ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಸುಮಾರು ಎರಡು ಕೋಟಿಯಷ್ಟು ಹಣ ಮಾತ್ರ ಈ ಯೋಜನೆಗೆ ಖರ್ಚು ಮಾಡಿದ್ದೀರಿ. 93Ë94ರಲ್ಲಿ ಕೇಳಿದ ಹಣ ಇದುವರೆಗೂ ಬಿಡುಗಡೆ ಆಗಿಲ್ಲ. ಅದನ್ನು ಬೇರೆ ರೂಪದಲ್ಲಿ ಪರಿವರ್ತಿಸಲಾಗುವುದು ಎಂದು ಹೇಳುತ್ತಾರೆ. ನಾನು ಮುಖ್ಯವಾಗಿ ಹೇಳುವುದೇನೆಂದರೆ ಇವತ್ತು ಅವರು ಕೊಟ್ಟಂತಹ ಆಶ್ವಾಸನೆಗಳನ್ನು ಯಾವುದೇ ಒಂದನ್ನೂ ಈಡೇರಿಸಿಲ್ಲ ಎಂದು ಹೇಳಬಹುದು.

ಸನ್ಮಾನ್ಯ ಅಧ್ಯಕ್ಷರೇ, ತಿರುಪತಿಯಲ್ಲಿದ್ದಂತಹ ತಿಮ್ಮಪ್ಪನಮಾದರಿಯಲ್ಲಿ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿಪಡಿಸುವುದಾಗಿ ಹಿಂದಿನ ಕಂದಾಯ ಮಂತ್ರಿಗಳಾಗಿದ್ದ ಶ್ರೀಮಾನ್ ರಾಜಶೇಖರ ಮೂರ್ತಿಯವರು ಹೇಳಿದರು.

ಯಲ್ಲಮ್ಮನ ಗುಡ್ಡ ಅದೊಂದು ಎರಡನೇ ತಿರುಪತಿ. ನಮ್ಮ ಕರ್ನಾಟಕ ರಾಜ್ಯದ ತಿರುಪತಿ ಆಗುತ್ತದೆ ಎಂದು ಹೇಳಿದಾಗ ಇಡೀ ಉತ್ತರ ಕರ್ನಾಟಕದ ಜನ ಬಹಳ ಸಂತೋಷ ಪಟ್ಟರು. ರಾಜ್ಯ ಸರ್ಕಾರದವರು ನಮ್ಮ ಯಲ್ಲಮ್ಮನ ಗುಡ್ಡವನ್ನು ಅಭಿವೃದ್ಧಿ ಪಡಿಸುವ ಕೆಲಸಕ್ಕೆ ಸರ್ಕಾರದವರು ಹೆಚ್ಚಿನ ಸಹಾಯ ಮಾಡಲಿಲ್ಲ. ಭಕ್ತರಿಂದ

ಬರುವಂತಹ ಒಂದು ರೂಪಾಯಿ ಎರಡು ರೂಪಾಯಿ ಹಣವನ್ನು ವಸೂಲಿ ಮಾಡಿ ಆ ಟ್ರಸ್ಟ್ ಕಮಿಟಿಯವರು ಕೆಲವು ಕೆಲಸಗಳನ್ನು ಮಾಡುತ್ತಿದ್ದಾರೆ. ಅದು ಎಷ್ಟು ಸಾಧ್ಯ ಇದೆ. ನಿಜವಾಗಿ ಇವತ್ತಿನ ದಿವಸ ಈ ಸರ್ಕಾದವರು ಆದ್ಯತೆಯ ಮೇಲೆ ಆ ಯಲ್ಲಮ್ಮನ ಗುಡ್ಡಕ್ಕೆ ಹೆಚ್ಚಿಗೆ ಸಹಾಯ ಮಾಡಿ ಎಲ್ಲಾ ರೀತಿಯಿಂದ ತಿರುಪತಿಯಲ್ಲಿರುವಂತಹ ಎಲ್ಲಾ ಸಹಾಯ ಸವಲತ್ತುಗಳನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ಟೂರಿಸಂ ಇಲಾಖೆ ಮೈಸೂರು, ಬೆಂಗಳೂರು ಇಲ್ಲೇ ಮೂರು ನಾಲ್ಕು ಕಡೆ ಸೀಮಿತವಾಗಿದೆ. ಉತ್ತರ ಕರ್ನಾಟಕ ಅಂದರೆ ಆ ಭಾಗ ಅಭಿವೃದ್ಧಿ ಪಡಿಸಲು ಹಿಂದೆ ಸರಿಯುತ್ತಾರೆ. ತಮಗೆ ಗೊತ್ತಿರುವಂತೆ ಶ್ರೀ ಕ್ಷೇತ್ರ ಸೋಗಲ ಇದೆ. ಎಸ್ಟಿಮೇಟ್ ಕಮಿಟಿಯವರು ಕೆಲವು ಸಲಹೆಗಳನ್ನು ಮಾಡಿದರು. ಅಲ್ಲಿ ರಾಷ್ಟ್ರೀಯ ಉದ್ಯಾನ ಮಾಡಬೇಕು, ಅಲ್ಲಿ ಅರಣ್ಯ ಬೆಳೆಸಬೇಕು. ಪ್ರವಾಸಿಗರ ಅನೂಕೂಲಕ್ಕಾಗಿ ಯಾತ್ರಿಕ ನಿವಾಸಗಳನ್ನು ತೆಗೆಸಬೇಕು ಎಂದು ಸಲಹೆ ಮಾಡಿದರೂ ಸರ್ಕಾರದವರು ಇವತ್ತು ತನಕೇ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ.

ಒಂದು ಕಮಿಟಿಯಲ್ಲಿ ಸಲಹೆ ಮಾಡಿದಾಗ ಸರ್ಕಾರದವರು ಆ ಸಲಹೆಯನ್ನು ಕ್ಯಾರೀ ಔಟ್ ಮಾಡಬೇಕು. ಅದನ್ನು ಕಾರ್ಯರೂಪಕ್ಕೆ ತರದೆ ಇದ್ದಲ್ಲಿ ಅದು ಉಪಯೋಗ ಇಲ್ಲ. ಇವತ್ತಿನ ದಿವಸ ಕಮಿಟಿ ಇದ್ದರೇನು ಇಲ್ಲದಿದ್ದರೇನು ಎಂಬ ವಿಚಾರ ಬರುತ್ತದೆ. ತಾವು ವಿಚಾರ ಮಾಡಬೇಕು ಉತ್ತರ ಕರ್ನಾಟಕದ ಪ್ರವಾಸಿಗರ ಯಾತ್ರಿಕರ, ಪ್ರವಾಸಿಗರ ಮುಖ್ಯ ಕ್ಷೇತ್ರವಾದಂತಹ ಸೋಗಲವನ್ನು ಹಾಗೂ ಗೋಕಾಕದಲ್ಲಿರುವ ಒಂದು ಕೂಗಿ ಕೊಳವನ್ನು ಅಭಿವೃದ್ಧಿ ಪಡಿಸಬೇಕೆಂದು ನಾವು ಪದೇ ಪದೇ ಪ್ರವಾಸಿ ಇಲಾಖೆಗೆ ಹೇಳುತ್ತಿದ್ದೇವೆ. ಅವರು ನಿಮ್ಮದು ಬಿ ಕ್ಲಾಸಿನಲ್ಲಿ ಕೂಡಿದೆ ಎಂದು ಹೇಳುತ್ತಾರೆ. ಮೈಸೂರು ಬೆಂಗಳೂರು ಎ ಕ್ಲಾಸಿನಲ್ಲಿ ಕೂಡೂತ್ತಾವೆಯೇ ವಿನಹ ನಮ್ಮಲ್ಲಿ ಯಾವುವೂ 'ಎ' ಕ್ಲಾಸಿನಲ್ಲಿರುವ ಕೆಲಸಗಳು ಮುಗಿಯಬೇಕಾದರೆ ಇನ್ನು 10 ವರ್ಷಗಳು ಬೇಕು. ಆ 10 ವರ್ಷದಲ್ಲಿ ಉತ್ತರ ಕರ್ನಾಟಕದ ಯಾವುದೇ ಕೆಲಸಗಳು ಆಗುವುದಿಲ್ಲ ಎಂದು ನಾನು ಹೇಳುತ್ತೇನೆ. ಹೀಗಾಗಿ ಉತ್ತರ ಕರ್ನಾಟಕದ ಜನರು ಈ ಸರ್ಕಾರದ ಬಗ್ಗೆ ಬೇಸರ ಪಡುತ್ತಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಹೊಸ ಸರ್ಕಾರ ಬಂದ ನಂತರ ಹೇಳಿದರು, ಸರ್ಕಾರದ ವಿವಿಧ ಇಲಾಖೆಗಳ ಎಲ್ಲಾ ಕಾರ್ಯಕ್ರಮ ಮತ್ತು ಚಟುವಟಿಕೆಗಳ ಮೇಲೆ ತಾಲ್ಲೂಕು ಮಟ್ಟದವರೆಗೂ ಕಟ್ಟುನಿಟ್ಟಾದ ಮತ್ತು ನಿಯಮಿತವಾದ ಮೇಲ್ವಿಚಾರಣೆ ನಡೆಸುವುದಕ್ಕಾಗಿ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು ವ್ಯಾಪಕವಾಗಿ ಪ್ರವಾಸ ಮಾಡುತ್ತಿದ್ದಾರೆ ಹಾಗೂ ನಿಯತಕಾಲಿಕವಾಗಿ ಪರಿಶೀಲಿಸಿ ಕಾರ್ಯದಲ್ಲಿ ಸಕ್ರಿಯವಾಗಿ ತೊಡಗಿದ್ದಾರೆ. ಅಧ್ಯಕ್ಷರೇ, ನಮ್ಮ ಬೆಳಗಾಂ ಜಿಲ್ಲೆಗೆ ನಮ್ಮ ಲೇಬರ್ ಮಿನಿಸ್ಟರ್ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು. ಅವರು ಜಿಲ್ಲಾ ಉಸ್ತುವಾರಿ ಸಚಿವರಿದ್ದರೆ ಅವರನ್ನು ಒಂದು ಗಂಟೆ ಮೀಟಿಂಗ್ ಮಾಡಬೇಕಾದರೆ ಅವರನ್ನು ಹಿಡಿದುಕೊಂಡು ಬರಬೇಕಾಯಿತು. ಅವರನ್ನು ಹಿಡಿದುಕೊಂಡು ಬಂದು ಅವರನ್ನು ಕೂರಿಸಿ ಒಂದು ಮೀಟಿಂಗ್ ಮಾಡುವುದಕ್ಕೆ ಎರಡು ವರ್ಷಬೇಕಾಯಿತು. ಇಂತಹದ್ದರಲ್ಲಿ ಇವತ್ತಿನ ದಿವಸ ಇವರು ಏನಾದರೂ ಕೆಲಸ ಮಾಡುತ್ತಾರಾ ಎಂದು ವಿಚಾರ ಮಾಡಬೇಕಾಯಿತು. ಬೇರೆ ಮಿನಿಸ್ಟರ್ ಬಿಡಿ ನಮ್ಮ ಮುಖ್ಯ ಮಂತ್ರಿಗಳು ನಮ್ಮ ಬೆಳಗಾಮ್ ಜಿಲ್ಲೆಗೆ ಬಂದರು. ನಮ್ಮ ಬೆಳಗಾಮ್ ಜಿಲ್ಲೆಗೆ ಬಂದಾಗ ಎಲ್ಲಾ ಜಿಲ್ಲಾ ಶಾಸಕರನ್ನು ಕರೆದರು. ಕರೆದು ನಿಮ್ಮ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ವಿಚಾರಿಸಲಾಗುವುದು ಎಂದು ಹೇಳಿ, ಈಗಾಗಲೇ 3 ಗಂಟೆ ಆಯಿತು ನಾನು ಬಿಜಿ ಇದ್ದೇನೆ, ಈಗ ನಾನು ಹೋಗುತ್ತೇನೆ ಎಂದು ಹೇಳಿ ರಾತ್ರಿ 11 ಗಂಟೆಗೆ ಕರೆದರು. 11 ಗಂಟೆಗೆ ಕರೆದು 10 ನಿಮಿಷ ಕೂಡ ಕೂರಲಿಲ್ಲ, ನಮ್ಮ ಜಿಲ್ಲಾಧಿಕಾರಿಗೆ ಹೇಳಿದರು, ನಿಮ್ಮ ಬೆಳಗಾವ್ ಜಿಲ್ಲೆಯಲ್ಲಿ ನಾನು ಸಾಕಷ್ಟು ಗೋಬರ್ ಗ್ಯಾಸ್ ಪ್ಲಾಂಟ್ಗಳನ್ನು ಕಟ್ಟಿಸಲಿದ್ದೇನೆ. ನೀರಿನ

ಪ್ರಾಬ್ಲಮ್ ಇಲ್ಲ ಎಂದು ಹೇಳಿದರು. ನಮಗೆ ಊಟಕ್ಕೆ ತಡವಾಗುತ್ತದೆ, ಬೆಳಗಾವ್ ಕ್ಲಬ್ನಲ್ಲಿ ಊಟ ಇದೆ ಎಂದು ಹೇಳುತ್ತಾರೆ. ಆ ಬೆಳಗಾವ್ ಕ್ಲಬ್ ಬಗ್ಗೆ ಹೆಚ್ಚಿಗೆ ಒಂದು ಲಕ್ಷ ಇದೆಯೇ ಹೊರತು ಯಾವುದೇ ಅಭಿವೃದ್ಧಿಯನ್ನು ಇವತ್ತಿನ ದಿವಸ ಮಾಡಲಿಲ್ಲ. ಹಾಗಾಗಿ ಅಲ್ಲಿ ಹಾಜರಿದ್ದಂತಹ ಕೆಲವು ಅಧಿಕಾರಿಗಳು ಹೇಳಿದರು ಮುಖ್ಯ ಮಂತ್ರಿಗಳು ಬಂದು ಎಷ್ಟೊಂದು ಸುಧಾರಣೆಗಳನ್ನು ಮಾಡುತ್ತಾರೆಂದು ತಿಳಿದುಕೊಂಡಿದ್ದೆವು. ಯಾವುದೇ ಒಂದು ವಿಷಯದ ಬಗ್ಗೆ ವಿವರವಾಗಿ ಏನೂ ಮಾಡಲಿಲ್ಲ ಎಂದು ಹೇಳಬಹುದು. ಅದಲ್ಲದೆ ಇವತ್ತಿನ ದಿವಸ ನಮ್ಮ ಜಿಲ್ಲೆಯಲ್ಲಿ ಕೇವಲ ಎರಡು ಸಾರಿ ಮಾತ್ರ ಜಿಲ್ಲಾ ಮೀಟಿಂಗ್ಗಳು ನಡೆದವು. ಅದೇ ಪ್ರಕಾರ ಕಾಂಗ್ರೆಸ್ಸಿನ ಒಳಜಗಳದಿಂದ ಯಾವುದೇ ಅಭಿವೃದ್ಧಿ ಕಾರ್ಯಗಳ ಬಗ್ಗೆಯಾಗಲಿ ಬೇರೆ ವಿಷಯಗಳ ಬಗ್ಗೆಯಾಗಲಿ ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಯಾವುದೇ ಮೀಟಿಂಗ್‌ಗಳು ನಡೆದಿಲ್ಲ.

ಅದೂ ಅಲ್ಲದೇ ಇವತ್ತಿನ ದಿವಸ ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಸಚಿವರಿಗೆ ನೀತಿ ಸಂಹಿತೆ ಕಡ್ಡಾಯ ಎಂದು ಹೇಳಿದ್ದಾರೆ. ಸಚಿವರು ಇತರೇ ಸಿಬ್ಬಂದಿಯಂತೆ ಬೆಳಿಗ್ಗೆ 10-30 ರಿಂದ ಮಧ್ಯಾಹ್ನ 1-30 ರವರೆಗೆ ಕಛೇರಿಗೆ ಹಾಜರಾಗಿ ತಮ್ಮ ಕೆಲಸ ಕಾರ್ಯಗಳನ್ನು ಗಮನಿಸಬೇಕು. ಮಧ್ಯಾಹ್ನ 3-30 ರಿಂದ 5-30 ರವರೆಗೆ ಸಂದರ್ಶಕರುಗಳನ್ನು ಭೇಟಿಯಾಗಬೇಕು. ನಿಗದಿತವಾಗಿ ಕಛೇರಿ ಕೆಲಸಗಳು ಆಗಬೇಕು. ಹಾಗೂ ಸಾರ್ವಜನಿಕರ ಕೆಲಸಗಳನ್ನು ಮಾಡಬೇಕು. ಈ ಬಗ್ಗೆ ಸಚಿವರು ಇತರರಿಗೆ ಮಾದರಿಯಾಗುವಂತೆ ಮಾಡಬೇಕು. ಪ್ರವಾಸ ಕಾಲದಲ್ಲಿ ತಮ್ಮ ವಾಸ್ತವ್ಯ ಮತ್ತಿತರ ವೆಚ್ಚಗಳು ಕಡಿಮೆಯಾಗುವಂತೆ ನೋಡಿಕೊಳ್ಳಬೇಕು. ಅದ್ದೂರಿ ವ್ಯವಸ್ಥೆಗೆ ಉತ್ತೇಜನವನ್ನು ನೀಡಬಾರದು. ಒಬ್ಬರೇ ಒಬ್ಬರು ಸಚಿವರು ಒಂದು ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಹೋಗಬೇಕು. ಅಧ್ಯಕ್ಷರೇ, ಈ ಸಚಿವರಿಗೆ ಈ ಪ್ರಕಾರ ನೀತಿ ಸಂಹಿತೆಯನ್ನು ಪಾಲನೆಗೆ ತಂದರು. ಕೆಲವು ಸಚಿವರಿಗೆ ಇವತ್ತಿನ ದಿವಸ ತಮ್ಮ ಚೇಂಬರ್ ಎಲ್ಲಿದೆ ಎಂದು ಗೊತ್ತಿಲ್ಲ. ಈ ನೀತಿ ಸಂಹಿತೆಯನ್ನು ತಮ್ಮ ಚೇಂಬರೇ ಗೊತ್ತಿಲ್ಲದೆ ಇರುವಂತಹ ಸಚಿವರು ಯಾವ ಪ್ರಕಾರ ಅನುಸರಿಸುತ್ತಾರೆ. ಆ ಸಚಿವರು ಯಾರು ಎಂದು ತಮಗೆ ಗೊತ್ತಿದೆ. ಆದರೆ ನಾನು ಅವರ ಹೆಸರು ಹೇಳುವುದಿಲ್ಲ, ಅವರು ಹೋಮ್ ಕೆಲಸ ಬಿಟ್ಟು ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ಯಾವುದೇ ಒಬ್ಬ ಮಂತ್ರಿ ಬೆಳಿಗ್ಗೆ 10-30 ರಿಂದ 1-30 ರವರೆಗೆ ಮಧ್ಯಾಹ್ನ 3-30 ರಿಂದ 5-30 ರವರೆಗೆ ತಮ್ಮ ಚೇಂಬರ್ನಲ್ಲಿದ್ದರೆ, ಅಥವಾ ಅವರ ಮನೆಯಲ್ಲಿದ್ದಾರೆ ಎಂದು ತಿಳಿದುಕೊಳ್ಳಬೇಕು. 3 ದಿವಸದ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿಗೆ 5 ಜನ ಮಂತ್ರಿಗಳು ಹೋದರು ಆದರೆ ಒಂದು ಸಭೆಗೆ ಒಬ್ಬರೇ ಒಬ್ಬರು ಮಂತ್ರಿಗಳು ಹೋಗಬೇಕೆಂದು ಹೇಳುತ್ತಾರೆ. ಮತ್ತೆ ಆದಷ್ಟು ಯಾವುದೇ ಅಧಿಕಾರಿಗಳು ಮುಖ್ಯ ಮಂತ್ರಿಗಳಾಗಲಿ ಅಥವಾ ಬೇರೆ ಮಂತ್ರಿಗಳ ಬೆನ್ನು ಹತ್ತಬಾರದು ಎಂದು ಹೇಳುತ್ತಾರೆ. ಮೊನ್ನೆ ಬೆಳಗಾಂ ಜಿಲ್ಲೆಗೆ ಮುಖ್ಯ ಮಂತ್ರಿಗಳು ಪ್ರವಾಸ ಬಂದಾಗ ಅವರ ಹಿಂದೆ ಮುಂದೆ 28 ಸರ್ಕಾರಿ ಕಾರುಗಳು ಇದ್ದವು. ಅವು ಯಾವ ಪ್ರಕಾರ ಬಂದಿವೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಅದು ದುಂದುವೆಚ್ಚ ಎಂದು ವಿಚಾರ ಮಾಡಬಹುದು. ಈ ಸರ್ಕಾರ ಯಾವ ಪ್ರಕಾರ ನೀತಿ ಸಂಹಿತೆಯನ್ನು ಹೇಳುತ್ತಾರೆ ಆ ಪ್ರಕಾರ ನಡೆದು ಕೊಳ್ಳುತ್ತಿಲ್ಲ, ವಿಧಾನಸೌಧದ ಮೂರನೇ ಮಹಡಿಯಲ್ಲಿ ನೀತಿ ಸಂಹಿತೆ ಚಾಲೂ ಆದರೆ, ಅದು ಜಿಲ್ಲಾ ಮಟ್ಟದಲ್ಲಿ ಮತ್ತೆ ತಾಲ್ಲೂಕುವಾರು ಮಟ್ಟದಲ್ಲಿ ಅನುಸರಿಸಲಿಕ್ಕೆ ಅನುಕೂಲವಾಗುತ್ತದೆ. ಕಡತ ವಿಲೇವಾರಿ ಬಗ್ಗೆ ನನ್ನ ಸರ್ಕಾರವು 15 ದಿವಸದಲ್ಲಿ ಯಾವುದೇ ಒಂದು ಫೈಲನ್ನು ಇಟ್ಟುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಆದರೆ, ಸುಮಾರು 3-4 ವರ್ಷದವರೆಗೆ ಯಾವುದೇ ಫೈಲು ವಿಲೇವಾರಿ

ಆಗುತ್ತಿಲ್ಲ. ಈಗ ಒಂದು ಹೊಸ ಸ್ಕೀಮನ್ನು ತಂದಿದ್ದಾರೆ. ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ವಿದೇಶಿ ನೆರವಿನ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಗ್ರಾಮಗಳು ಶುಚಿಯಾಗಿರುವುದು ಅಭಿವೃದ್ಧಿಯ ಒಂದು ಪ್ರಮುಖ ಸಂಕೇತವೆಂದು ನಾವು ಭಾವಿಸುತ್ತೇವೆ. ನಿರ್ಮಲಗ್ರಾಮ ಎಂಬ ಹೊಸ ಯೋಜನೆಯಡಿಯಲ್ಲಿ ಇಡೀ ರಾಜ್ಯಾದ್ಯಾಂತ ಕುಡಿಯುವ ನೀರಿನ ವ್ಯವಸ್ಥೆ, ಗ್ರಾಮ ನೈರ್ಮಲೀಕರಣದ ವ್ಯವಸ್ಥೆಯನ್ನು ನಿರ್ದಿಷ್ಟಪಡಿಸಿದ ಅವಧಿಯಲ್ಲಿ ಮುಗಿಸಲು ನನ್ನ ಸರ್ಕಾರ ಉದ್ದೇಶಿಸಿದೆ. ಅಧ್ಯಕ್ಷರೇ, ದಿವಂಗತ ಬಸವಲಿಂಗಪ್ಪನವರನ್ನು ಇವತ್ತಿನ ದಿವಸ ನಾವು ನೆನೆಯಬೇಕಾಗಿದೆ. ನಿಜವಾಗಿಯೂ ಕೂಡ ಯಾರಾದರೂ ಒಬ್ಬರು ಕಳಕಳಿಯಿಂದ ಇದ್ದ ಮಂತ್ರಿಗಳು ಎಂದರೆ ಬಸವಲಿಂಗಪ್ಪನವರು ಎಂದು ನಾನು ಧೈರ್ಯವಾಗಿ ಹೇಳುತ್ತೇನೆ. ಇವತ್ತು ಯಾವ ಪ್ರಕಾರ ಕೆಂಗಲ್ ಹನುಮಂತಯ್ಯನವರ ಫೋಟೋವನ್ನು ಹಾಕಿದ್ದಾರೆ ಅದೇ ಪ್ರಕಾರ ಈ ಒಂದು ಸ್ಥಳದಲ್ಲಿ ಬಸವಲಿಂಗಪ್ಪನವರ ಫೋಟೋವನ್ನು ಅನಾವರಣ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಅವರಿಗೆ ಯಾವುದೇ ಬಡಬಗ್ಗರ ಬಗ್ಗೆ ಯಾವುದೇ ಕೆಲಸವನ್ನು ಮಾಡಬೇಕೆಂದರೆ, ಹಠವಾದಿಯಾಗಿ ಮಾಡಿಯೇ ತೀರುತ್ತಿದ್ದರು. ಈ ರಾಷ್ಟ್ರದಲ್ಲಿ ರಾಜ್ಯದಲ್ಲಿ ಯಾವುದೇ ಒಂದು ಕೆಲಸವನ್ನು ಮಾಡಿದ್ದಾರೆಯೇ ಎಂದು ನೋಡಿದರೆ, ಮಲ ಹೊರುವಂತಹ ಪದ್ಧತಿಯನ್ನು ತಪ್ಪಿಸಲಿಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಬಗ್ಗೆ ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಅವರು ಪರಿಸರ ಮಂತ್ರಿಗಳಿದ್ದಾಗ ಬೆಳಗಾಂ ಜಿಲ್ಲೆಯ ಮಲಪ್ರಭಾ ವಿಚಾರದಲ್ಲಿ ಅಲ್ಲಿನ ಜನರ ಅನುಕೂಲತೆಗಾಗಿ ಅಂಡರ್‌ಗ್ರೌಂಡ್ ಯೋಜನೆಯನ್ನು ಕೈಗೊಳ್ಳಬೇಕೆಂದು ಹೇಳಿದರು. ಎರಡು ತಿಂಗಳೊಳಗೆ ನೀರಾವರಿ ಇಲಾಖೆ ಕಾರ್ಯದರ್ಶಿಗಳು ಕ್ರಮ ಕೈಗೊಳ್ಳದೆ ಇದ್ದಾಗ ಅವರ ಮೇಲೆ ಸೆಕ್ಷನ್ 17ರ ಕೆಳಗೆ ಕ್ರಮ ಕೈಗೊಳ್ಳಬೇಕೆಂದು ಆದೇಶ ನೀಡಿದರು.

ಇವರು ಆದೇಶ ನೀಡಿದರೂ ಅವರ ಆಫೀಸಿನಲ್ಲೇ ಅಂದರೆ ನೀರಾವರಿ ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು. ಒಂದುಕಡೆ ಕೇಳಿದರೆ ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಕೇಳುತ್ತಾರೆ, ಇಡೀ ರಾಜ್ಯದಲ್ಲೆಲ್ಲಾ ಅಲೋ ಮಾಡಬೇಕಾಗುತ್ತದೆ. ಇಡೀ ರಾಜ್ಯಕ್ಕೆ ಅಲೋ ಮಾಡಬೇಕಾದರೆ ಸುಮಾರು 100 ಕೋಟಿ ರೂ. ಬೇಕಾಗಬಹುದು. ಆದ್ದರಿಂದ ಈ ಯೋಜನೆಯನ್ನು ಕೈಬಿಡಲು ಯೋಚಿಸುತ್ತಿದ್ದೇವೆಂದು ಹೇಳಿದರು. ಹಳ್ಳಿಗಳಲ್ಲಿ ಮಹಿಳೆಯವರ ಪರಿಸ್ಥಿತಿ ಏನಿದೆ ಎಂಬುದು ನಮಗೆಲ್ಲಾ ಗೊತ್ತಿದೆ. ಹೆಣ್ಣುಮಕ್ಕಳು ಹೊರಗೆ ಹೋಗಬೇಕಾದರೆ ಮುಂಜಾನೆ ರಸ್ತೆ ಬದಿಯಲ್ಲಿ ಮಲಮೂತ್ರ ವಿಸರ್ಜನೆ ಮಾಡುವುದಕ್ಕೆ ಕೂರುತ್ತಾರೆ. ಇಲ್ಲದಿದ್ದರೆ ರಾತ್ರಿ ವೇಳೆ ಹೊರಗೆ ಹೋಗಬೇಕಾಗುತ್ತದೆ. ದಿವಂಗತ ಬಸವಲಿಂಗಪ್ಪನವರ ಯೋಜನೆ ಏನಿತ್ತು ಅದರ ಪ್ರಕಾರ ಪುನರ್ ವಸತಿ ಗ್ರಾಮಗಳಲ್ಲಿ ನೈರ್ಮಲ್ಯ ಯೋಜನೆಯನ್ನು ಸರ್ಕಾರದವರು ಕೈಗೊಳ್ಳಬೇಕು. ಆದರೆ ಇವತ್ತಿನವರೆಗೂ ಸರ್ಕಾರದವರು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಇಂಥ ಯೋಜನೆಗಳನ್ನು ಈ ಪುಸ್ತಕದಲ್ಲಿ ನಮೂದಿಸಿ ಯಾವುದೇ ಕ್ರಮವನ್ನು ಕೈಗೊಳ್ಳದೇ ಹೋದರೆ ಅದರಿಂದ ಯಾವುದೇ ಪ್ರಯೋಜನವೂ ಆಗುವುದಿಲ್ಲವೆಂದು ನಾನು ಹೇಳಬಯಸುತ್ತೇನೆ.

ಇನ್ನೊಂದು ವಿಚಾರ ಎಂದರೆ ಆರ್ಥಿಕ ಮುಗ್ಗಟ್ಟಿನಲ್ಲಿ ಕಿತ್ತೂರು ಚೆನ್ನಮ್ಮ ರೆಸಿಡೆನ್‌ಷಿಯಲ್ ಸ್ಕೂಲ್ ಬಳಲುತ್ತಿದೆ. ಈ ಶಾಲೆಯನ್ನು ದಿವಂಗತ ಮಾನ್ಯ ಎಸ್.ಆರ್. ಕಂಠಿಯವರು ಪ್ರಾರಂಭ ಮಾಡಿದ್ದರು. ಇಡೀ ನಮ್ಮ ರಾಜ್ಯದಲ್ಲಿರತಕ್ಕದ್ದು, ಕೇವಲ ಇದೊಂದೇ ಮಹಿಳಾ ಶಾಲೆ. ಅಲ್ಲಿ ಓದಿದ 22 ಹೆಣ್ಣುಮಕ್ಕಳಿಗೆ ಬಿ.ಇ. ಸೀಟ್ಸ್ ಸಿಕ್ಕವೆ, 8 ಮಕ್ಕಳಿಗೆ ಮೆಡಿಕಲ್ ಸೀಟ್ಸ್, 6 ಮಕ್ಕಳಿಗೆ ಡೆಂಟಲ್ ಕಾಲೇಜ್ ನಲ್ಲಿ ಸೀಟುಗಳು ಸಿಕ್ಕಿವೆ. ಇಂಥ ಒಂದು ಸ್ಕೂಲು ಆರ್ಥಿಕ ಮುಗ್ಗಟ್ಟಿಗೆ ಸಿಕ್ಕಿಕೊಂಡಿದೆ. ತಾವು ಬಿಜಾಪುರ ಸೈನಿಕ ಸ್ಕೂಲಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತೀರಿ ಅದೇ ಸೌಲಭ್ಯಗಳನ್ನೂ ಈ ಶಾಲೆಗೂ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದಾರೆ. ಆದರೆ ಸರ್ಕಾರ

ಅದನ್ನು ಕೊಡುತ್ತಿಲ್ಲ. ತಾವು ಈ ಶಾಲೆಗೆ ಸಹಾಯ ನೀಡುವ ಕ್ರಮ ತೆಗೆದುಕೊಳ್ಳಬೇಕು. ಬಿಜಾಪುರ ಸೈನಿಕ ಸ್ಕೂಲ್ ಕೂಡ ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿದೆ. ಅಲ್ಲಿ ಕುಡಿಯುವ ನೀರಿಗೂ ತೊಂದರೆ ಇದೆ. ಆದ್ದರಿಂದ ಈ ಶಿಕ್ಷಣದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇಷ್ಟೊಂದು ಹೇಳುತ್ತಿದ್ದಾರೆ ಇದರ ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಬಿಜಾಪುರ ಸೈನಿಕ ಶಾಲೆ ಮತ್ತು ಕಿತ್ತೂರು ಚೆನ್ನಮ್ಮ ರೆಸಿಡೆನ್ಷಿಯಲ್ ಬಗ್ಗೆ ಹೆಚ್ಚಿನ ಆಸ್ಥೆ ವಹಿಸಿ ಗ್ರಾಂಡ್‌ನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಸಭಾಧ್ಯಕ್ಷರೇ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಕೆಂಬ ಉತ್ಸಾಹ ನನಗಿಲ್ಲ. ಆದರೂ ರಾಜ್ಯಾಂಗದ ಕೆಲವು ವಿಧಿಬಿಂದುಗಳನ್ನು ಪ್ರಸ್ತಾವ ಮಾಡಬೇಕೆಂಬ ಸದುದ್ದೇಶದಿಂದ ಮಾತನಾಡಬೇಕಾಗಿದೆ. ನಿಜವಾಗಿಯೂ ಮಾನ್ಯ ರಾಜ್ಯಪಾಲರು ಭಾಷಣ ಮಾಡಿದ್ದುದು ಜನವರಿ 26ನೇ ತಾರೀಖು ಗಣರಾಜ್ಯೋತ್ಸವ ದಿನದಂದು ರಾಜ್ಯವನ್ನುದ್ದೇಶಿಸಿ ಭಾಷಣ ಮಾಡಿದರು. ಆದರೆ ಇಲ್ಲಿ ಅವರು ಬರೆದ ಭಾಷಣವನ್ನು ಓದಿದ್ದಾರೆ. ಮಾನ್ಯ ರಾಜ್ಯಪಾಲರ ಭಾಷಣಕ್ಕೂ ಮತ್ತು ಬರೆದ ಭಾಷಣಕ್ಕೂ ಇರುವ ಸ್ವಲ್ಪ ವ್ಯತ್ಯಾಸವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ರಾಜ್ಯಪಾಲರು 26ನೇ ತಾರೀಖು ಗಣರಾಜ್ಯೋತ್ಸವ ದಿನದಂದು ಮಾತನಾಡುತ್ತಾ ಹೇಳಿದರು, I quote :

" The very existence of the country depends on how we practise our constitutional responsibilities and our Constitutional Bodies function. Honesty will force the admission that we have, especially, over the past few years failed in this regard".

ಈ ಮಾತನ್ನು ಹೇಳುವಾಗ ಅವರ ಮನಸ್ಸಿನಲ್ಲಿದ್ದುದು ಏನು? ಒಂದು ದೇಶದ ಜೀವಂತಿಕೆ, ಅದರ ಬದುಕು ನಮ್ಮ ನಡವಳಿಕೆಯಿಂದ ನಿರ್ಣಯವಾಗುತ್ತದೆ. ರಾಜ್ಯಾಂಗದತ್ತವಾದ, ರಾಜ್ಯಾಂಗ ಬದ್ಧವಾಗಿ ಜವಾಬ್ದಾರಿಗಳನ್ನು ಎಷ್ಟು ಮಟ್ಟಿಗೆ ನಿರ್ವಹಿಸುತ್ತೇವೆ, ಮತ್ತು ರಾಜ್ಯಾಂಗದ ವಿವಿಧ ಅಂಗಗಳು ಯಾವರೀತಿ ಕೆಲಸಮಾಡುತ್ತವೆ ಅದರ ಮೇಲೆ ಆ ದೇಶದ ಪ್ರಭುತ್ವ ಹೇಗಿರುತ್ತದೆಂಬುದು ಪ್ರತಿಧ್ವನಿಯಾಗುತ್ತದೆ.

4.50 ಪಿ.ಎಂ.

ಅದರ ಜೊತೆಯಲ್ಲಿ ಇತ್ತೀಚಿನ ಕೆಲವು ವರ್ಷಗಳ ನಡವಳಿಕೆಯನ್ನು ನೋಡಿದರೆ ಪ್ರಾಮಾಣಿಕವಾಗಿ ಅನ್ನಿಸುತ್ತದೆ ರಾಜ್ಯಪಾಲರು ಹೇಳತಕ್ಕ ಮಾತು ಸರಿ ಎಂದು. ರಾಜ್ಯಾಂಗದ ಚೌಕಟ್ಟಿನೊಳಗೆ ಕೆಲಸ ಮಾಡತಕ್ಕದ್ದು, ರಾಜ್ಯಾಂಗದತ್ತವಾದ ಸಂಸ್ಥೆಗಳು ಕೆಲಸ ಮಾಡತಕ್ಕದ್ದು ನಿಜಕ್ಕೂ ಇತ್ತೀಚಿನ ದಿನಗಳಲ್ಲಿ ತುಂಬಾ ಶೋಚನೀಯವಾದುದು ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆಂದು ಹೇಳಿದ್ದಾರೆ.ಇದನ್ನು ಹೇಳುವಾಗ ನಮ್ಮ ಶಾಸನಸಭೆಯಲ್ಲಿ ಕಳೆದ ಅಧಿವೇಶನದಲ್ಲಿ ಮತ್ತು ಅದಕ್ಕೆ ಹಿಂದೆ ನಾವು ನಡೆದುಕೊಂಡ ರೀತಿಯ ಪ್ರತಿಧ್ವನಿ ಅದು ಎಂದು ನಾನು ಭಾವಿಸಿದರೆ ತಪ್ಪು ಎಂದು ತಾವು ತಿಳಿಯಬೇಡಿ. ಈ ಅಭಿಪ್ರಾಯವನ್ನು ಹೇಳಿದ ಮಾನ್ಯ ರಾಜ್ಯ ಪಾಲರು ರಾಜ್ಯಾಂಗ ದತ್ತವಾಗಿ ತಮ್ಮ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಿದ್ದಾರೆಂದು ಹೇಳುವುದಕ್ಕೆ ಹೋಗುವುದಿಲ್ಲ. ರಾಜ್ಯಪಾಲರ ವಿರುದ್ಧ ಮಾತನಾಡತಕ್ಕದ್ದು ಕ್ರಮವಲ್ಲ. ಅವರ ಮನಸ್ಸಿನಲ್ಲಿದ್ದುದ್ದು ನಮ್ಮ ನಡವಳಿಕೆ ಮೇಲೆ ಒಂದು ರೀತಿ ರಿಫ್ಲೆಕ್ಷನ್ ಎಂದು ಭಾವಿಸುತ್ತೇನೆ. ಅದೇ ಶಾಸನಸಭೆಯನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುತ್ತಾರೆ.

ನಾನು ಅವರಿಗೆ ಒಂದು ಪತ್ರ ಬರೆದಿದ್ದೆ. ನಾನು ಬರೆದ ಪತ್ರ, ಡಿಸೆಂಬರ್ 30ನೇ ತಾರೀಖು ಕೆರೆದಿರತಕ್ಕ ಅಧಿವೇಶನ ರಾಜ್ಯಾಂಗಬಾಹಿರವಾದುದು ಇದನ್ನು ಸರಿಪಡಿಸಿ ಎಂದು ಹೇಳಿದ್ದೆ. ಅದಕ್ಕೆ ಅವರು ಉತ್ತರ ಬರೆದಿದ್ದಾರೆ. ಸಮಯ ಇಲ್ಲದಿರುವುದರಿಂದ ಉತ್ತರವನ್ನು ಅಷ್ಟೇ ಓದುತ್ತೇನೆ.

" I am in receipt of your letter dated 9th December, 1993 regarding convening of a session of the Legislature. I have carefully examined the points raised by you in your letter. As a senior legislator, I am sure, you are aware of the position that in such matters as convening the sessions of the legislature, I am bound by the advise of the Council of Minsisters"

He tries to put the blame on the Council of Ministers.

" I am of the view that convening both the Houses for 10 days session concerning on 30th December, 1993 does not involve any constitutional impropriety. After the ensuing session, the Houses could be prorogued and then summoned to meet again. The session of the prorogation of the session to commence on 30th December would necessarily have to commence with a joint address by the Governor. I draw your attention to the fact that Lok sabha commenced its session on 8th September, 1962 and the House adjourned on 11th December, 1962. Since Lok Sabha was not prorogued, I put a stress on this question, te president did not address the Lok sabha when it met on 26th January, 1963. The President, however, addressed both the Houses of parliament on 18th February, 1963 opening day of the next session"

ಇಲ್ಲಿ ನನ್ನ ಉದ್ದೇಶ ಏನೆಂದರೆ, ಶಾಸನಸಭೆಯ ಅಧಿವೇಶನ ಚುನಾವಣೆ ಮುಗಿದ ತಕ್ಷಣ ಮೊದಲನೆ ಅಧಿವೇಶನ ಜಂಟಿ ಅಧಿವೇಶನ ಆಗಬೇಕು, ಅದು ಕಡ್ಡಾಯ. ಎರಡನೆಯದಾಗಿ ಪ್ರತಿ ವರ್ಷದ ಮೊದಲನೆ ಅಧಿವೇಶನ ಜಂಟಿ ಅಧಿವೇಶನ ಆಗಬೇಕು, ಅದು ರಾಜ್ಯಪಾಲರ ಭಾಷಣದಿಂದ ಪ್ರಾರಂಭವಾಗಬೇಕು. ಈ ರಾಜ್ಯಾಂಗದತ್ತವಾದ ನಿರ್ದೇಶನವನ್ನು ಒಂದು ರೀತಿಯಿಂದ ಭಂಗಗೊಳಿಸುವ ದೃಷ್ಟಿಯಿದ, ದುರುದ್ದೇಶದಿಂದ ಸರ್ಕಾರಗಳು ಅಥವಾ ಆಳುವ ಪಕ್ಷ ಅಧಿವೇಶವನ್ನು ಡಿಸೆಂಬರ್ 30ಕ್ಕೆ ಕರೆಯುವುದು, ಆಮೇಲೆ ಜನವರಿ ಒಂದರಿಂದ ನಡೆಯತಕ್ಕ ಅಧಿವೇಶನವನ್ನು ಹಿಂದಿನ ವರ್ಷದ ಅಧಿವೇಶನ ಎಂದು ಹೇಳುವುದು, ಮುಂದಿನ ವರ್ಷಕ್ಕೆ ರಾಜ್ಯಪಾಲರ ಭಾಷಣಕ್ಕೆ ಜಂಟಿ ಶಾಸಕಾಂಗದ ಸಭೆಗೆ ತಮ್ಮದೇ ಆದೇ ತಾರೀಖನ್ನು ನಿಗದಿ ಮಾಡತಕ್ಕದ್ದು. ಇದರ ಬಗ್ಗೆ ನಾನು ತಮ್ಮ ಗಮನವನ್ನು ಸೆಳೆಯುತ್ತೇನೆ. ಈ ನಿಬಂಧನೆ 1971ರ ಆಕ್ಟಿಗೆ ಮೊದಲು ಏನಿತ್ತು? the special address by the Governor at the commencement of every session.

ಆಮೇಲೆ ನಾನು ದೀರ್ಘವಾಗಿ ಹೋಗುವುದಿಲ್ಲ. ಅದನ್ನು ಅಮೆಂಡ್ ಮಾಡುತ್ತಾರೆ. ಕಾರಣವೇನು? ಪ್ರತಿಯೊಂದು ಅಧಿವೇಶನ ರಾಜ್ಯಪಾಲರ ಜಂಟಿಅಧಿವೇಶನ ಆದರೆ, ರಾಜ್ಯಪಾಲರ ಭಾಷಣದಿಂದ ಪ್ರಾರಂಭವಾದರೆ ಸಮಯದ ವ್ಯರ್ಥವಾಗುತ್ತದೆ. ವಿಪರೀತವಾದಂಥ ಖರ್ಚುವೆಚ್ಚಗಳು ಬರುತ್ತವೆ ಮತ್ತು ಪ್ರಾಕ್ಟಿಕಲ್ ಆಗಿ ಇರುವುದಿಲ್ಲ. ಆ ದೃಷ್ಟಿಯಿಂದ ಇದನ್ನು 18.6.1951 ಹಿಂದೆ ಏನಿತ್ತು, ಅದನ್ನು ನಂತರ ಆರ್ಟಿಕಲ್

176ರಲ್ಲಿ ಒಂದು ತಿದ್ದುಪಡಿಯನ್ನು ಮಾಡಿದರು. ಅಲ್ಲಿ ಏನು ಹೇಳಿದರು The special address by the Governor at the commencement of every session ಎಂದು ಇರುವುದನ್ನು ತೆಗೆದು at the commencement of every year.

ಪ್ರತಿವರ್ಷ ನಡೆಸಬೇಕು ಎನ್ನತಕ್ಕಂಥಾದ್ದನ್ನು ತಿದ್ದುಪಡಿ ಮಾಡಿದರು. ಈ ತಿದ್ದುಪಡಿ ಮಾಡಿದ್ದುದು ಮೂಲಭೂತವಾಗಿ ರಾಜ್ಯಪಾಲರ ಭಾಷಣ ಅಧಿವೇಶನ ಸೇರದೇ ಇರಬಹುದು, 190 ಜನರ ಸಂಖ್ಯೆ ಇರತಕ್ಕಂಥ ಕಾಂಗ್ರೆಸ್ ಶಾಸಕಾಂಗ ಅಧಿವೇಶನ ಕರೆಯುವುದು ಅಗತ್ಯವಿಲ್ಲ ಎನ್ನುವಂಥ ತೀರ್ಮಾನಕ್ಕೆ ಬಂದರೂ ಬರಬಹುದು. ಅದಕ್ಕೆ ರಾಜ್ಯಾಂಗದಲ್ಲಿ between the two sessions, interval shall not be more tha six months. ಎಂದು ಹೇಳಿದರು.ಅದನ್ನು ಅನಿವಾರ್ಯವಾಗಿ ಕರೆಯಬೇಕಾಗುತ್ತದೆ. ಪ್ರತಿವರ್ಷ ರಾಜ್ಯಪಾಲರ ಭಾಷಣ ಆಗಬೇಕು ಎನ್ನತಕ್ಕಂಥ ಅನಿವಾರ್ಯತೆ ರಾಜ್ಯಾಂಗದಲ್ಲಿರುವ ಕಾರಣ ರಾಜ್ಯಪಾಲರಿಂದ ಭಾಷಣವನ್ನು ಮಾಡಿಸುತ್ತಾರೆ. ಇದಕ್ಕೆ ಏತಕ್ಕೆ ನಾನು ಮಹತ್ವ ಕೊಡುತ್ತಿದ್ದೇನೆ ಎಂದು ಹೇಳಿದರೆ, ರಾಜ್ಯಾಂಗದ 212 ರಲ್ಲಿ ಯಾವುದೇ ಶಾಸನಸಭೆ ಮಾಡತಕ್ಕಂಥ ತೀರ್ಮಾನವನ್ನು ಕೋರ್ಟಿನಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಇಲ್ಲ. ಇದು ನಮಗೆ ಸಿಕ್ಕಿರತಕ್ಕಂಥ ಅತ್ಯಂತ ದೊಡ್ಡ ಗೌರವ. ಈ ಗೌರವದ ರಕ್ಷಣೆಯನ್ನು ನಾವು ಮಾಡಿಕೊಳ್ಳದೇ ಇದ್ದರೆ, ಯಾರು ಬರುತ್ತಾರೆ ರಕ್ಷಣೆಗೆ? ಅದಕ್ಕಾಗಿ 212 ರಲ್ಲಿ ಏನು ಹೇಳಿದ್ದಾರೆ?

" The Legislature has complete jurisdiction to carry on its proceedings and the validity of the proceedings of such legislature cannot be called in question in court on the allegation that the procedure laid down for the conduct of the business has not been followed".

ಈ ಕಾರಣದಿಂದ ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ. But " Where the defect is not one relating to the procedure but affects the very constitution of the Legislature or either House there of, owing to nonËcompliance with the provisions of the Constitution or any other law relating to its Censtitutien, the entire proceedings of such legislature is void"

It follows that if the Act passed by such legislature or any other Act done by such legislature affects the legal or constitutional right of the individuals, the Courts are entitled to give appropriate relief.

ಈ ಸಂಬಂಧವಾಗಿ 1966ರಲ್ಲಿ ಕಲ್ಕತ್ತಾ ಹೈಕೋರ್ಟಿನಲ್ಲಿ ಒಂದು ತೀರ್ಪು ಆಯಿತು. ಅದು 1965ರಲ್ಲಿ ಹೋದ ಕೇಸು. ಅದರಲ್ಲಿ ಏನು ಹೇಳಿದ್ದಾರೆ ಎಂದರೆ, ಸೈಯದ್ ಅಬ್ದುಲ್ ಮನ್ಸೂರ್ ಹಬೀಬುಲ್ಲ ವರ್ಸಸ್ ಸ್ಪೀಕರ್ ಆಫ್ ವೆಸ್ಟ್‌ಬೆಂಗಾಲ್. ಇದೇ ರೀತಿಯಾದಂಥ ಒಂದು ಪ್ರಸಂಗ. ಮೊದಲನೆಯೇ ಅಧಿವೇಶನ ಜಂಟಿ ಅಧಿವೇಶನವನ್ನು ಕರೆಯಲಿಲ್ಲ. ಅದನ್ನು ಕೋರ್ಟಿನಲ್ಲಿ ಪ್ರಸ್ತಾಪ ಮಾಡಿದರು. The observation of the court is,

"the proceeding inside the Legislature chamber, the extent of powers and privileges of the legislators, proceedings not merely irregular but illegal or un-constitutional, the High Court is competent to issue a mandate upon the Legislature. This is reported in AIR 1965 SC.

ಆದಕಾರಣ, ಇಲ್ಲಿ ನನ್ನ ಪ್ರಶ್ನೆ ಏನು ಎಂದರೆ, ನೀವು ಜಂಟಿ ಅಧೀವೇಶನವನ್ನು ಕರೆಯಬೇಕು, ಅದು ಮೊದಲನೆಯ ಅಧಿವೇಶನ ಆದರೆ ಅದನ್ನು ಡಿಸೆಂಬರ್ 30ನೇ ತಾರೀಖು ಏತಕ್ಕೆ ಕರೆಯುತ್ತೀರಿ? ಅದನ್ನೇ ಜಂಟಿ ಅಧಿವೇಶನವಾಗಿ ಒಂದು ಅಥವಾ ಎರಡನೇ ತಾರೀಖಿಗೆ ಕರೆಯಿರಿ. ಈ ಅಧಿವೇಶನ ಕರೆಯುವಾಗ ತಾವು ಅಧ್ಯಕ್ಷರಾಗಿ ಕುಳಿತಿದ್ದೀರಿ, ನಾನೂ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. I have every reason to belive ಈ 30 ನೇ ತಾರೀಖಿನ ಅಧಿವೇಶನವನ್ನು ಕರೆಯುವುದಕ್ಕೆ ಕೌನ್ಸಿಲ್ ಆಫ್ ಮಿನಿಸ್ಟರ್ಸ್ ತೀರ್ಮಾನ ಮಾಡಲಿಲ್ಲ. ಒಂದು ವೇಳೆ ಮಾಡಿದ್ದರೂ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಗಳು ಆ ಸಭೆಯಲ್ಲಿ ಇರಲಿಲ್ಲ. ನಮಗೆ ರಾಮಸ್ವಾಮಿಯವರು ಮುಖ್ಯರಲ್ಲ. He is the Parliamentary Affairs Minister of this State and he is responsible to this House. I hold him responsible for any faults committed against the Constitution or under the Act. Even he is not consulted, subject to correction, and Legislature is totally ignored.

ಯಾವ ಸ್ಥಿತಿಗೆ ನಾವು ಹೋಗಿದ್ದೇವೆ ಎಂದರೆ ಸ್ವಾಯತ್ತತೆ ಬೇಕು ಎಂದು ಹೇಳಿ ಶಾಸಕಾಂಗಕ್ಕೆ ಮತ್ತು ಅಲ್ಲಿಯ ಪಾರ್ಲಿಮೆಂಟ್‌ಗೆ ಕಳೆದ ನಲವತ್ತು ವರ್ಷಗಳಿಂದ ಹೋರಾಟ ನಡೆಸಿದರು The fight is between the courts, the legislature or the parliament and the administration.

ನಮ್ಮ ನಡವಳಿಕೆ ಇದಕ್ಕೆ ಪೂರಕವಾಗಿ ಇಲ್ಲದೇ ಇದ್ದರೆ, ಯಾವರೀತಿ ಶಾಸನಸಭೆಗೆ ಗೌರವ ಬರುತ್ತದೆ ಎಂದು ನಾನು ತಮ್ಮ ಮೂಲಕ ಮಾನ್ಯ ಪಾರ್ಲಿಮೆಂಟರಿ ಅಫೇರ್ಸ್ ಮಂತ್ರಿಯವರನ್ನು ಕೇಳುವುದಕ್ಕೆ ಬಯಸುತ್ತೇನೆ. So, Legislautre was not consulted. 30ನೇ ತಾರೀಖು ಡಿಸೆಂಬರ್‌ಗೆ ಅಧಿವೇಶವನ್ನು ಕರೆಯುತ್ತಾರೆ. 30 ನೇ ತಾರೀಖಿನ ಅಧಿವೇಶನವನ್ನು ಕರೆಯುವಾಗ, ನಾನು ಹಿಂದಿನ ರಾಜ್ಯಪಾಲರ ಭಾಷಣಕ್ಕೆ ಹೋಗುತ್ತೇನೆ. 62ನೇ ಇಸವಿಯಲ್ಲಿ ಲೋಕಸಭೆ ಅಧಿವೇಶನವನ್ನು ಕರೆದಿದ್ದರು. ಆ ಅಧಿವೇಶನವನ್ನು ಯಾರು ಕರೆದಿದ್ದರು? ಆ ಅಧಿವೇಶನವನ್ನು ಕರೆದವರು ಲೋಕಸಭೆಯ ಸ್ಪೀಕರ್ ಕಾರಣವೇನು? ಪಾರ್ಲಿಮೆಂಟ್ ಪ್ರೊರೋಗ್ ಆಗಿರಲಿಲ್ಲ. ಆದರೆ ಇಲ್ಲಿ ಸ್ಟೇಟ್ ಲೆಜಿಸ್ಲೇಚರ್ ಪ್ರೊರೋಗ ಆಗುತ್ತದೆ. ಅದರ ಮೇಲೆ ನೀವು ಅಧ್ಯಾದೇಶಗಳನ್ನು ತರುತ್ತೀರಿ. ಆ ಅಧ್ಯಾದೇಶಗಳನ್ನು ಸರಿಪಡಿಸಿಕೊಳ್ಳುವುದಕ್ಕಾಗಿ ಶಾಸನಸಭೆಯಲ್ಲಿ ಮಸೂದೆ ಮೂಲಕ ಇಡುತ್ತೀರಿ. ಆ ಅಧ್ಯಾದೇಶಗಳನ್ನು ತರುವುದಕ್ಕೆ ಅಧಿಕಾರ ಸರ್ಕಾರಕ್ಕೆ ಬರಬೇಕು ಎನ್ನುವ ಕಾರಣಕ್ಕಾಗಿ ನೀವು ಹೌಸ್‌ನ್ನು ಪ್ರೊರೋಗ್ ಮಾಡುತ್ತೀರಿ. ಆಗ ರಾಜ್ಯಪಾಲರು ಸದನವನ್ನು ಕರೆಯುತ್ತಾರೆ. ಇಲ್ಲದಿದ್ದರೆ ತಾವು ಸ್ಪೀಕರ್ ಕರೆಯುತ್ತೀರಿ. ಅಲ್ಲಿ ಇವರೇನು 62ರಲ್ಲಿ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಲೋಕಸಭೆ ಪ್ರೊರೋಗ್ ಆಗಿರಲಿಲ್ಲ. ಸ್ಪೀಕರ್ ಅಧಿವೇಶನವನ್ನು ಕರೆದಿದ್ದರು. ಆದ್ದರಿಂದ Conflict under 174 and 176 ನಿಮಗೆ ಬರತಕ್ಕಂಥ ಅಧಿಕಾರವನ್ನು ರಾಜ್ಯಪಾಲರು, ಅದಕ್ಕೆ ಮುಂದಾಗಿ ನಾನು ಬರೆದ. ನವೆಂಬರ್ 9ನೇ ತಾರೀಖು ನಾನು ಪತ್ರ ಬರೆದ ಉದ್ದೇಶ, ಅಧಿವೇಶನವನ್ನು ಡಿಸೆಂಬರ್ 30ಕ್ಕೆ ಹಿಂದಿನವರ್ಷ ಕರೆದಿದ್ದರು. ಈ ಸಾರಿಯೂ ಇಂತಹ ಅಪರಾಧವನ್ನು ಮಾಡುವುದು ಬೇಡ. ಒಂದು ವೇಳೆ ಅಂತಹ ಅಪರಾಧವನ್ನು ಮಾಡಿ, ಇಲ್ಲಿ ನಾವು ಶಾಸನಗಳನ್ನು ಪಾಸ್ ಮಾಡಿದರೆ, ನಾಳೆ ಇದನ್ನು ಕೋರ್ಟಿನಲ್ಲಿ ಪ್ರಸ್ತಾಪ ಮಾಡಿಯಾರು ಎಂದು. ಆದ್ದರಿಂದ ರಾಜ್ಯಪಾಲರು ಏನು ಹೇಳುತ್ತಾರೆ? 62ರಲ್ಲಿ ಕರೆದಂಥ ಲೋಕಸಭೆಯ ಅಧಿವೇಶನ ಲೋಕಸಭೆಯ ಸ್ಪೀಕರ್ ಅವರು ಕರೆದಿದ್ದರು. ಅದಕ್ಕೆ ಅವರು ಒತ್ತು ಕೊಡುತ್ತಾರೆ. ಆದಕಾರಣ,

ಈ 30 ನೇ ತಾರೀಖು ಇಲ್ಲಿ ಕರೆದಿರುವಂಥ ಅಧಿವೇಶನ ರಾಜ್ಯಾಂಗಬಾಹಿರ ಏತಕ್ಕೆ ಆಗಬೇಕು? 30ನೇ ಡಿಸೆಂಬರ್ ನಲ್ಲಿ ನಾವೇನು ಇಲ್ಲಿ ಸೇರಿದ್ದೆವು, ಆ ದಿವಸ ಯಾವ ಗಂಭೀರವಾದ ಪ್ರಶ್ನೆಯೂ ಆಗಲಿಲ್ಲ. ಬರೀ ಕಾಂಡೋಲೆನ್ಸ್ ರೆಸೊಲ್ಯೂಷನ್ ಆಯಿತು. 31ನೇ ತಾರೀಖಿಗೆ ಮುಂದಕ್ಕೆ ಹಾಕಿದಿರಿ. ನಿಜವಾದ ಅಧಿವೇಶನ ಸೇರಿದ್ದುದು ಹೊಸ ವರ್ಷದಲ್ಲಿ. ನಾವು ಹೊಸವರ್ಷದಲ್ಲಿ ಏನಾದರೂ ಶಾಸನಗಳನ್ನು ಮಾಡಿದ್ದರೆ, ಅದರ ಪರಿಣಾಮ ಏನಾಗುತ್ತಿತ್ತು ಎನ್ನುವ ಕಲ್ಪನೆ ರಾಜ್ಯಾಂಗದ ಜವಾಬ್ದಾರಿಯನ್ನು ಹೊತ್ತ ಶಾಸಕಾಂಗಕ್ಕೂ ಇರಬೇಕು. ರಾಜ್ಯಪಾಲರಿಗೂ ಇರಬೇಕು. ಸರ್ಕಾರಕ್ಕೂ ಇರಬೇಕು, ನಮಗೂ ನಿಮಗೂ ವಿಶೇಷವಾಗಿ ಇರಬೇಕು. ಇಂತಹ ಅಗೌರವವಾದರೆ ಕೆಲಸವನ್ನು ಯಾವುದೇ ಸರ್ಕಾರ, ಅದು ಯಾವುದೇ ಪಕ್ಷಕ್ಕೆ ಸೇರಿದ್ದಾಗಿರಲಿ, ಶಾಸನಸಭೆಗೆ ಅವಮಾನ ಆಗಬಾರದು ಎನ್ನುವಂಥ ಸದಿಚ್ಛೆಯಿಂದ ತಮ್ಮ ಮೂಲಕ ಈ ವಿಚಾರವನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಇದನ್ನು ಸರಿಪಡಿಸತಕ್ಕಥ ವ್ಯವಸ್ಥೆಯಾದರೂ ಆಗಬೇಕು. ಇಲ್ಲಿ ಬಹಳ ಮುಖ್ಯವಾದ ಮತ್ತೊಂದು ಮಾತನ್ನು ಅವರು ಹೇಳಿದ್ದಾರೆ.

I am bound by the decision of the Council of Ministers ಅಂದರೆ ನೀವು ರಾಜ್ಯಾಂಗ ಬಾಹಿರವಾಗಿ ಮಾಡಿದ್ದರೂ ನಾನು I am bound by the Council of Ministers. This is the greatest respect shown in a parliamentary democracy system and to the cabinet system of Government. It the Cabinet system of the Government takes undue advantage of this highest powers and respect given to it, where do we go?

ಈ ಮೂಲ ಪ್ರಶ್ನೆಗಳಿಗೆ ನನಗೆ ಸರ್ಕಾರದಿಂದ ಮತ್ತು ಸಂಬಂಧಪಟ್ಟವರಿಂದ ಉತ್ತರ ಬೇಕಾಗುತ್ತದೆ. ಆದಾದಮೇಲೆ, ಈ ಅಧಿವೇಶನವನ್ನು ಕರೆಯುತ್ತಾರೆ. ಯಾವಾಗ ಅಧಿವೇಶನ ಇಲ್ಲ ಎಂದು ಹೇಳಿ ಶಾಸನಸಭೆಯನ್ನು ಪ್ರೊರೋಗ್ ಮಾಡಿದ್ದರು. ಆ ಕಾಲದಲ್ಲಿ ತಂದಂಥ ಆಧ್ಯಾದೇಶಗಳಿಗೆ ನಾವು ಮಂಜೂರಾತಿಯನ್ನು ಕೊಡಬೇಕು. ಏಕೆಂದರೆ ಅದಕ್ಕೆ ಸಮಯ ಮುಗಿಯುತ್ತದೆ. 10ನೇ ತಾರೀಖಿನೊಳಗೆ ಸಮಯ ಮುಗಿಯುತ್ತದೆ. ಆದ್ದರಿಂದ ನಾವು ಇಲ್ಲಿ ಬರಬೇಕು. only to rectify the mistakes committed by the Government and the Cabinet, we should come here and put our signatures. Maybe, majority will not decide everything. They cannot make a man a woman or a woman a man.

ಈ ಲಿಮಿಟೇಷನ್ಸ್ ಒಳಗೆ ಕೆಲಸ ಮಾಡತಕ್ಕಂಥಾದ್ದನ್ನು ನಾನು ಬಹಳವಾಗಿ ಒತ್ತಿ ಹೇಳುತ್ತೇನೆ. ಅದಕ್ಕಾಗಿಯೇ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನಲ್ಲಿ ಕೂಡ ಬಹಳ ಸ್ಪಷ್ಟವಾಗಿ ಹೇಳುತ್ತಾರೆ. ಪ್ರೆಸಿಡೆಂಟ್ ಅಡ್ರೆಸ್ ಯಾವಾಗ ಕರೆಯಬೇಕು ಎಂಬುದನ್ನು ಹೇಳುತ್ತಾರೆ "At the commencement of the first session of the Parliament after each general Election to the Lok Sabha and there after the commencement of the first session every year, the President addresses the Members of both the Houses of parliament assembled together and inform the parliament of the causes of the summons". What is the cause? The cause is,

ಈ ಸರ್ಕಾರ ಹಿಂದಿನ ವರ್ಷಗಳ ತನ್ನ ಸಾಧನೆ ಏನು? ತನ್ನ ರಾಜ್ಯಪಾಲ ಭಾಷಣದಲ್ಲಿ ಹಿಂದಿನ ವರ್ಷ ಏನು ಹೇಳಿತ್ತು. ಅದರ ಗಭೀರ ಚರ್ಚೆ, ಮುಂ

ಏನು ಮಾಡಬೇಕೆಂದು ಪ್ರೊಜೆಕ್ಷನ್ಸ್ ಇಟ್ಟುಕೊಂಡಿದ್ದೀರಿ. ಇದು ಈ ಶಾಸನ ಸಭೆಗೆ ಗೊತ್ತಾಗಬೇಕು. ಅದರ ಮೇಲೆ ಶಾಸಕರು either on the policy or on the programmes ನಮ್ಮದೇ ಆದಂಥ ಕಾಮೆಂಟ್ಸ್‌ನ್ನು ಕೊಡತಕ್ಕ ಅವಕಾಶ ನಮಗೆ ಇರಬೇಕೆನ್ನುವ ಸದಿಚ್ಛೆಯಿಂದ ಅಧಿವೇಶನವನ್ನು ಕರೆಯುತ್ತೇವೆ. ಇಂತಹ ಒಂದು ಪಾವಿತ್ರ್ಯಕ್ಕೆ ಭಂಗವಾಗತಕ್ಕ ಕೆಲಸ, ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಯಾದ ಎರಡು ವರ್ಷಗಳಲ್ಲಿ ಆಗಿದೆ. ವೀರಪ್ಪ ಮೊಯ್ಲಿಯವರು ಮುಖ್ಯಮಂತ್ರಿಗಳಾದ ಕಾಲದಲ್ಲಿ ಎಂದು ಏಕೆ ಒತ್ತಿ ಹೇಳುತ್ತೇನೆಂದರೆ, ಇವರು ಹಳೆಯ ಅನುಭವಿ, ದೀರ್ಘಕಾಲ ಸಂಸದೀಯ ವ್ಯವಹಾರದ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಇವರಿಂದ ಈ ಅಪಚಾರ ಆಗಬಾರದು. ಅವರು ಮೊದಲು ಮುಖ್ಯಮಂತ್ರಿಯಾದ ಕಾಲಕ್ಕೆ ಕನಿಷ್ಠ ನೂರು ದಿವಸ ಅಧಿವೇಶನ ಮಾಡುತ್ತೇವೆ ಎಂದು ಹೇಳಿದ್ದರು. ನಮಗೆ ಯಾವುದು ಸಾಧ್ಯವಿಲ್ಲವೋ, ಅದನ್ನು ಸಾಧ್ಯ ಮಾಡುತ್ತೇವೆಂಬ ಅಪಚಾರದ, ಅಸಭ್ಯ ಮಾತುಗಳನ್ನು ಹೇಳಬಾರದು. ಅನೇಕ ಕಾರಣಗಳಿಂದ ಸಾಧ್ಯವಾಗುವುದಿಲ್ಲ. ಇದನ್ನು ಒಪ್ಪಿಕೊಳ್ಳತಕ್ಕ ಸೌಜನ್ಯ ನಾಯಕತ್ವಕ್ಕೆ ಇರಬೇಕು. ಇದನ್ನು ನಾನು ಬಹಳ ಎಳೆದುಕೊಂಡು ಹೋಗುವುದಿಲ್ಲ. ಆದ್ದರಿಂದ ಹಿಂದಿನ ಅಧಿವೇಶನ ಯಾವುದನ್ನು ಸಂವಿಧಾನ ಬಾಹಿರವಾಗಿ ಕರೆದಿದ್ದರು, ಇದನ್ನು ಮುಂದೆ ಸರಿಪಡಿಸತಕ್ಕ ಕೆಲಸವನ್ನಾದರೂ ಮಾಡಲಿ ಎಂದು ನಾನು ತಮ್ಮ ಮುಖೇನ ಸರ್ಕಾರವನ್ನು ಪ್ರಾರ್ಥನೆ ಮಾಡುತ್ತೇನೆ. ರಾಜ್ಯಪಾಲರು 26ನೇ ತಾರೀಖು ಪ್ರಸ್ತಾಪ ಮಾಡಿದ್ದುದು, ಅಧಿವೇಶನದಲ್ಲಿ ಹಿಂದಿನ ಅನುಭವ, ಯಾವುದೇ ಸಂಸದೀಯ ಅನುಭವ ಇರತಕ್ಕಂಥ ತಾವು ಹಳೆಯ ಅನುಭವಿಗಳು ಇದ್ದೀರಿ. ಈ ದೇಶದ ಸ್ವಾತಂತ್ರ್ಯಾನಂತರ ಇತಿಹಾಸದಲ್ಲಿ ತಾವು ಹಳೆಯ ಅನುಭವಿಗಳು ಇದ್ದೀರಿ. ಈ ದೇಶದ ಸ್ವಾಂತ್ರ್ಯಾನಂತರ ಇತಿಹಾಸದಲ್ಲಿ ಶಾಸಕಾಂಗದಲ್ಲಾಗಲೀ, ಸಂಸತ್‌ನಲ್ಲಾಗಲೀ ನಡೆಯದೇ ಇರತಕ್ಕ ಘಟನೆಗಳು ಇಲ್ಲಿ ನಡೆದವು. ಇದಕ್ಕೆ ಕಾರಣವೇನು? ಮುಖ್ಯವಾದ ಕಾರಣ. ಆಡಳಿತ ಪಕ್ಷದಲ್ಲಿ ಒಂದು ಭಿನ್ನಮತದ ಗರ್ಭಧಾರಣೆಯಾಯಿತು. ಇದರ ಹೆರಿಗೆ ಮಾಡಿಸುವುದಕ್ಕೆ ಡಾಕ್ಟರು ಬಿಹಾರ್‌ದಿಂದ ಬಂದರು. ಇಲ್ಲಿ ಯಾರಿಂದಲೂ ಸಾಧ್ಯವಾಗಲಿಲ್ಲ. ವಿಶೇಷವಾದ ವೈದ್ಯರನ್ನು ಅಲ್ಲಿಂದ ಕರೆಯಿಸಿದರು. ಅವರು ಇಲ್ಲಿಗೆ ಬಂದು, ಈ ಭಿನ್ನಮತದ ಪ್ರಿಮೆಚೂರ್, 9 ತಿಂಗಳು ತುಂಬಿರಲಿಲ್ಲ. ಒಟ್ಟು ಲೆಕ್ಕ ಹಾಕಿ ನೋಡಿದೆ ನಾನು ಎಂಟು ಎಂಟೂವರೆ ತಿಂಗಳೂ, ಬಂದು ಸೂಲಗಿತ್ತಿ, ಈ ಗರ್ಭಧಾರಣೆಯಾದಂಥ ಸತ್ತ ಮಗುವಿಗೆ ಜನ್ಮ ಕೊಟ್ಟರು. ಮಗು ಬದುಕಿರಲಿಲ್ಲ. ಈ ಸತ್ತುಹೋದಂಥ ಮಗುವಿಗೆ ಜನ್ಮ ಕೊಟ್ಟರು. ಅದು ನನಗೇನೂ ಸಂಬಂಧ ಇಲ್ಲ, ಇದು ಅವರ ವಿಚಾರ. ಆದರೆ, ನನಗೇನು ಸಂತೋಷ, ಈ ಸತ್ತ ಮಗು ಹುಟ್ಟಿತಲ್ಲಾ, ಇದರ ಪರಿಣಾಮವೇನೆಂದರೆ, ಕಳೆದ ಅಧಿವೇಶನದ ಈ ಸಭೆಯನ್ನು ಭಿನ್ನಮತೀಯ ಉಗ್ರಗಾಮಿಗಳ ಕೈಗೆ ಕೊಟ್ಟಿದ್ದರಲ್ಲಾ, ಆದರಿಂದ ಬಿಡುಗಡೆಯಾಯಿತು. ಭಿನ್ನಮತೀಯರಾದ ಉಗ್ರಗಾಮಿಗಳೇನು ಈ ಸದನವನ್ನು ಆಕ್ರಮಿಸಿಕೊಂಡಿದ್ದರು. ಆದರಿಂದ ಬಿಡುಗಡೆಯಾಯಿತು. ಇದು ನಮಗೆ ಸಂತೋಷ. ಅವರಿಗೇನು ಸಂತೋಷ, ಬಹುಶಃ ಸದನಕ್ಕೆ ಅಗೌರವವಾಗಿತ್ತು. ಇಲ್ಲಿ ಏಕೆ ಕುಳಿತಿದ್ದರೆಂದರೆ, ನಮ್ಮ ಗೌರವ ಹೋಗಿದೆ ಎಂದು ಕುಳಿತಿದ್ದರು. ಈ ಡಾಕ್ಟರು ಬಂದು, ಸೂಲಗಿತ್ತಿ ಹೆರಿಗೆ ಮಾಡಿಸಿದ ಮೇಲೆ, ಈ ಗೌರವವೂ ಬಂತು. ನಮಗೆ ಈ ಉಗ್ರಗಾಮಿಗಳಿಂದ ಸದನವನ್ನು ಬಿಡಿಸಿದರು ಎಂದು ಸಂತೋಷ ಸಮಾಧಾನವಾಗಿ ಕೆಲಸ ಮಾಡೋಣ. ಅವರಿಗೆ ಗೌರವ ಬಂತಲ್ಲಾ ಎಂದು ಸ್ವಲ್ಪ ಹೆಚ್ಚು ಕಡಿಮೆ ನಮಗೆಲ್ಲರಿಗೂ ಸಂತೋಷ.

ಅದು ಯಾವ ರೀತಿ ಗೌರವ ಬಂದಿದೆ ಅವರ ಘನತೆಯನ್ನು ಹೇಗೆ ಎತ್ತಿ ಹಿಡಿದರು ಎನ್ನುವುದಕ್ಕೆ ಆ ಡಾಕ್ಟರ್‌ನ್ನೇ ಕೇಳಬೇಕು. ಸೂಲಗಿತ್ತಿ. ಇದು ನಾನು

ಈ ಸತ್ತ ಕೂಸು ಮತ್ತೆ ಎಲ್ಲಾದರೂ ಜೀವಂತವಾದೀತು ನಾಳೆ ರಾಜ್ಯಸಭೆ ಚುನಾವಣೆ ನಂತರ 18ನೇ ತಾರೀಖು ಅಧಿವೇಶನಕ್ಕೆ ಮತ್ತೆ ಎಲ್ಲಾದರೂ ಜೀವ ಬಂದೀತೂ ಎನ್ನುವ ಭೀತಿಯಿಂದ ಈ ಎಚ್ಚರಿಕೆಯ ಮಾತನ್ನು ಹೇಳುವದಕ್ಕೆ ಇಷ್ಟಪಡುತ್ತೇನೆ. ಇದು ಆಗುತ್ತದೆ. ನಾನು ತಿಳಿದಿದ್ದೇನೆ ಇದು ಸತ್ತು ಹೋಗಿದೆ ಎಂದು, ವೈದ್ಯರು ಅಲ್ಲಿಂದ ಬಂದವರು ಇನ್‌ಜಕ್ಷನ್ ಕೊಟ್ಟು ಈ ಮಗು ಸಾಯಿಸಿ ಹುಟ್ಟಿಸಿದ್ದೇನೆಂದು ಹೇಳಿ ಹೋಗಿದ್ದಾರೆ ಇದು ಸತ್ತಿಲ್ಲ. ಮತ್ತೇ ಜಿವಂತವಾದರೆ ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ ನೀವು ಜೀವಂತವಾಗಿರುತ್ತೀರೋ ಸತ್ತಂತೆ ಇರುತ್ತೀರೋ ಆ ಶವ ತಂದು ಇಲ್ಲಿ ಹೂಳಬೇಡಿ. ಈ ಬಾವಿಗೆ ಎಸೆಯಬೇಡಿ ಇದು ಹಾಳು ಬಾವಿ ಎಂದು.ಇದು ಹಾಳು ಬಾವಿ ಅಲ್ಲ. ಇದು ಬಹಳ ಪವಿತ್ರವಾದಂತಹ ಬಾವಿ, ಇಲ್ಲಿ ನಾವು ಬರತಕ್ಕಂಥಾದ್ದು ಈ ಬಾವಿಗೆ ತೀರ್ಥ ಕುಡಿಯುವದಕ್ಕಾಗಿ ಇಲ್ಲಿ ಸತ್ತ ಶವಗಳನ್ನು ಹಾಕಿ ಈ ಬಾವಿಯನ್ನು ಹೊಲಸು ಮಾಡಬೇಡಿ ಈ ಬಾವಿಯನ್ನು ಎಂದು ನಾನು ಅತ್ಯಂತ ಕಳಕಳಿಯಿಂದ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನನಗೆ ಸಮಯದ ಅಭಾವ ಇರುವುದರಿಂದ ಹೆಚ್ಚ ಸಮಯ ತೆಗೆದುಕೊಳ್ಳುವುದು ಸರಿಯಲ್ಲ ಒಂದೆರಡು ವಿಚಾರಗಳನ್ನು ಮಾತ್ರ ನಾನ ಹೇಳುತ್ತೇನೆ. ನಾನು ಈ ರಾಜ್ಯಪಾಲರ ಭಾಷಣವನ್ನು ಅನೇಕ ವರ್ಷಗಳ ಕಾ ಓದಿಕೊಂಡು ಬಂದಿದ್ದೇನೆ. ಬಹುಶಃ ಇಷ್ಟೊಂದು ನಿರುತ್ಸಾಹ ನೀರಸ, ಎಲ್ಲದ್ದಕ್ಕಿಂ ಹೆಚ್ಚಾಗಿ ಯಾವುದೇ ಒಂದು ಸೀರಿಯಸ್‌ನೆಸ್ ಇಲ್ಲದೆ ಇರತಕ್ಕಂಥ ಒಂದು ಭಾಷ ಬಂದದ್ದು ಇದು ಮೊದಲನೇಯ ಸಲ ಆಲೋಚನೆ ಇಲ್ಲ. ನಾನು ಹೇಳಿದಂ ಕಾನ್‌ಸ್ಟಿಟ್ಯೂಷನಲ್ ಮ್ಯಾಂಡೇಟ್ ಇದೆ, ರಾಜ್ಯಪಾಲರ ಭಾಷಣ ಮಾಡಿಸಬೇಕು ಏನು ತಿಳಿಯುತ್ತದೋ ಅದನ್ನು ಬರೆಯಿರಿ ಅದನ್ನು ಅವರು ಓದುತ್ತಾರೆ. ನಾ ಕುಳಿತುಕೊಂಡು ಕೇಳಿ ಮನೆಗೆ ಹೋಗಿ ಎಂಬ ರೀತಿಯಲ್ಲಿ ಬರೆದಂತೆ ಇ ಎಲ್ಲಿಯಾದರೂ ಒಂದು ರೀತಿಯ ಕಳಕಳಿ ಇದೆಯೇ? ಕೆಲವು ಈ ರಾಜ್ಯದ ನಡೆದಂತಹ ಘಟನೆಗಳ ಬಗ್ಗೆ ಪ್ರಸ್ತಾಪ ಅದಕ್ಕೆ ಪರಿಹಾರ ಕಂಡು ಹಿಡಿಯುವುದ ಸರ್ಕಾರ ಕಂಡು ಹಿಡಿದಿರುವಂಥಹ ಆಲೋಚನೆಗಳು ಮುಂದಿನ ವರ್ಷದಲ್ಲಿ ನಾ ಏನು ಗುರಿಯನ್ನು ಸಾಧಿಸಬೇಕು ಎಂದು ಇಟ್ಟುಕೊಂಡಿದ್ದೇವೆ, ಇವು ಯಾವುದ ಪ್ರಸ್ತಾಪವೂ ಇಲ್ಲ. ಮುಖ್ಯವಾಗಿ ಈ ದೇಶದಲ್ಲಿ ಇವತ್ತು ಪ್ರತಿನಿತ್ಯ ಪ್ರತಿಯೊಬ್ಬರು ನಾನು ಶೇಕಡ 70 ರಷ್ಟು ಜನ ಅನ್ನುತ್ತೇನೆ. ಪ್ರತಿಯೊಬ್ಬರು ಹೊಟ್ಟೆಗೆ ಕೇಂ ಸರ್ಕಾರ ಕನ್ನ ಹಾಕಿದೆ. ಪ್ರತಿಯೊಂದು ಮನೆಗೆ ಲೂಟಿ ಮಾಡಿದೆ. ಬೆಲೆ ಏ ಎಷ್ಟು ಆಗಿದೆ ಎಂದು ಹೇಳಿದರೆ ಇದು ಕೆಲವು ಸಂಸತ್ತಿನ ಅಥವಾ ಆಯುವ್ಯಯ ವ್ಯಾಪ್ತಿಗೆ ಬರತಕ್ಕಂಥಾ ವಸ್ತುಗಳು ಇದ್ದಾವೆ. ಕೆಲವು ಬಾರದೇ ಇರತಕ್ಕಂಥ ವಸ್ತುಗ ಇದ್ದಾವೆ. ಆಯುವ್ಯಯಕ್ಕೆ ಬಾರದೇ ಇರತಕ್ಕಂಥ ವಸ್ತುಗಳನ್ನು ಒಂದೊಂದಾಗಿ ಅ ಮಾಡಿಕೊಳ್ಳುವುದು ಆ ಬಜೆಟ್‌ಗೆ ಮುನ್ನ ಅದರ ಬೆಲೆಏರಿಸುತ್ತ ಹೋಗುವು ನಡೆಯುತ್ತಿದೆ. ಮೊದಲು ಅಡುಗೆ ಅನಿಲದ್ದು ಆಯಿತು. ಆಮೇಲೆ ಪಡಿತರ ಸ ಆಯಿತು. ಅಲ್ಲಿ ಆದ ಬೆಳವಣಿಗೆಗೆ ಮುಂದೆ ಏನು ಎನ್ನತಕ್ಕಂಥ ಆಲೋಚ ಮಾಡಿ ಇನ್ನೂ ಆ ಆಲೋಚನೆಯಿಂದ ಇನ್ನೂ ಹೊರಬಿದ್ದಿಲ್ಲ ಆಗಲೇ ಮ ಪೇಟೆಯ ಹಾಗೂ ಪಡಿತರ ಅಂತರವನ್ನು ಕಡಿಮೆ ಮಾಡಿದರು. ಇವು ಏನಾ ಅಂತರೆ ಹೊಸ ಆರ್ಥಿಕ ನೀತಿಯಿಂದಾಗಿ ಮುಕ್ತಪೇಟೆಯಲ್ಲಿ ಮಾರಾಟ ಮಾಡತಕ್ಕ ವಸ್ತುಗಳಿಗೂ ಪಡಿತರ ಮೂಲಕ ಕೊ ತತಕ್ಕಂಥ ವಸ್ತುಗಳಿಗೂ ಬಹಳ ವ್ಯತ್ಯಾಸ ಈಗ. ಅದರ ಉದ್ದೇಶ ಏನು? ಜನ ಏನು ಪಡಿತರ ಪದ್ಧತಿಗೆ ಚಿ ಹಿಡಿದುಕೊಂಡು ಹೋಗತಕ್ಕಂಥಾದ್ದು ಇದೆಯಲ್ಲಾ ಇದು ಇಲ್ಲದಿದ್ದರೆ ಸಾಕು ಎಂದುಹೆ ಅವರು ಅಸಹ್ಯ ಪಡುವ ಸ್ಥಿತಿಗೆ ತರಬೇಕು. This is the crux of the polit of economics of Dr. Manmohan singh.

ಅದಕ್ಕೆ ನಾವು ಬಲಿಯಾಗುತ್ತಾ ಇದ್ದೇವೆ ಪ್ರತಿನಿತ್ಯ. ಪಡಿತರ ಅಕ್ಕಿ ಬೆಲೆ ಎಣ್ಣೆ ಬೆಲೆ ಇದನ್ನೆಲ್ಲಾ ಏರಿಸಿ ಮುಂದೆ ಬೇಡಪ್ಪ ನಾವು ಏಕೆ ಇಲ್ಲಿಗೆ ಹೋಗಬೇಕು ಮುಕ್ತಮಾರುಕಟ್ಟೆಗೂ ಪಡಿತರ ವ್ಯವಸ್ಥೆಗೂ ಎಂಟಾಣೆ ಒಂದು ರೂಪಾಯಿ ವ್ಯತ್ಯಾಸ ಇದ್ದಾಗ ಈ ಕಾರ್ಡ್ ಹೊತ್ತುಕೊಂಡು ಈ ಹಿಂಸೆ ಅನುಭವಿಸುವುದಕ್ಕಿಂತ ನೇರವಾಗಿ ಅಲ್ಲೇ ತೆಗೆದುಕೊಳ್ಳೋಣ ಎನ್ನುವಂತಹ ಸ್ಥಿತಿಗೆ ಜನರನ್ನು ತರುವಂತಹ ಒಂದು ಪ್ರಯತ್ನ ಮಾಡುತ್ತಾ ಇದ್ದಾರೆ. ಈ ಪ್ರಯತ್ನದ ಫಲವಾಗಿ ಅಕ್ಕ ಬೆಲೆ ಜಾಸ್ತಿ ಆಯಿತು. ಗೋಧಿ ಬೆಲೆ ಜಾಸ್ತಿ ಆಯಿತು ಈ ಜಾಸ್ತಿಯಾದಂತಹ ಬೆಲೆ ಆಮೇಲೆ ಪೆಟ್ರೋಲ್ ಡೀಸೆಲ್ ಹಿಂದೆ ನಾವು ಬಜೆಟ್ ಬರುತ್ತಾ ಇದೆ. ನಾವು ಮೊದಲು ಯಾವುದರ ಬೆಲೆ ಜಾಸ್ತಿ ಆಯಿತು. ಎಂದು ನೋಡುತ್ತಿದ್ದೆವು. ಈಗ ಅದಲ್ಲ ಯಾವುದರ ಬೆಲೆ ಜಾಸ್ತಿ ಆಗಿಲ್ಲ ಎಂದು ಕಣ್ಣಿಗೆ ಭೂತ ಕನ್ನಡಿ ಹಾಕಿಕೊಂಡು ನೋಡಬೇಕಾಗಿದೆ. ದುರ್ದೈವ ಅಂದರೆ ನೋಡಿ, ತೆಂಗಿನಕಾಯಿ ಬೆಲೆ ಈಗ ಎರಡೂ ಎರಡೂವರೆ ರೂಪಾಯಿ. ಅದಕ್ಕೆ ಕಾರಣ ಕೂಡ ಕೇಂದ್ರ ಸರ್ಕಾರದ ನೀತಿ. ರೇಷ್ಮೆ ಬೆಲೆ ಕುಸಿತ ಇದಕ್ಕೂ ಕಾರಣ ಕೇಂದ್ರ ಸರ್ಕಾರದ ನೀತಿ. ನಾನು ವಿವರಕ್ಕೆ ಹೋಗುವುದಿಲ್ಲ.

ಶ್ರೀ ಟಿ.ಎಂ. ಮುಂಜುನಾಥ್ : ತಾವು ತೆಂಗಿನಕಾಯಿ ಬೆಲೆ ಕಡಿಮೆ ಆಗುವುದಕ್ಕೆ ಕೇಂದ್ರ ಸರ್ಕಾರದ ನೀತಿ ಕಾರಣ ಎಂದು ಹೇಳಿದಿರಲ್ಲಾ ಅದು ಏನು ಎಂಬುದನ್ನು ಸ್ವಲ್ಪ ಹೇಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಎಣ್ಣೆ ಕಾಳುಗಳು ಅದು ತೆಂಗಿನಕಾಯಿ ಇರಬಹುದು ಅದಕ್ಕೆ ಸಂಬಂಧಪಟ್ಟಂತದ್ದು ಇರಬಹುದು ಮೊದಲು ನಮ್ಮ ಕೊಬ್ಬರಿ ಮತ್ತು ತೆಂಗಿನ ಕಾಯಿ ಸಾಕಷ್ಟು ಎಕ್ಸ್‌ಪೋರ್ಟ ಆಗುತ್ತಿತ್ತು ಮತ್ತು ಕೊಬ್ಬರಿ ಎಣ್ಣೆ ಬೇರೆ ಬೇರೆ ದೇಶಕ್ಕೆ ಹೋಗುತ್ತಿತ್ತು. ಈಗ ಆ ಎಕ್ಸ್‌ಪೋರ್ಟ್‌ನಲ್ಲೂ.......

ಶ್ರೀ ಟಿ.ಎಂ. ಮಂಜುನಾಥ್ : ಏಕೆಂದರೆ ಅವರು ಸರಿಯಾದ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಿದ್ದಾರೆ. ತೆಂಗಿನ ಕಾಯಿ ಮತ್ತು ತೆಂಗಿನಕಾಯಿ ಎಣ್ಣೆ ಬೆಲೆ ಇಳಿಯುವುದಕ್ಕೆ ಕಾರಣ ಏನೆಂದರೆ ಪ್ರೊಡಕ್ಷನ್ ಜಾಸ್ತಿಯಾಯಿತು. ತಮಿಳುನಾಡಿನಲ್ಲಿ ಕೇರಳದಲ್ಲಿ ಮತ್ತು ನಮ್ಮ ದೇಶದಲ್ಲಿ ಒಂದು ವರ್ಷದ ಹಿಂಭಾಗದಲ್ಲಿ 10 ಸಾವಿರ ತೆಂಗಿನಕಾಯಿ ಇರತಕ್ಕಂಥ ರೈತನಿಗೆ 2 ಸಾವಿರ ಆಯಿತು. ಈ ಎಕ್ಸ್‌ಪೋರ್ಟ್ ನಮ್ಮ ದೇಶದಿಂದ ಮಾಡುತ್ತಿಲ್ಲ. ನಮ್ಮ ಮೇಲೆ ಕಾಂಪಿಟೇಟ್ ಮಾಡತಕ್ಕಂಥಾದ್ದು ಫಿಲಿಫೈನ್ಸ್ ಮತ್ತು ಸಿಲೋನ್ ದೇಶಗಳು ಏನು ಇವೆ ಅವು ನಮಗಿಂತ ಚೀಪ್ ರೇಟ್ ನಲ್ಲಿ ಎಕ್ಸ್‌ಪೋರ್ಟ್ ಮಾಡುತ್ತಿದ್ದಾರೆ. ಅದರಿಂದ ಎಕ್ಸ್‌ಪೋರ್ಟ್‌ನಿಂದ ಅಲ್ಲ, ಕನ್‌ಸಂಷನ್ ನಮಗೇ ಸಾಲದು. ಭಾರತದೇಶಕ್ಕೆ ಈ ಬೆಳೆಯ ಕನ್‌ಸಂಷನ್ ಸಾಲದು ರೇಟ್ ಇಗಿರತಕ್ಕಂಥಾದ್ದು ಆ ದೃಷ್ಟಿಯಲ್ಲಿ ನನ್ನ ಭಾಷನೆಯಲ್ಲಿ, ಅದು ತಮ್ಮ ಭಾವನೆಯಲ್ಲಿ ಏನಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾವು 6 ರಿಂದ 8 ಸಾವಿರ ಕಾಯಿಯನ್ನು ಸರಿಯುತ್ತಿದ್ದೆವು. ನಾವು ಕಾಯಿ ತುರಿ ಮಾಡಿ ಎಕ್ಸ್‌ಪೋರ್ಟ್ ಮಾಡುತ್ತಿದ್ದೆವು. ಅದು ಅಷ್ಟೂ ರದ್ದಾಗಿದೆ ಎನ್ನುವುದು ಸುಳ್ಳೇ? ಡೆಸಿಕೇಟೆಡ್ ಕೋಕೋನಟ್ ಎಂದು ಏನು ಮಾಡುತ್ತಿದ್ದೆವು ಅದು ಅಷ್ಟೇ ದಿವಸಕ್ಕೆ 8 ಸಾವಿರ ಕಾಯಿ ಕಡಿಮೆ ಆಯಿತಲ್ಲವೇ?

Dr. Y. Nagappa : The recent theory says in the medical science that this coconut contains lot of cholesterol. People have reduced the consumption of this oil. That is why the price has come down.

ಶ್ರೀ ಡಿ.ಬಿ. ಚಂದ್ರೇಗೌಡ : ಅದರ ಬೆಲೆ ಇಳಿದಿದೆ. ಪರಿಹಾರ ಏನು? ಡ್ರಿಪ್ಸ್ ಇರಿಗೇಷನ್‌ಗೆ ಕೊಡತಕ್ಕಂಥ ಸಬ್ಸಿಡಿಯನ್ನು ಜಾಸ್ತಿ ಮಾಡಿ, ಹೆಚ್ಚಾಗಿ ಬಳಕೆ ಮಾಡತಕ್ಕಂಥವರು ತೆಂಗುಬೆಳೆಗಾರರು ಇದರ ಪ್ರಸ್ತಾಪ ಇಲ್ಲಿ ಇರಬೇಕಾಗಿತ್ತು ಎನ್ನತಕ್ಕಂಥಾದ್ದು ಅಷ್ಟೇ.

ಅದಕ್ಕಿಂತ ಹೆಚ್ಚಿನ ವಿವರಕ್ಕೆ ನಾನು ಹೋಗುವುದಿಲ್ಲ. ಮುಕ್ತಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಅಕ್ಕಿ ಗೋಧಿ ಇದೆಯಲ್ಲಾ ಅದು ಅತ್ಯಂತ ಕಡುಬಡವರಿಗೆ ತಲುಪಿದೆಯೇ? ಪ್ರತಿಯೊಬ್ಬ ಶಾಸಕರೂ ತಮ್ಮ ಹೃದಯ ಮುಟ್ಟಿಕೊಂಡು ನೋಡಬೇಕು. ಅತ್ಯಂತ ಕಡುಬಡವರಿಗೆ ಇದು ತಲುಪುತ್ತಾ ಇದೆಯೇ? ನಮ್ಮ ಸರ್ಕಾರ ಬಂದು 3 ವರ್ಷ ಆಯಿತು. ಈಗ ಹಸಿರು ಕಾರ್ಡ್ ತೆಗೆದು ಮೂರು ನಾಮ ಹಾಕಿದ್ದೀರಿ. ತ್ರಿವರ್ಣ ಕಾರ್ಡ್. ಇದು ಇಷ್ಟು ಮಾಡುವುದಕ್ಕೆ 3 ವರ್ಷಬೇಕಾಯಿತು. ಈಗ ಎಲ್ಲಾ ಕಡೆ ಹಂಚುತ್ತಾ ಇದ್ದಾರೆ. ಅದೇ ಮೂರು ನಾಮದ ಕಾರ್ಡ್. ಮೊದಲು ಹಸಿರು ಕಾರ್ಡ್ ಇತ್ತು. ಈಗ ಮೂರು ನಾಮ. ಈ ಮೂರು ನಾಮದ ಕಾರ್ಡ್ ಹಂಚುವುದಕ್ಕೆ 3 ವರ್ಷಬೇಕಾಯಿತು. ನಿಮಗೆ. ಈ ಮೂರುವರ್ಷದ ಅಂತರ.

ಶ್ರೀ ಕರಿಯಣ್ಣ : ಮೂರು ನಾಮದ ಕಾರ್ಡ್ ಅನ್ನು ನಾವು ಎಲ್ಲೂ ಹಂಚಿಲ್ಲ. ತ್ರಿವರ್ಣ ಧ್ವಜದ್ದು ಎನ್ನತಕ್ಕಂಥಾದ್ದನ್ನು ತಾವು ಹಿರಿಯ ಸದಸ್ಯರುಗಳು ತಾವು ಅದರಡಿಯಲ್ಲಿಯೇ ಬೇಕಾದಷ್ಟು

ಶ್ರೀ ಡಿ.ಬಿ.ಚಂದ್ರೇಗೌಡ : ತಾವು ನನಗಿಂತ ಕನ್ನಡ ಚೆನ್ನಾಗಿ ಮಾತನಾಡುತ್ತೀರಿ. ತ್ರಿವರ್ಣ ಅಂತೀರಿ ನನಗೆ ಅಷ್ಟು ಚೆನ್ನಾಗಿ ಹೇಳುವುದಕ್ಕೆ ಬರುವುದಿಲ್ಲ ಅದಕ್ಕೆ ಮೂರು ನಾಮ ಅಂದೆ. ಜನಕ್ಕೆ ಅರ್ಥವಾಗುತ್ತದೆ ಅಂತ. ಅದು ನಿಮ್ಮ ಊರಿಗೆ ಹೋದಾಗ ನೀವು ಅದನ್ನೇ ಹೇಳಿ.ಇದನ್ನು ಬಳಕೆ ಮಾಡುವುದಕ್ಕೆ ಆ ತ್ರಿವರ್ಣ ಬಾವುಟ ಇತ್ತೋ ಇಲ್ಲವೋ ಸೀರೆ ಅಂತು ಇತ್ತು

ಶ್ರೀ ಕರಿಯಣ್ಣ : ತಾವು ಈಗ ತ್ರಿವರ್ಣ ಧ್ವಜ ಆದರೂ ನೋಡುತ್ತೀರಿ.

ಶ್ರೀ ಡಿ.ಬಿ.ಚಂದ್ರೇಗೌಡ : ನಮ್ಮ ಕಾಲದಲ್ಲಿ ಕನಿಷ್ಠ ಸೀರೆ ಇರುತ್ತಿತ್ತು. ಈಗ ಬೆತ್ತಲೆ ನಿಲ್ಲಿಸಿದ್ದಾರೆ. ಇದು ಆಗಬಾರದು ಅಂತ. ಈ ಸಾರ್ವಜನಿಕ ವಿತರಣಾ ವ್ಯವಸ್ಥೆ ಹದಗೆಟ್ಟಿರುವುದರಿಂದ ನನ್ನ ಅಂಕಿಅಂಶದ ಪ್ರಕಾರ ಬೇಕು ಅಂದ್ರೆ ಅಂಕಿಅಂಶ ಕೊಡುತ್ತೇನೆ ಶೇಕಡ ಅರ್ಧದಷ್ಟು ಭಾಗ ವ್ಯವಸ್ಥೆಯೇ ತಪ್ಪು ಅಂತ ಹೇಳಿದ್ದೇನೆ ನಾನು ಆ ವ್ಯವಸ್ಥೆಯಲ್ಲಿ ಸಿಗತಕ್ಕಂಥಾದ್ದು ಕೂಡ ಮುಕ್ತ ಮಾರುಕಟ್ಟೆಗೆ ಹೋಗುತ್ತಾ ಇದೆ. ನಿಮ್ಮ ಆಹಾರ ಇಲಾಖೆ ಏನು ಕೆಲಸ ಮಾಡುತ್ತದೆ ಕಾರ್ಡ್ ಕೊಡುವುದಕ್ಕೆ ಮೂರು ವರ್ಷ. ಅದು ಜನರಿಗೆ ತಲುಪಿದೆಯ ನನ್ನ ಕ್ಷೇತ್ರದಲ್ಲಿ ಈಗ ಹಂಚುತ್ತಿದ್ದಾರೆ ಅರ್ಧ ಭಾಗ ಹರಿದು ಹೋಗುತ್ತಿದ್ದಾವೆ.

ಶ್ರೀ ಎಂ. ನಾರಾಯಣಸ್ವಾಮಿ : ಹಂಚಿದ್ದರೂ ಕೂಡ ಕಳೆದ 3-4 ತಿಂಗಳಿಂದ ಆಹಾರಧಾನ್ಯಗಳ ಸಪ್ಲೈ ಇಲ್ಲ.

5.20 ಪಿಎಂ

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರೇ, ಏನಾಗಿದೆ ಎಂದರೆ ಅರ್ಧಭಾಗ ಮಾರುಕಟ್ಟೆಗೆ ಉಳಿದರ್ಧ ಭಾಗ ಯಾರಿಗೆ ಅಗತ್ಯವಿಲ್ಲ ಅವರಿಗೆ ಹೋಗುತ್ತದೆ. ಇದನ್ನು ಅಷ್ಟೇ ಜವಾಬ್ದಾರಿಯಿಂದ ಹೇಳಿ ಬಿಡುತ್ತೇನೆ. ದಯವಿಟ್ಟು ಇದನ್ನು ಪರಿಶೀಲನೇ ಮಾಡಿ. ಅಧ್ಯಕ್ಷರೇ, ಕ್ಷೀರ ಯೋಜನೆ. ಅದನ್ನು ತುಂಬಾ ಸ್ವಾಗತಿಸಿದವರಲ್ಲಿ ನಾನೂ ಒಬ್ಬ. ಆದರೆ ಏನಾಗಿದೆ ಎಂದರೆ ಬಾಲಗ್ರಹಪೀಡೆಯಿಂದ ಅದು ನರಳುತ್ತಿದೆ. ಒಂದು ಪ್ರೈಮರಿ ಶಾಲೆಯಲ್ಲಿ ಒಂದು ತರಗತಿ ಮಕ್ಕಳಿಗೆ ಕೊಡುವುದು, ಮೂರು ತರಗತಿ ಮಕ್ಕಳು ಆ ಮಕ್ಕಳು ಕುಡಿಯುವುದನ್ನು, ನಿಂತುಕೊಂಡು ನೋಡುವುದು

ಹಿಂಸೆ ಹಿಂದೆಯಲ್ಲಾ, ಅದರ ಅನುಭವ ನಿಮಗೂ ಆಗಿರಬಹುದು. ಆ ಮಕ್ಕಳಿಗೆ ಮಧ್ಯಾಹ್ನ ಕೊಡ್ತಿರ್ತಾರೆ ಬೇರೆ ಮಕ್ಕಳು ನಿಂತುಕೊಂಡು ನೋಡುತ್ತಿರುತ್ತಾರೆ. ಈ ಮಕ್ಕಳು ಏನು ಪಾಪ ಮಾಡಿವೆ? ಕೊಡೋದು ಅಂತಾದರೆ ಒಂದರಿಂದ ನಾಲ್ಕು ವರ್ಷದ ಎಲ್ಲಾ ಮಕ್ಕಳಿಗೂ ಕೊಡುವುದು. ಒಂದನೇ ಕ್ಲಾಸಿನ ಮಕ್ಕಳಿಗೂ ಎರಡನೇ ಕ್ಲಾಸಿನ ಮಕ್ಕಳಿಗೂ ಅಂತರ ಎಷ್ಟು, ಒಂದು ವರ್ಷ. 6 ವರ್ಷದ ಹುಡುಗ ನಿಂತುಕೊಂಡು ನೋಡುತ್ತಿರುತ್ತಾನೆ. 5 ವರ್ಷದ ಹುಡುಗ ಹಾಲನ್ನು ಕುಡಿಯುತ್ತಿರುತ್ತಾನೆ. ಇದು ಅಸಹ್ಯ, ತಾಯಿಯಾಗಿ ನಿಮಗೆ ಇದು ಹೆಚ್ಚು ತಿಳಿಯಬೇಕು.

ಶ್ರೀ ಸಿ. ಬೈರೈಗೌಡ : ಅನೇಕ ಹಳ್ಳಿಗಳಲ್ಲಿರುವ ಶಾಲೆಗಳಲ್ಲಿ ಈವತ್ತು ಇರುವುದು ಒಂದೇ ಕೊಠಡಿ, ಅದರಲ್ಲಿ ನಾಲ್ಕು ತರಗತಿ ಮಕ್ಕಳು ಕುಳಿತು ಪಾಠ ಕಲಿಯುತ್ತವೆ. ಮೊದಲನೇ ತರಗತಿ ಮಕ್ಕಳಿಗೆ ಕೊಟ್ಟರೆ, ಎರಡು ಮೂರು ನಾಲ್ಕು ತರಗತಿ ಮಕ್ಕಳು ಈ ಒಂದನೇ ತರಗತಿ ಮಕ್ಕಳು ಹಾಲು ಕುಡಿಯುವುದನ್ನು ನೋಡಿಕೊಂಡು ಕುಳಿತಿರಬೇಕು. ಅವರಿಗಂತೂ ಹಾಲು ಸಿಕ್ಕುವುದಿಲ್ಲ ಅದನ್ನೇ ಮಾನ್ಯ ಚಂಗ್ರೇಗೌಡರು ಹೇಳುತ್ತಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಲವು ಕಡೆ ಈಗ, ಸ್ವಲ್ಪ ನೀರು ಬೆರೆಸಿ ಎಲ್ಲಾ ಮಕ್ಕಳಿಗೂ ಸ್ವಲ್ಪ ಸ್ವಲ್ಪ ಕೊಡುತ್ತಿದ್ದಾರೆ. ಇದನ್ನು ನಾನು ತಪ್ಪು ಎಂದು ಹೇಳುವುದಿಲ್ಲ, ನಾನು ಇಲ್ಲಿ ಒತ್ತಿ ಏನು ಹೇಳುತ್ತೇನೆಂದರೆ ನಿಮ್ಮ ಈ ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಾಗಬೇಕಾದರೆ ನೀವು ಏನು ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು. ಈಗ ಸಕ್ಕರೆ ಸಿಗುವುದಿಲ್ಲ ಹಾಲಿಗೆ, ಕಾಯಿಸುವುದಕ್ಕೆ ಪಾತ್ರೆ ಸಿಗುವುದಿಲ್ಲ, ಸೀಮೆಎಣ್ಣೆ ಸಿಕ್ಕುವುದಿಲ್ಲ.

ಶ್ರೀ ಕೆ.ಎಚ್. ರಂಗನಾಥ್ :ನಾನು ಬಹಳ ದಿವಸದಿಂದ ಬಲ್ಲೆ ಚಂದ್ರೇಗೌಡರನ್ನು, ನಮ್ಮಲ್ಲಿ ಬಹಳ ಚೆನ್ನಾಗಿದ್ದರು ಅವರು. ನನಗೆ ಸರ್ವಜ್ಞನ ಪದ್ಯ ಒಂದು ನೆನಪಾಗುತ್ತದೆ. ಒಳ್ಳೆಯವ ಕಳ್ಳರೊಡನಾಡಿ ಅವ ಶುದ್ಧ ಕಳ್ಳನೇ ಆದ ಸರ್ವಜ್ಞ ಅಂತ. ಅವರು ಆ ರೀತಿ ಆಗಿಬಿಟ್ಟರೇನೋ ನನಗೆ ಗೊತ್ತಿಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ : ಆದರೆ ನಾನು ಹೇಳುತ್ತಿದ್ದೇನೆ ಎಂದರೆ ಈ ಸಾರ್ವಜನಿಕ ವಿತರಣೆ ವ್ಯವಸ್ಥೆಯಲ್ಲಿ ಕನಿಷ್ಠ ಇಂತಹ ಒಳ್ಳೆಯ ಕಾರ್ಯಕ್ರಮಕ್ಕೆ ಸಕ್ಕರೆ, ಸೀಮೆಯೆಣ್ಣೆ ಇಂತಹ ಅಗತ್ಯವಸ್ತುಗಳನ್ನು ಕೊಡಿ ಎಂಬುದು ನನ್ನ ಸಲಹೆ. ಬೆಲೆ ಏರಿಕೆ ಬಗ್ಗೆ ಪ್ರಸ್ತಾಪ ಮಾಡಿದರು. ಕಾವೇರಿ ಜಲವಿವಾದದಂತಹ ಒಂದು ಸಮಸ್ಯೆ....

ಶ್ರೀ ಎನ್.ಜಿ. ನಾಯಕ್ : ಅಧ್ಯಕ್ಷರೇ, ಒಂದು ತಾಳಿ ಕುಟ್ಟುವುದಕ್ಕೆ ಗಂಡಸಿಗೆ ಯೋಗ್ಯತೆ ಇಲ್ಲ ಎಂದು ಮಾಡಿದ್ದರು, ಅದನ್ನು ನಾವು ತೆಗೆದುಹಾಕಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಿಮಗೆ ಈ ವಯಸ್ಸಿನಲ್ಲಿ ತಾಳಿ ಕಟ್ಟುವ ಯೋಚನೆ ಏತಕ್ಕೆ ಬಂತು?

ಕಾವೇರಿ ಜಲವಿವಾದದಂತಹ ಒಂದು ಜ್ವಲಂತ ಜೀವಂತ ಸಮಸ್ಯೆ ಬಗ್ಗೆ ಒಂದು ಅಕ್ಷರವಾಗಲಿ ಇಲ್ಲ. ಇದನ್ನು ನ್ಯಾಯಮಂಡಲಿಗೆ ಒಪ್ಪಿಸಿದ್ದೇವೆ. ನ್ಯಾಯಮಂಡಲಿಯನ್ನು ಹೊರತುಪಡಿಸಿ ವಿಶೇಷವಾದ ಒಂದು ಸಮಿತಿ ರಚನೆ ಮಾಡಿದ್ದಾರೆ. ಆ ಸಮಿತಿ ಸಭೆಗೆ ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಹೋಗಿದ್ದಾರೆ. ಏನು ನಡೆಯಿತು, ಅಲ್ಲಿ, ವಿಶೇಷವಾಗಿ ಎಷ್ಟು ನೀರು ಹೋಗಿದೆ ಎಂದು ನೋಡುವುದಕ್ಕೆ ಒಂದು ವಿಶೇಷ ಸಮಿತಿ ಎಲ್ಲಾ ರಾಜ್ಯಗಳ ಮುಖ್ಯಕಾರ್ಯದರ್ಶಿಗಳುಸೇರಿ ಮಾಡಿದ್ದಾರೆ. ಕೇಂದ್ರದವರರೇ ಅಳತೆ ಮಾಡುವಂತಹ ಒಂದು ವ್ಯವಸ್ಥೆ ಇದೆ. ಆ ವ್ಯವಸ್ಥೆಯನ್ನು ಹೊರತುಪಡಿಸಿ ರಾಜ್ಯದವರು ಕೊಟ್ಟಿದ್ದರೆ ತಪ್ಪಾಗುತ್ತದೆ. ಆ ವ್ಯವಸ್ಥೆಗೆ ಹೊರತು ಪಡಿಸಿ ಇಂತಹ ಒಂದು ಸಮಿತಿಯನ್ನು ಮಾಡುವಂತಹ ಅವಶ್ಯಕತೆ ಏನಿತ್ತು ಮತ್ತು

ಅದು ಯಾವ ಸ್ಥಿತಿಯಲ್ಲಿದೆ? ಅದರ ಚಿಂತನೆಯನ್ನು ಮಾಡುವುದು ಬೇಡವೇ ಇಲ್ಲಿ? ಹೇಮಾವತಿ ನೀರು ಬರುತ್ತದೆ ಎಂದು ನಮ್ಮ ತುಮಕೂರಿನ ಶಾಸಕರು ಜನ ಕಣ್ಣು ಬಾಯಿ ಕಿವಿ ತೆರೆದುಕೊಂಡು ಕುಳಿತಿದ್ದಾರೆ. ನಿಮಗೆ ಕೊನೆಯ ಪಕ್ಷ ಕೊನೇ ದಿವಸ ಬಿಡುವುದಕ್ಕೆ ಒಂದು ಚಮಚ ನೀರಾದರೂ ಸಿಗುತ್ತದೆಯೋ ಇದರ ಬಗ್ಗೆ ಸ್ವಲ್ಪ ಆಲೋಚನೆ ಮಾಡಿ ಅಂತ ನಿಮಗೆ ಹೇಳುತ್ತೇನೆ. ನಿಮಗೆ ಕುಡಿಯುವ ನೀರು ಕೊಡಬೇಕು ಅದಕ್ಕಾಗಿ ಹಣ ಎಷ್ಟು ಖರ್ಚಾಗುತ್ತದೆ? ಸ್ವಾಮಿ ಎಲ್ಲಿ ಹೇಳಬೇಕೋ ಅಲ್ಲಿ ಹೊರತುಪಡಿಸಿ ಉಳಿದ ಎಲ್ಲಾ ಕಡೆ ಮುಖ್ಯಮಂತ್ರಿಗಳು ನೀರಾವರಿಗೆ 850 ಕೋಟಿ ಕೊಟ್ಟಿದ್ದೇವೆ ಎನ್ನುತ್ತಾರೆ. ಮೊನ್ನೆ ಕನ್ನಡ ಸಾಹಿತ್ಯ ಪರಿಷತ್ತಿನ ಸಭೆಯಲ್ಲೂ ಕೂಡ ಮಂಡ್ಯದ ಜನರಿಗೆ ಈ ಮಾತನ್ನು ಹೇಳಿದ್ದಾರೆ. ಕೃಷ್ಣ ನೀರನ್ನು 2000 ಇಸವಿಯೊಳಗೆ ನಾವು ಬಳಕೆ ಮಾಡಿಕೊಳ್ಳುತ್ತೇವೆ. ಕಾವೇರಿಯ ನಮ್ಮ ಹಕ್ಕನ್ನು ಉಳಿಸಿಕೊಳ್ಳುತ್ತೇವೆ ಅದಕ್ಕಾಗಿ ವಿಶೇಷವಾದ ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ರಹಸ್ಯಪತ್ರ ಏನು ಕಳುಹಿಸುತ್ತಾರೆ? 5-11-93ರಲ್ಲಿ ಸರ್ಕಾರ ಒಂದು ರಹಸ್ಯ ಸುತ್ತೋಲೆ ಹೋಗುತ್ತದೆ. ವಿಷಯ : ನೀರಾವರಿ ಇಲಾಖೆ, ಇಸಿಪಿಸಿ ಅಂದರೆ ಇಂಜಿನಿಯರಿಂಗ್ ಚೀಫ್, ನೀರಾವರಿ ಇಲಾಖೆಯಿಂದ ರಹಸ್ಯಪತ್ರ ಹೋಗುತ್ತದೆ. ಈ ರಹಸ್ಯ ಪತ್ರದ ವಿಚಾರ ಏನು? ಕಾಮಗಾರಿಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಎಚ್ಚರಿಕೆ ವಹಿಸುವ ಬಗ್ಗೆ. ದಿನಾಂಕ 2-11-93ರಂದು ನಡೆದ ಬಹು ಹಂತದ ಮಾಸಿಕ ಸಭೆಯಲ್ಲಿ ಆಯವ್ಯಯಕ್ಕೆ ವಿರುದ್ಧವಾಗಿ ಎಷ್ಟರಮಟ್ಟಿನ ಪಾತ್ರವನ್ನು ನಾವು

(ಶ್ರೀ ಬಿ.ಎಂ. ಇದಿನಬ್ಬ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಿರೀಕ್ಷಿಸಬಹುದು ಎಂಬುದರ ಬಗ್ಗೆ ತಿಳಿಸಿರುವುದು ನಿಮಗೆ ತಿಳಿದಿದೆ. ಈ ವಾಸ್ತವಾಂಶವನ್ನು ಗಮನದಲ್ಲಿಟ್ಟುಕೊಂಡು ಈಗ ಉಳಿದಿರುವ ಐದುತಿಂಗಳಲ್ಲಿ ನವೆಂಬರ್ ಡಿಸೆಂಬರ್ ಜನವರಿ ಫೆಬ್ರವರಿ ಮಾರ್ಚಿ ತಿಂಗಳಲ್ಲಿ ತೆಗೆದುಕೊಳ್ಳಲೇಬೇಕಾಗಿರುವ ಕಾಮಗಾರಿಗಳ ಪಟ್ಟಿಯನ್ನು ಪುನಃ ತಯಾರಿಸಿ ಇದರಲ್ಲಿ ನೇರವಾಗಿ ನೀರು ಸರಬರಾಜಿಗೆ ಅನುಕೂಲವಾಗುವ ಹಾಗೂ ಇಷ್ಟವಾದ ಕಾಮಗಾರಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲು ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿದೆ. ಕಾರ್ಯಪಾಲಕ . ಅಭಿಯಂತರರಿಗೆ ಕಾರ್ಯಕ್ರಮದಲ್ಲಿ ಅನುಮೋದಿತವಾಗಿದೆ ಎಂಬ ನೆಪದಿಂದ ಎಲ್ಲಾ ಕಾಮಗಾರಿಗಳನ್ನೂ ಕಾರ್ಯರೂಪಕ್ಕೆ ತರುವುದಕ್ಕೆ ಬಿಟ್ಟರೆ ಬಿಲ್ಲುಗಳ ರಾಶಿಯೇ ಹರಿದು ಬಾಕಿ ಬಿಲ್ಲುಗಳ ಪ್ರಮಾಣ ಅಧಿಕವಾಗುವುದು.

ಇದು ಸರ್ಕಾರದ ಹಿತದೃಷ್ಟಿಯಿಂದ ಒಳ್ಳೆಯದಲ್ಲ, ಒಂದು ವೇಳೆ ಹೀಗೆ ಆಗಲು ಬಿಟ್ಟರೆ ಅದು ನಿಯಂತ್ರಣಾಧಿಕಾರಿಗಳಾದ ಅಧೀಕ್ಷಕ ಅಭಿಯಂತರರು ಹಾಗೂ ಮುಖ್ಯ ಅಭಿಯಂತರರ ಅದಕ್ಷತೆಯನ್ನು ಎತ್ತಿ ತೋರಿಸುತ್ತದೆ. ಆದ್ದರಿಂದ ಬಿಲ್ಲುಗಳ ಸಂಖ್ಯೆ ಹೆಚ್ಚದಂತೆ ಮತ್ತು ವೆಚ್ಚವನ್ನು ಲಭ್ಯವಿರುವ ಅನುದಾನಕ್ಕೆ ಶೇಕಡ 67ಕ್ಕೆ ಮಿತಿಗೊಳಿಸಿ ಸೂಕ್ತ ನಿರ್ದೇಶನ ನೀಡಲು ತಿಳಿಸಲಾಗಿದೆ. ಇದು ರಹಸ್ಯಪತ್ರ ಆದೇಶ. ಸಾಹಿತ್ಯ ಪರಿಷತ್ತಿನಲ್ಲಿ ಹೊರಗಡೆ ಘೋಷಣೆ 850 ಕೋಟಿ ಕೊಟ್ಟಿದ್ದೇವೆ, ಎಲ್ಲಾ ಹಣ ಖರ್ಚು ಮಾಡುತ್ತೇವೆ. ಈ ಪತ್ರ ಸರ್ಕಾರದ್ದೇ. ಅವರಿಗೆ ಬೇಕಾದರೆ ದಾಖಲೆ ಕೊಡುತ್ತೇನೆ. ಅದಕ್ಕಾಗಿಯೇ ನಾನು ಹೇಳಿದೆ : ಸದನದ ಹೊರಗಡೆ ರಾಜ್ಯದ ಮುಖ್ಯಮಂತ್ರಿಗಳು ಹೇಳತಕ್ಕಂತಹ ಅನೇಕ ಸುಳ್ಳುಗಳನ್ನು ರಾಜ್ಯಪಾಲರ ಭಾಷಣದಲ್ಲಿ ದೃಢೀಕರಣ ಮಾಡುವಂತಹ ಪ್ರಯತ್ನ ನಡೆದಿದೆ ಎಂದು ಇದಕ್ಕೆ ಅನೇಕ ವಿವರಣೆಗಳನ್ನು ನಾನು ಹೆಚ್ಚು ದೀರ್ಘವಾಗಿ ಕೊಡುವುದಕ್ಕೆ ಹೋಗುವುದಿಲ್ಲ.

ಇದೊಂದನ್ನು ಸರಕಾರದ ಗಮನಕ್ಕೆ ತರುತ್ತೇನೆ. ಮತ್ತೊಂದು ಈ ಆದೇಶದಲ್ಲಿ ನಿಯಂತ್ರಣಾಧಿಕಾರಿಗಳು ಅದರಲ್ಲೂ ರಾಜ್ಯ ಮಟ್ಟದ ಅಧಿಕಾರಿಗಳು ಯಾವುದಾದರೂ ಹೆಚ್ಚಿನ ವೆಚ್ಚಕ್ಕೆ ಅವಕಾಶ ನೀಡಿದರೆ ಅದು ನಿಯಂತ್ರಣದ ಕೊರತೆ ಮತ್ತು ಮೇಲಿನ

ಅಧಿಕಾರಿಗಳು ಅನುಭವಿಸುತ್ತಿರುವ ತೊಂದರೆಗಳನ್ನು ಅರ್ಥ ಮಾಡಿಕೊಳ್ಳುವುದರ ಕೊರತೆಯನ್ನು ಎತ್ತಿ ತೋರಿಸುತ್ತದೆ. ಹಾಗೂ ಅವರ ನಿರ್ವಹಣೆ ಬಗ್ಗೆ ಒಳ್ಳೆಯ ಅಭಿಪ್ರಾಯ ಮೂಡುವುದಿಲ್ಲ. ಅದನ್ನು ಮೂಡಿಸುವಲ್ಲಿ ಅಸಫಲವಾಗುತ್ತವೆ ಮತ್ತು ಅದನ್ನು ದಾಖಲೆಯಲ್ಲಿರುವ ಅವಶ್ಯಕತೆ, ಇಲ್ಲಿ ನಾವು ಮೇಲಿನ ಅಂಶಗಳನ್ನು ಗಮನಿಸಿ ಕಾರ್ಯೋನ್ಮುಖವಾಗುವುದು. ಇದು ಸರಕಾರದ ನೀರಾವರಿ ಇಲಾಖೆ ಕಳುಹಿಸಿರತಕ್ಕಂತಹ ಸುತ್ತೋಲೆ. ಆದ್ದರಿಂದ ಯಾವುದನ್ನು ಸಾಧ್ಯವಿಲ್ಲವೆಂದು ನಿಮ್ಮ ಮನಸ್ಸಿಗೆ ನಾಟುತ್ತದೆ ಅದನ್ನು ಹೇಳಿ. ಶ್ರೀಮಾನ್ ವೈ.ಕೆ. ರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಪ್ಲಾನಿಂಗ್ ವಾರ್ಷಿಕ ಯೋಜನೆಯಲ್ಲಿ ಯಾವ ರೀತಿ ಕಡಿತವಾಗುತ್ತದೆನ್ನುವ ವಿವರಕ್ಕೆ ನಾನು ಹೋಗುವುದಿಲ್ಲ. ಸಾಧ್ಯವಾಗದೇ ಇರತಕ್ಕಂತಹ ಗುರಿಯನ್ನೇಕೆ ಹಾಕಿಕೊಳ್ಳುತ್ತೀರಿ? ಈ ಸಾರಿಯದ್ದು ಕಳೆದ ವರ್ಷದ 58 ರಷ್ಟು ಹೆಚ್ಚು. ಆ 58 ಹೆಚ್ಚಾದುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಬೆನ್ನು ತಟ್ಟಿಕೊಂಡರಲ್ಲಾ, ನಾವು ಮುಂದಿನ ವರ್ಷ ಕೇಳೋಣವೆಂದರೆ ಇವರು ಇರುತ್ತಾರೋ ಇಲ್ಲವೋ ಗೊತ್ತಿಲ್ಲ. ವರ್ಷಕ್ಕೊಬ್ಬಬ್ಬರು ಮುಖ್ಯ ಮಂತ್ರಿ 3 ವರ್ಷಕ್ಕೆ 3 ಜನ ಮುಖ್ಯಮಂತ್ರಿಗಳು. ಒಬ್ಬೊಬ್ಬರು ಒಂದೊಂದು ಆಶ್ವಾಸನೆ ನೀಡುತ್ತಾರೆ. ಒಬ್ಬರು ಬಂದಾಗ ಹೈದರಾಬಾದ್ ಅಭಿವೃದ್ಧಿ ಪ್ರಾಧಿಕಾರ ಮತ್ತೊಬ್ಬರು ಬಂದಾಗ ಮಲೆನಾಡು ಅಭಿವೃದ್ಧಿ ಮಂಡಲಿ ಮೂರನೆಯವರು ಬಂದಾಗ ಬಯಲು ನಾಡಿನ ಅಭಿವೃದ್ಧಿ ಮಂಡಲಿ. ನಾಲ್ಕನೆಯವರು ಯಾವುದಕ್ಕೆ ಯೋಜನೆ ಹಾಕುತ್ತಾರೋ ಗೊತ್ತಿಲ್ಲ. ಇದೊಂದು ಉದಾಹರಣೆ ಅಷ್ಟೆ. ಇಂತಹ ನೂರಾರು ಉದಾಹರಣೆಗಳನ್ನು ನಾವು ಕೊಡಬಹುದು. ಮಕ್ಕಳನ್ನು ಡಿಸ್ಕಿಂಗ್ ಟೇಬಲ್ ಹಾಕಿ ಪ್ರತಿ ವರ್ಷ ಒಂದೊಂದು ಕಾರ್ಯಕ್ರಮ ಬಟ್ಟೆ ಪುಸ್ತಕ ಕೊಟ್ಟರೆ...

ಒಬ್ಬ ಮಾನ್ಯ ಸದಸ್ಯರು : ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿ ಕೆಲಸ ನಡೆದಿಲ್ಲವೆಂದು ಹೇಳುತ್ತೀರಾ?

ಶ್ರೀ ಡಿ.ಬಿ. ಚಂದ್ರೇಗೌಡ : ಒಬ್ಬೊಬ್ಬ ಮುಖ್ಯಮಂತ್ರಿಗಳು ಕೊಟ್ಟ ಒಂದೊಂದು ಕಾರ್ಯಕ್ರಮ. ಅದಕ್ಕೆ ಹಣವೆಷ್ಟು ಖರ್ಚಾಗಿದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಈ ಸಾರಿ ಮಲೆನಾಡು ಅಭಿವೃದ್ಧಿ ಮಂಡಲಿಗೆ 85 ಕೋಟಿ ರೂಪಾಯಿ ಖರ್ಚಾಗಬೇಕಾಗಿತ್ತು. ಆದರೆ ಬಿಡುಗಡೆ ಮಾಡಿರತಕ್ಕಂತಹ ಹಣವೆಷ್ಟು? ತುಟಿಗೆ ತುಪ್ಪವನ್ನೇಕೆ ಹಚ್ಚುತ್ತೀರಿ? ನಿರೀಕ್ಷಿತವಾಗಿ ಆಗಲೇ ಈ ವರ್ಷ 45 ಕೋಟಿ ಹಣ ಬಿಡುಗಡೆ ಮಾಡುತ್ತೇವೆಂದು ಬಡ್ಜೆಟ್ಟಿನಲ್ಲಿ ಹೇಳಿದ್ದೀರಿ. ಇನ್ನು ಒಂದು ತಿಂಗಳು ಇದೆ. ಇದುವರೆಗೆ ಬಿಡುಗಡೆಯಾಗಿರುವ ಹಣ 10 ಕೋಟಿ ರೂಪಾಯಿ, ಇದೆಲ್ಲಾ ಶ್ರೀಮತಿ ಮೋಟಮ್ಮನವರಿಗೆ ಕೇಳುವುದಿಲ್ಲ. ಮಲೆನಾಡು ಅಭಿವೃದ್ಧಿ ಮಂಡಲಿಗೆ 45 ಕೋಟಿ ರೂಪಾಯಿ ವೆಚ್ಚವಾಗಬೇಕಾಗಿತ್ತು. ಆಯವ್ಯಯದಲ್ಲಿ ಆಗಬೇಕಾಗಿತ್ತು. ನಾನು ಇದನ್ನು ಸುಳ್ಳಿನ ದೃಢೀಕರಣವೆನ್ನದೆ ಇನ್ನು ಯಾವ ಭಾಷೆಯಿಂದ ಹೇಳಲಿ? ಇಂತಹ ಅನೇಕ ವಿರೋಧಾಭಾಸ ವಾದಂಥ ಕಾರ್ಯಕ್ರಮಗಳನ್ನು ಒಬ್ಬೊಬ್ಬ ಮುಖ್ಯಮಂತ್ರಿಗಳು ಬಂದಾಗ.....

ಶ್ರೀಮತಿ ಮೋಟಮ್ಮ : ಮಲೆನಾಡು ಅಭಿವೃದ್ಧಿ ಮಂಡಲಿ ಬಗ್ಗೆ ಕ್ಲಿಯರ್ ಮಾಡುತ್ತೇನೆ. ಶ್ರೀ ಚಂದ್ರೇಗೌಡರು ನನ್ನ ಗುರುಗಳು. ಅವರಿಗೆ ಸುಳ್ಳನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಅವರಿಗೂ ಗೊತ್ತು. ತಾವು ಸಂತೋಷಪಟ್ಟು ಕೊಳ್ಳಬೇಕು. ಹಣ ಕೊಡದೇ ಬರೀ ಕುರ್ಚಿಗೋಸ್ಕರ, ಕಾರಿಗೋಸ್ಕರ ನನ್ನನ್ನು ಅಧ್ಯಕ್ಷಳನ್ನಾಗಿ ಮಾಡಿದರೆ ನಾನು ಆಗುವುದಿಲ್ಲವೆಂದು ನಾನು ಪ್ರಾರಂಭದಲ್ಲೇ ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸಿದ್ದೇನೆ. ಹಣ ಕೊಟ್ಟರೆ ಮಾತ್ರ ಕೆಲಸ ಮಾಡುತ್ತೇನೆಂದು ಹೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಿಗೆ ನಾವು ಅಭಿನಂದಿಸಬೇಕು. ಮೊದಲೇ ನಮ್ಮ ಹತ್ತಿರ 9 ಕೋಟಿ ಇತ್ತು. ಅದಾದ ನಂತರ 20 ಕೋಟಿ ರಿಲೀಸಾಗಿದೆ ಎಲ್ಲಾ ಜಿಲ್ಲೆಗೆ 2-2 ಕೋಟಿ ಕೊಟ್ಟಿದ್ದೇವೆ. ಶಿವಮೊಗ್ಗಕ್ಕೆ 2 ಕೋಟಿ 25 ಲಕ್ಷ ರಿಲೀಸ್ ಮಾಡಿದ್ದೇವೆ. ವರ್ಕ್

ಪ್ರೋಗ್ರೆಸ್ ಮೇಲೆ ಹಣ ಬಿಡುಗಡೆ ಮಾಡಿದ್ದೇವೆ. ಮಾರ್ಚ್ ಒಳಗೆ ಬಾಕಿ ಹಣ ತೆಗೆದುಕೊಳ್ಳುತ್ತೇವೆ.

ವೈಸ್ ಚೇರ್ಮನ್ : ಈಗ ಒಂದು ಒಳ್ಳೆ ಸುದ್ದಿ ಸಿಕ್ಕಿದಂತಾಯಿತು. ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎಂಬುದು ಗೊತ್ತಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ : ನನಗೆ ಬೇಕಾಗಿದ್ದುದ್ದೂ ಅಷ್ಟೇ ಕಳೆದ ವರ್ಷ 45 ಕೋಟಿ ಕೊಟ್ಟಿದ್ದರೂ 45 ರೂಪಾಯಿ ಖರ್ಚಾಗಿಲ್ಲ ಇದು 91-92ರಲ್ಲಿ. 90-91ಕ್ಕೆ 10 ಕೋಟಿ ನಿಗದಿ ಮಾಡಿದ್ದರು 10 ರೂಪಾಯಿ ಖರ್ಚಾಗಿಲ್ಲ. ಈ ವರ್ಷ 45 ಕೋಟಿ ಎಂದು ಇಂಡಿಕೇಷನ್ ಮಾಡಿದ್ದೀರಿ.

ಶ್ರೀಮತಿ ಮೋಟಮ್ಮ : ಹಾಗಾದರೆ ನಿಮ್ಮ ಕ್ಷೇತ್ರಕ್ಕೆ ಕೊಟ್ಟಂತಹ ಹಣವನ್ನೆಲ್ಲಾ ಏನು ಮಾಡಿದಿರಿ? ಶಿವಮೊಗ್ಗಕ್ಕೆ 2 ಕೋಟಿ 25 ಲಕ್ಷ ಕೊಟ್ಟಿದ್ದೇವೆ. ಅಂದರೆ ಆ ಹಣವನ್ನು ಜಿಲ್ಲಾಧಿಕಾರಿಗಳೊಬ್ಬರೇ ಅವರ ಅಕೌಂಟಿನಲ್ಲಿ ಇಟ್ಟುಕೊಂಡಿದ್ದಾರೆಂಬ ಅರ್ಥವೇ? ವರ್ಕ್ ಪ್ರೋಗ್ರೆಸ್ ಮೇಲೆ ಕೊಟ್ಟಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಹೇಳುತ್ತಿರುವುದು ನಿಮ್ಮ ಪರವಾಗಿ. ಬಡ್ಜೆಟ್ಟಿನಲ್ಲಿ ಹೇಳಿದಂತಹ 45 ಕೋಟಿ ನಿಮಗೆ ಸಿಗಲಿ ಅದರ ಲಾಭ ನಮ್ಮ ಕ್ಷೇತ್ರಗಳಿಗೂ ಆಗಲಿ ಎಂಬ ಸದಿಚ್ಛೆಯಿಂದ ಹೇಳುತ್ತಿದ್ದೇನೆ.

ಕೊನೆಯದಾಗಿ ಒಂದು ಮಾತು. ವಿಕೇಂದ್ರೀಕೃತ ವ್ಯವಸ್ಥೆ ಬಗ್ಗೆ ಮೋಟಮ್ಮನವರು ಮಾತನಾಡುತ್ತಾ, ಮೊದಲಬಾರಿಗೆ ಚುನಾವಣೆ ರಾಜ್ಯಪಾಲರ ಭಾಷಣದಲ್ಲಿ ಮೊದಲಬಾರಿಗೆ ಚುನಾವಣೆ ಮಾಡಿದ್ದೇವೆ ಎಂದು ಹೇಳಿದ್ದೇವೆಂದರು, ಏನು ಚುನಾವಣೆಯನ್ನು ಮೊದಲ ಬಾರಿಗೆ ಮಾಡಿದ್ದೀರಿ? ಈ ಇಡೀ ದೇಶ ಮೆಚ್ಚತಕ್ಕಂಥ ಒಂದು ಶಾಸನವನ್ನು ಜಾರಿಗೆ ಕೊಟ್ಟ ಕೀರ್ತಿ ಶ್ರೀಮಾನ್ ನಜೀರ್‌ಸಾಬ್ರವರಿಗೆ ಸಲ್ಲುತ್ತದೆ. ಅದು ನಿಜವಾದ ಚುನಾವಣೆ. ಅದು ನಿಜವಾದ ಮೀಸಲಾತಿ. ಅದು ನಿಜವಾಗಿ ಗ್ರಾಮೀಣ ವಿಕೇಂದ್ರೀಕೃತ ವ್ಯವಸ್ಥೆಗೆ ಅರ್ಥ ಕೊಟ್ಟಿದ್ದರು. ಇವತ್ತು ನೀವು ಗ್ರಾಮೀಣ ವಿಕೇಂದ್ರೀಕರಣಕ್ಕಲ್ಲ, ಗ್ರಾಮಗಳಲ್ಲಿ ಜಗಳ ಹಚ್ಚಿ......

(ಗೊಂದಲ)

ಶ್ರೀಮತಿ ಮೋಟಮ್ಮ : ಹಿಂದಿನ ಮಂಡಲ ಪಂಚಾಯತಿಗೆ ಕೊಳಕು ಮಂಡಲ ಎಂದು ಹೇಳುತ್ತಿದ್ದರು.

ಶ್ರೀ ಡಿ.ಬಿ. ಚಂದ್ರೇಗೌಡ : ನಾಚಿಕೆಯಾಗಬೇಕು. ಶಾಸನಸಭೆಗೆ ಚುನಾವಣೆಯಾದರೆ 24 ಗಂಟೆ ಕಾಯುವುದಕ್ಕೆ ತಯಾರಾಗಿಲ್ಲ. ರಾಜ್ಯಪಾಲರ ಹತ್ತಿರ ಹೋಗುತ್ತಾರೆ. ಮುಖ್ಯಮಂತ್ರಿಯಾಗಿ ಸ್ಟೇರಿಂಗ್ ತೆಗೆದುಕೊಳ್ಳುವ ರಾಜ್ಯಪಾಲರ ಹತ್ತಿರ ಹೋಗುತ್ತಾರೆ. ಎರಡು ತಿಂಗಳು ಆಗಿದೆ ಚುನಾವಣೆಯಾಗಿ ಇವತ್ತು. ಇದುವರೆಗೆ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಯನ್ನು ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀಮತಿ ಮೋಟಮ್ಮ : ಹಿಂದೆ ಮಂಡಲ ಪಂಚಾಯಿತಿ ಚುನಾವಣೆಯಾದಾಗ ಗ್ರಾಮಾಂತರ ಪ್ರದೇಶದವರು ಅದನ್ನು ಕೊಳಕು ಮಂಡಲ ಪಂಚಾಯಿತಿ ಎನ್ನುತ್ತಿದ್ದರು. ಎಲ್ಲ ಗದ್ದಲವಾಗಿ, ಹೊಡೆದಾಟವಾಗಿ, ಮರ್ಡರ್ ಆದಾಗ...

ಶ್ರೀ ಡಿ.ಬಿ. ಚಂದ್ರೇಗೌಡ : ವಿಕೇಂದ್ರೀಕರಣದ ವ್ಯವಸ್ಥೆಯ ಅರ್ಥ ಇದು. ವಿಕೇಂದ್ರೀಕರಣದ ಅರ್ಥ ಮೀಸಲಾತಿ ಅಲ್ಲ. "ಮೂಗಿಗಿಂತ ಮೂಗುತಿ ಭಾರ". ಮೂಗಿಗೆ ನೆಗಡಿ ಬಂದರೆ ಮೂಗುತಿಯಿಂದ ವಾಸಿಯಾಗುವುದಿಲ್ಲ. ಇಲ್ಲಿ ಚರ್ಚೆ ಮೀಸಲಾತಿ. ಯಾರಿಗೆಷ್ಟು ಮೀಸಲಾತಿಸಿಕ್ಕಿತು? ನಾನು ಚರ್ಚೆ ಮಾಡುತ್ತಿರತಕ್ಕಂಥದ್ದು ಎಷ್ಟು ಗ್ರಾಮೀಣ ಅಭಿವೃದ್ಧಿಯಾಯಿತು? ಇದರ ಬಗ್ಗೆ ಎಲ್ಲಿಯಾದರೂ ಚರ್ಚೆಯಾಗಿದೆಯೋ? ಹೆಣ್ಣು ಮಕ್ಕಳಿಗೆ 30 ಪರ್ಸೆಂಟ್ ಇಟ್ಟರು. ಷೆಡ್ಯೂಲ್ಡ್ ಕ್ಯಾಸ್ಟ್‌ಗೆ 25 ಪರ್ಸೆಂಟ್. ಯಾರೂ ಕೊಡಬೇಕಾದ್ದಿಲ್ಲ. ರಾಜ್ಯಾಂಗದತ್ತವಾದಂಥ ಹಕ್ಕನ್ನು ಕೊಟ್ಟಿದ್ದಾರೆ. 25 ಪರ್ಸೆಂಟ್ ಮೊದಲು

ಕೊಟ್ಟಿದ್ದುದು ಕರ್ನಾಟಕ ರಾಜ್ಯ. ಜನತಾ ಸರ್ಕಾರ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಸರ್ಕಾರ. ಅದರ ಮೇಲೆ ಡಿಫೆಂಡ್ ಮಾಡುವುದಕ್ಕೆ ಹೋಗಬೇಡಿ. ಇದನ್ನು ಸಂಸತ್ತನಲ್ಲೂ ಹೇಳಿದ್ದೇನೆ. ನೀವಲ್ಲ, ದಿವಂಗತ ರಾಜೀವ್ ಗಾಂಧಿಯವರು ಮೆಚ್ಚಿ ನನ್ನನ್ನೇ ಬೆನ್ನು ತಟ್ಟಿದರು. ಅದರಿಂದ ಆ ಸಂಬಂಧಗಳನ್ನೆಲ್ಲಾ ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಶಾಸನಸಭೆಗೆ ಚುನಾವಣೆಯಾಗಿ ನೀವು ಒಂದು ದಿವಸ ಕಾಯುವುದಕ್ಕೆ ತಯಾರಾಗಿದ್ದೀರಾ? ಬೆಳಿಗ್ಗೆ ಎದ್ದು ರಾಜ್ಯಪಾಲರ ಹತ್ತಿರ ಸ್ವೇರಿಂಗ್ಗೆ ಹೋಗುತ್ತೀರಿ. ನಾನು ಮಂತ್ರಿಯಾಗಬೇಕು, ನಾನು ಮಂತ್ರಿಯಾಗಬೇಕು ಎಂದು ಹೇಳಿ ಕ್ಯೂ ನಿಂತಿರುತ್ತೀರಿ. ಇವತ್ತು ಎರಡು ತಿಂಗಳಾಗಿದೆ ಚುನಾವಣೆಯಾಗಿ. ಇದುವರೆಗೆ ಅಧ್ಯಕ್ಷರ, ಉಪಾಧ್ಯಕ್ಷರ ಚುನಾವಣೆ ಮಾಡಲಾರದೆ ಚುನಾವಣೆ ಎಂದು ಹೇಳಿಕೊಳ್ಳುವುದಕ್ಕೆ ನಾಚಿಕೆಯಾಗಬೇಕು. ಇನ್ನು ಒಂದು ಮಾತನ್ನು ಹೇಳುತ್ತೇನೆ. ಇವರು ಜಿಲ್ಲಾ ಪಂಚಾಯಿತಿ ಚುನಾವಣೆ ಮಾಡುವುದಿಲ್ಲ. ತಾಲ್ಲೂಕು ಪಂಚಾಯತಿ ಚುನಾವಣೆಯನ್ನು ಖಂಡಿತ ಮಾಡುವುದಿಲ್ಲ, ಏಕೆಂದರೆ ಇವತ ಅವಧಿ ಮುಗಿಯುವುದರೊಳಗೆ ಸರ್ವೋಚ್ಛ ನ್ಯಾಯಾಲಯದ ಡಿಸೆಂಬರ್ 31 ರೊಳಗೆ ಚುನಾವಣೆ ಮಾಡುತ್ತೇವೆ ಎಂದು ಕೊಟ್ಟ ಮಾತಿಗೆ ಚುನಾವಣೆಯ ಅಣಕ ಈ ರಾಜ್ಯದಲ್ಲಿ ಪಂಚಾಯಿತಿ ಚುನಾವಣೆಯ ಅಣಕ ಈ ಒಂದು ಕೆಟ್ಟ ಶಾಸನದ ಮೂಲಕ ಆಗಿದೆ. ಮೊದಲ ಬಾರಿಗೆ 30 ಪರ್ಸೆಂಟ್ ಕೊಟ್ಟಿದ್ದಾರೆ. ಕರ್ನಾಟಕ ರಾಜ್ಯವೇ ಮೊದಲಭಾರಿಗೆ ಮಹಿಳೆಯರಿಗೆ ಮೀಸಲಾತಿ ಕೊಟ್ಟಂಥ ಕೀರ್ತಿ. ಆ ಕೀರ್ತಿ ಘೋರ್ಪಡೆಯವರಿಗಲ್ಲ. ನಿಮ್ಮ ಸರ್ಕಾರಕ್ಕಲ್ಲ. ದಿವಂಗತ ನಜೀರ್ ಸಾಹೇಬರಿಗೆ ಸಲ್ಲಬೇಕು. ನ್ಯಾಯವಾಗಿ ಸಲ್ಲತಕ್ಕಂಥ ಗೌರವವನ್ನು ಯಾರ್‍ಯಾರಿಗೆ ಯಾವ ಯಾವ ಕಾಲದಲ್ಲಿ ಸಲ್ಲಬೇಕೋ ಅವರಿಗೆ ಕೊಡಿ. ಶೇಕಡ 25 ಮೀಸಲಾತಿಯನ್ನು ಇಟ್ಟಿದ್ದರು. 18 ವರ್ಷದ ವಯೋಮಿತಿಗೆ ಚುನಾವಣೆಗೆ ಅವಕಾಶವನ್ನು ಕೊಟ್ಟಂಥ ಕೀರ್ತಿಯೂ ನಮ್ಮದೇ.

ಶ್ರೀ ಕರಿಯಣ್ಣ : 43 ಪರ್ಸೆಂಟ್ ಆಗಿದೆ. ತಾವು ನೋಡಿದ್ದೀರಿ. ತಾವೇ ಚರ್ಚೆ ಮಾಡಿದ್ದೀರಿ. ಒಟ್ಟು ರಾಜ್ಯದಲ್ಲಿ 45 ಪರ್ಸೆಂಟ್ ಆಯಿತು. ತಾವು ನೋಡಿದ್ದೀರಲ್ಲಾ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಕರಿಯಣ್ಣನವರೇ, ಎಲ್ಲಾ ಇಲ್ಲಿ ಇಟ್ಟಿದ್ದೇವೆ.

ಶ್ರೀ ಜಿ.ಎಸ್. ಶಿವನಂಜಪ್ಪ : ವಿಕೇಂದ್ರೀಕರಣ ಮಾಡಿ ನೀವು ಆ ಕಡೆಗೆ ಹೋದಿರಿ ಆ ಆಕ್ಟ್ ತೆಗೆದುಕೊಂಡು ಬಂದು. ವಿಕೇಂದ್ರೀಕರಣದ ಆಕ್ಟ್ ಮಾಡಿ ಶಹಭಾಷ್ಗಿರಿ ಮಾಡಿಕೊಳ್ಳುತ್ತಿದ್ದೀರಲ್ಲಾ, ಅದರಿಂದಲೇ ನೀವು ಆ ಕಡೆಗೆ ಹೋಗಿದ್ದು ಈ ಕಡೆಯಿಂದ.

ಶ್ರೀ ಡಿ.ಬಿ. ಚಂದ್ರೇಗೌಡ : ನಮಗೆ ಏನು ಸಂತೋಷ ಎಂದರೆ ......

(ಗೊಂದಲ)

ಶ್ರೀ ಜಿ.ಎಸ್. ಶಿವನಂಜಪ್ಪ : ನೀವು ನಾಮಿನೇಷನ್ ಮಾಡುವುದಕ್ಕೆ ಎರಡು ತಿಂಗಳು ತೆಗೆದುಕೊಂಡಿರಿ. ಅದನ್ನು ತಾವು ಮರೆಯಬಾರದು.

(ಗೊಂದಲ)

ಶ್ರೀ ಎಸ್. ಇಸಾಮಿಯಾ : ಮಾನ್ಯ ಅಧ್ಯಕ್ಷರೇ, ಒಂದು ಮಾತು ನಾವು ಅದಕ್ಕೋಸ್ಕರ ಮಿಸಲಾತಿಯನ್ನು ಇಟ್ಟಿದ್ದೇವೆ. ಸಾಧಿಸಬೇಕಾದರೆ ಯಾರನ್ನು ಬೇಕಾದರೂ ಚುನಾಯಿಸಬೇಕಾಗಿದ್ದರೆ ನಾವು ನಾಳೆಯೇ ಮಾಡಬಹುದಿತ್ತು. ಈವತ್ತೇ ಮಾಡಬಹುದಾಗಿತ್ತು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ತಿಳಿಯುವವರಿಗೆ ಹೇಳಬಹುದು, ತಿಳಿಯದೇ ಇರುವವರಿಗೆ ಹೇಳುವುದಕ್ಕೆ ನನ್ನಿಂದ ಸಾಧ್ಯವಿಲ್ಲ. ನಾನು ಚರ್ಚೆ ಮಾಡುತ್ತಿದ್ದುದ್ದು ವಿಕೇಂದ್ರೀಕರಣದ ಉದ್ದೇಶ ಗ್ರಾಮೀಣ ಸರ್ವಾಂಗೀಣ ಅಭಿವೃದ್ಧಿ; ಆ ಬಗ್ಗೆ ಚರ್ಚೆ ಮಾಡಿ. ಮೀಸಲಾತಿಯನ್ನಾದರೂ ಕೊಡಿ, ಕೊಡದೇ ಹೋಗಿ, ನೀವೇ ತೆಗೆದುಕೊಳ್ಳಿ. ಆದರೆ ವಿಕೇಂದ್ರೀಕರಣದ ಉದ್ದೇಶ, ಗುರಿ ಸಾಧನೆಗೆ

ಬೇಕಾದಂಥದ್ದು ಕಳೆದ ಇವರ ಸರ್ಕಾರ ಬಂದಾಗಿನಿಂದ ಮೂರು ವರ್ಷ ತೆಗೆದುಕೊಂಡಿದ್ದಾರೆ ಈ ಚುನಾವಣೆಗೆ.

ಶ್ರೀ ಎನ್.ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಕೃಷ್ಣ ಹೆಗಡೆ ಕಾಲದಲ್ಲಿ ದುಡ್ಡು ಕೊಡಲಿಲ್ಲ. ಬರೇ ಹೇಳಿಕೆ ಕೊಟ್ಟರು. ಸುಮಾರು 60-70 ಮನೆಗಳು ಇದ್ದಾವೆ ನನ್ನ ಕ್ಷೇತ್ರದಲ್ಲಿ; ದುಡ್ಡು ಕೊಟ್ಟಿಲ್ಲ. ಬೇಕಾದರೆ ಚಾಲೆಂಜ್ಮಾಡುತ್ತೇನೆ ಮತ್ತು ತೋರಿಸುತ್ತೇನೆ. ನಮ್ಮ ಸರ್ಕಾರವನ್ನು ಹೀಯಾಳಿಸುತ್ತಿದ್ದಾರೆ. ಇದು ಸರಿಯಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ಆ ಬಿಲ್ ಬಂದಾಗ ನಾನು ಮಾತನಾಡುತ್ತೇನೆ. ಸಾಕಷ್ಟು ಸಾಹಿತ್ಯ ಇಟ್ಟಿದ್ದೇನೆ ಇಲ್ಲಿ, ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡಿ ನೀವು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಪಂಚಾಯತಿ (ತಿದ್ದುಪಡಿ) ವಿಧೇಯಕ ಪರಿಶೀಲನೆಗೆ ತೊಗೆದುಕೊಂಡು ಆಗಿದೆ. ಸ್ವಲ್ಪ ಪ್ರಸ್ತಾವಿಕವಾಗಿ ಮಾತನಾಡಿದ್ದಾರೆ. ಅದರ ಮೇಲೆ ಮುಂದುವರಿಸಬಹುದು. ಈಗಾಗಲೇ 5.45 ಆಗಿದೆ. ಎರಡು ಮೂರು ಸಣ್ಣ ಪುಟ್ಟ ವಿಧೇಯಕಗಳು ಇವೆ. ಇವತ್ತು ಅವುಗಳನ್ನು ಮುಗಿಸೋಣ. ನಾಳೆ ಇವರು ಮಾತನ್ನು ಮುಂದುವರಿಸಬಹುದು.

ಶ್ರೀ ಡಿ.ಬಿ. ಚಂದ್ರೇಗೌಡ : ಇವರುಗಳು ಮಧ್ಯೆ ಪ್ರವೇಶ ಮಾಡದೇ ಇದ್ದಿದ್ದರೆ ನಾನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ಒಂದು ಕಾಯಕ್ರಮವನ್ನು ಶಿವಮೊಗ್ಗ ಜಿಲ್ಲೆಯಲ್ಲಿ ಹಮ್ಮಿಕೊಂಡಿದ್ದಾರೆ. ಇದು 'ಅಪಾನಾ ದೇಶ್' ಎನ್ನತಕ್ಕ ಒಂದು ಕಾರ್ಯಕ್ರಮ. ಈ 'ಅಪನಾ ದೇಶ' ಕಾರ್ಯಕ್ರಮ ರಾಜ್ಯ ವ್ಯಾಪಿ ಆಗಬೇಕು ಎನ್ನತಕ್ಕದ್ದು ನಿಮ್ಮ ಗಮನಕ್ಕೆ ತರುವ ದೃಷ್ಟಿಯಿಂದ ಹೇಳುತ್ತೇನೆ. ಬೆಳಗಾವಿಯಲ್ಲಿ, ಈಗ ಶಿವಮೊಗ್ಗ ಜಿಲ್ಲೆಯ ಮುಖ್ಯ ಕಾರ್ಯದರ್ಶಿ ಆಗಿದ್ದಂತಹ ಶ್ರೀಮಾನ್ ಭರತ್ ಲಾಲ್ ಮೀನಾ ಅರರು ಬೆಳಗಾವಿ ಜಿಲ್ಲೆಯಲ್ಲಿ ಪ್ರಾರಂಭ ಮಾಡಿದರು. ರಾಯಚೂರು ಜಿಲ್ಲೆಯನ್ನು ಸ್ವಲ್ಪ ವಿಸ್ತರಿಸಿ ಮಾಡಿದರು. ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಹೆಚ್ಚು ವ್ಯಾಪಕವಾದಂತಹ ಕೆಲಸ ಇದೆ. ಈ ಕಾರ್ಯಕ್ರಮದಲ್ಲಿ ಬಹಳ ವಿಶೇಷ ಏನೂ ಇಲ್ಲ. ಜನರನ್ನು ಸಾರ್ವಜನಿಕ ಕೆಲಸಗಳಲ್ಲಿ ಇನ್ವಾಲ್ವ್ ಮಾಡತಕ್ಕದ್ದು. ನೀವು 50 ಭಾಗ ಕೊಡಿ, ನಾವು ಜಿಲ್ಲಾ ಪರಿಷತ್ತಿನಿಂದ 50 ಭಾಗ ಕೊಡುತ್ತೇವೆ. ನಮ್ಮ ಊರಿನಲ್ಲಿ ಏಳು ಲಕ್ಷ ಖರ್ಚಿನಲ್ಲಿ ಒಂದು ಸೇತುವೆ ಮಾಡಿಸಿದ್ದೇವೆ. ಮೂರುವರೆ ಲಕ್ಷ ರೂಪಾಯಿಗಳನ್ನು ಜನ ಕೊಟ್ಟಿದ್ದಾರೆ. ಮೂರುವರೆ ಲಕ್ಷ ರೂಪಾಯಿ ಜಿಲ್ಲಾ ಪರಿಷತ್ತಿನವರು ಕೊಟ್ಟಿದ್ದಾರೆ. ಕಾರ್ಯಕ್ರಮ ಎಷ್ಟು ಆಗಿದೆ. ನಾನು ದೀರ್ಘ ಪಟ್ಟಿ ಹೇಳುವುದಕ್ಕೆ ಸಮಯ ತೆಗೆದು ಕೊಳ್ಳುವುದಿಲ್ಲ. ಒಟ್ಟು ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ಕಾರ್ಯಕ್ರಮಗಳಿಗಾಗಿ ನಮ್ಮ ಜಿಲ್ಲೆಯ ಜನ, ಪಬ್ಲಿಕ್ ಪಾರ್ಟಿಸಿಪೇಷನ್ 7 ಕೋಟಿ 89 ಲಕ್ಷ ಅಂದರೆ ಎಂಟು ಕೋಟಿ ರೂಪಾಯಿಗಳನ್ನು ಈ ವರ್ಷದ ಕೆಲಸಕ್ಕೆ ಸಾರ್ವಜನಿಕರು ವಂತಿಗೆ ಕೊಟ್ಟಿದ್ದಾರೆ. ಯಾವ್ಯಾವುದಕ್ಕೆ ಕೊಟ್ಟಿದ್ದಾರೆಂದರೆ ಸ್ಕೂಲ್ಬಿಲ್ಡಿಂಗ್ಸ್, ಅಂಗನವಾಡಿ ಕಟ್ಟಡಗಳು, ಓಪನ್ ಏರ್ ಥಿಯೇಟರ್ಗಳು, ಬಸ್ ಶೆಲ್ಟರ್, ಲೈಬ್ರರಿ, ರೋಡ್ಸ್, ಮಹಿಳಾ ಮಂಡಲಿಗಳು, ಡ್ರಿಂಕಿಂಗ್ ವಾಟರ್, ಮಿನಿ ವಾಟರ್ ಸಪ್ಲೈಸ್, ಕ್ರಾಸ್ ಲೈನ್ಸ್, ಬಿಲ್ಡಿಂಗ್ಗೆ ರಿಪೇರಿಗಳಿಗೆ ಮತ್ತು ಇತರೇ ವೈಟ್ ವಾಷಿಂಗ್ ಆಫ್ ದಿ ಸ್ಕೂಲ್ಸ್ ಡೊನೇಷನ್ ಫಾರ್ ಫರ್ನೀಚರ್ ಅಂಡ್ ಬುಕ್ಸ್; ಮಿಲ್ಕ್ಸೊಸೈಟೀಸ್, ಡೀಸಿಲ್ಟಿಂಗ್ ಆಫ್ ಟ್ಯಾಂಕ್ಸ್, ಹೆಲ್ತ್ ಫಾರ್ ಲರ್ನಿಂಗ್ ಸೆಂಟರ್ಸ್, ಮೆಟೀರಿಯಲ್ ಅಸಿಸ್ಟೆನ್ಸ್ ಹೀಗೆ ಅನೇಕ ವಿಧವಾದಂತಹ ಸುಮಾರು 18 ಕಾರ್ಯಕ್ರಮಗಳನ್ನು ಹಾಕಿಕೊಂಡು ಶಿವಮೊಗ್ಗ ಜಿಲ್ಲೆಯಲ್ಲಿ ಇಂತಹ ಒಂದು ಉತ್ತಮ ಕೆಲಸ ಮಾಡಿದ್ದಾರೆ. ನಾನು ಯಾರನ್ನೂ ಮೆಚ್ಚಿಸತಕ್ಕ ದೃಷ್ಟಿಯಲ್ಲಿ ಈ ಮಾತನ್ನು ಹೇಳುತ್ತಿಲ್ಲ. ಈ ಕಾರ್ಯಕ್ರಮ ಪ್ರತಿ ಜಿಲ್ಲೆಯಲ್ಲಿ ಹಾಕಿದರೆ ಬಹಳ ಒಳ್ಳೆಯದು. ನಮ್ಮ ಜಿಲ್ಲೆಯಲ್ಲಿ ಬಂದಿರತಕ್ಕ ಹಾಗೆ ಎಂಟು ಕೋಟಿ ರೂಪಾಯಿ ಪ್ರತಿ ಜಿಲ್ಲೆಯಿಂದ ಬಂದರೆ ಅಂದರೆ 150 ಕೋಟಿ ರೂಪಾಯಿ ಜನ ಕೊಡುವುದಕ್ಕೆ ಸಿದ್ಧವಾಗಿದ್ದಾರೆ. ಇಂತಹ ಕಾರ್ಯಕ್ರಮಗಳನ್ನು

ಇಡೀ ರಾಜ್ಯದಲ್ಲಿ ಕೈಗೆತ್ತಿಕೊಳ್ಳಬೇಕು. ಬರೀ ಜನ ದುಡ್ಡು ಕೊಡುತ್ತಾರಂತಲ್ಲ. ಈ ಕೆಲಸ ಮಾಡತಕ್ಕಂಥ ಜವಾಬ್ದಾರಿ ಇವರೇ ವಹಿಸಿಕೊಳ್ಳುತ್ತಾರೆ. ಜವಾಬ್ದಾರಿ ಅವರಿಗೆ ಇರುವುದರಿಂದ ಕ್ವಾಲಿಟಿ ಮತ್ತು ಸಮಯ ಚೆನ್ನಾಗಿರುತ್ತದೆ. ಸಮಯವೂ ಬಂತು. ಆ ಕಾರ್ಯಕ್ರಮದಲ್ಲಿ ಜನ ತಮ್ಮನ್ನು ತಾವು ಅರ್ಪಿಸಿಕೊಂಡು ಮಾಡತಕ್ಕ ಕಾರ್ಯ ಆದ್ದರಿಂದ ಯಾವುದೇ ಕೆಟ್ಟ ಕೆಲಸ ಆಗುವುದಿಲ್ಲ. ತಮ್ಮ ಜಿಲ್ಲಾ ಪರಿಷತ್ತಿನ ಕಾರ್ಯಕ್ರಮ ಹೇಳುತ್ತಿದ್ದೇನೆ. ಮುಖ್ಯಕಾರ್ಯದರ್ಶಿ ಭರತ್ ಲಾಲ್ ಮೀನಾ ಅವರು ಶಿವಮೊಗ್ಗ ಜಿಲ್ಲೆಯಲ್ಲಿ 'ಅಪನಾ ದೇಶ್' ಎಂಬ ಒಂದು ಕಾರ್ಯಕ್ರಮ ಮಾಡಿದ್ದಾರೆ. ಆ ಕಾರ್ಯಕ್ರಮದಲ್ಲಿ ಜನ ಏಳು ಕೋಟಿ 89 ಲಕ್ಷ ರೂಪಾಯಿಗಳ ವಂತಿಗೆಯನ್ನು ಸಾರ್ವಜನಿಕ ಕೆಲಸಗಳಿಗಾಗಿ ಕೊಟ್ಟಿದ್ದಾರೆ. ಅವರದ್ದು 50 ಪರ್ಸೆಂಟ್, ತಮ್ಮ ಜಿಲ್ಲಾ ಪರಿಷತ್ತಿನದು 50 ಪರ್ಸೆಂಟ್. ಅರ್ಥಾತ್ ಎಂಟು ಇಂಟು ಎರಡು ಅಂದರೆ ಹದಿನಾರು ಕೋಟಿ ರೂಪಾಯಿ ಕೆಲಸ ಆಗಿದೆ. ನಿಮ್ಮ ಕಾಂಟ್ರಿಬ್ಯೂಷನ್ ಎಂಟು ಕೋಟಿ ರೂಪಾಯಿ; ಜನರ ಕಾಂಟ್ರಿಬ್ಯೂಷನ್ ಎಂಟು ಕೋಟಿ ರೂಪಾಯಿ. ಈ ಕಾರ್ಯಕ್ರಮದಿಂದಾಗಿ ಬಹುಶಃ ಜನ ತಮ್ಮನ್ನು ತಾವು ಕಾರ್ಯಕ್ರಮಕ್ಕೆ ಇನ್ವಾಲ್ವ್ ಮಾಡಿಕೊಳ್ಳುತ್ತಾರೆ. ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ. ಒಳ್ಳೆಯ ಕೆಲಸ ಆಗುತ್ತದೆ ಹಾಗೂ ಸಮಯಕ್ಕೆ ಸರಿಯಾಗಿ ಕೆಲಸ ಆಗುತ್ತದೆ. ಆದ್ದರಿಂದ ಇಂತಹ ಒಂದು ಕಾರ್ಯಕ್ರಮವನ್ನು ಹಮ್ಮಿಕೊಳ್ಳುವಂತಹ ಪ್ರಯತ್ನವನ್ನು ಮಾಡಿ, ಇಂತಹ ಕಾರ್ಯಕ್ರಮಗಳನ್ನು ಯಾವುದೂ ಹೇಳುವುದಿಲ್ಲ. ಆದ್ದರಿಂದ ನಿಮ್ಮ ರಾಜ್ಯಪಾಲರ ಭಾಷಣದ ಮೇಲೆ ಹೆಚ್ಚು ಚರ್ಚೆಯ ಅಗತ್ಯ ಇಲ್ಲ, ಅವಕಾಶವೂ ಇಲ್ಲ ಎಂದು ಹೇಳುತ್ತೇನೆ.

ಆದುದರಿಂದ, ಅವಶ್ಯಕತೆ ಇಲ್ಲದೇ ಇರತಕ್ಕಂಥ ಮತ್ತು ಅಗತ್ಯವಿಲ್ಲದೆ ಇರತಕ್ಕಂಥ ನೀರಸವಾದ ಭಾಷಣದ ಮೇಲೆ ನಾನು ನನ್ನ ಕಂಠ ಶೋಷಣೆ ಮಾಡಿಕೊಳ್ಳುವುದಕ್ಕೆ ತಯಾರಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ, ಕನಿಷ್ಠ ಪಕ್ಷ ಈ ರಾಜ್ಯಪಾಲರನ್ನು ವಿರೋಧಿಸಿ ಭಾಷಣ ಮಾಡುತ್ತೇನೆ ಎನ್ನುವುದಕ್ಕೂ ಇದು ಯೋಗ್ಯವಾಗಿಲ್ಲ ಎನ್ನುವಂಥ ಮಾತನ್ನು ಹೇಳುತ್ತಾ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಶಿವನಂಜಪ್ಪ : ತಾವು ಸುಮಾರು ಒಂದು ಗಂಟೆಗಳ ಮಾತನಾಡಿ ಇದರಲ್ಲಿ ಏನೂ ಇಲ್ಲವೆಂದು ಹೇಳುತ್ತಿದ್ದೀರಿ.

+ ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡ ಬಳ್ಳಾಪುರ) : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಈಗಾಗಲೇ ಬಹಳಷ್ಟು ಜನ ಸದಸ್ಯರು ಮಾತನಾಡಿದ್ದಾರೆ. ನಾನಾದರೂ 5-10 ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ರಾಜ್ಯಪಾಲರ ಭಾಷಣವನ್ನು ಭಾಷಣವೆಂದು ಕರೆಯಬೇಕೋ ಗೌರ್ನಮೆಂಟ್ ಪ್ರೆಸ್ ನೋಟ್ ಎಂದು ಕರೆಯಬೇಕೋ ನನಗೆ ಗೊತ್ತಿಲ್ಲ. ಕಳೆದ 2-3 ವರ್ಷಗಳ ರಾಜ್ಯಪಾಲರ ಭಾಷಣದ ಪ್ರತಿಗಳನ್ನು ನಾನು ತಂದಿದ್ದೇನೆ. 2-3 ವರ್ಷಗಳ ಹಿಂದಿನ ರಾಜ್ಯಪಾಲರ ಭಾಷಣಗಳಲ್ಲಿ ಕೆಲವೊಂದು ವಿಷಯಗಳು ಪುನರಾವರ್ತನೆಗೊಂಡಿದೆ. ಆ ಕಡೆಯ ಮಾನ್ಯ ಸದಸ್ಯರು ಮಾತನಾಡುವಾಗ ಹೇಳಿದರು: ಹಣ ಹೇರಳವಾಗಿದೆ, ಸರ್ಕಾರ ಬೇಕಾದಷ್ಟು ಖರ್ಚು ಮಾಡುತ್ತಿದೆ ಎಂದು. ಅದಕ್ಕೆ ಚಂದ್ರೇಗೌಡರು ಹೇಳುತ್ತಾ ಸರ್ಕಾರದ ಹಣಕಾಸಿನ ಸ್ಥಿತಿ ಎಷ್ಟು ಗಂಭೀರವಾಗಿದೆಯೆಂದು ತಿಳಿಸಿದರು. ಇಂದು ಬೆಳಿಗ್ಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರಾದ ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಒಂದು ಪ್ರಶ್ನೆಗೆ ಉತ್ತರಿಸುತ್ತಾ, 2000 ಇಸವಿಯೊಳಗಾಗಿ ಎಲ್ಲಾ ಸರ್ಕಾರಿ ಶಾಲೆಗಳ ಒಂದೊಂದು ಕ್ಲಾಸ್ ರೂಮು ಹಾಗೂ ಉಪಾಧ್ಯಾಯರುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಇದು 1994ನೇ ಇಸವಿ, ಇನ್ನು ಬರುವ ಆರು ವರ್ಷದೊಳಗೆ ಈ ರೀತಿ ಮಾಡುತ್ತೇವೆಂದು ಹೇಳಿದ್ದಾರೆ. ಮೊನ್ನೆ ತಾನೇ ಅವರು ತಮ್ಮ ಇಲಾಖೆಯಿಂದ ಒಂದು ಸುತ್ತೋಲೆ ಹೊರಡಿಸಿದ್ದಾರೆ. ಏನೆಂದರೆ, ಕಪ್ಪು ಹಲಗೆ

ಯೋಜನೆಯಡಿಯಲ್ಲಿ ನಮ್ಮ ತಾಲ್ಲೂಕಿನಲ್ಲಿರುವ ಒಂದೊಂದು ಮಂಡಲ ಪಂಚಾಯತಿಗೂ 4-4 ಶಾಲೆಗಳನ್ನು ತೆಗೆದುಕೊಳ್ಳಿ ಎಂದು ಮೊದಲು ಒಪ್ಪಿ, ಈಗ ಏನು ಸುತ್ತೋಲೆ ಕಳುಹಿಸಿದ್ದಾರೆಂದರೆ, ನಾಲ್ಕು ಶಾಲೆಗಳನ್ನು ತೆರೆಯುವುದಕ್ಕೆ ಸರ್ಕಾರದಲ್ಲಿ ಹಣವಿಲ್ಲ, ಬರೀ ಎರಡು ಶಾಲೆಗಳನ್ನು ತೆಗೆದುಕೊಳ್ಳಿ ಎಂದಿದ್ದಾರೆ. ಹಾಗಾದರೆ, 2000 ಇಸವಿಯೊಳಗಾಗಿ ಕ್ಲಾಸ್ ರೂಮುಗಳನ್ನು ಕೊಡುವುದಕ್ಕೆ ಸಾಧ್ಯವೇ? 2000 ಇಸವಿ ಅಷ್ಟೊತ್ತಿಗೆ ಬೆಳೆಯುವಂಥ ಜನಸಂಖ್ಯೆ ಎಷ್ಟಿರುತ್ತದೆ? ಇದೆಲ್ಲಾ ಗಮನಿಸಿದಾಗ, ಇದು ಸುಮ್ಮನೆ ರಿಚ್ಯುಯಲ್ ಅಷ್ಟೆ. ಸಮಯ ವ್ಯಯವಾಗುತ್ತದಲ್ಲದೆ ಬೇರೇನೂ ಪ್ರಯೋಜನವಾಗುವುದಿಲ್ಲ. ಏನೋ ಮಾತನಾಡಬೇಕು, ಹೋಗಬೇಕು. ನಮ್ಮ ಹೊಟ್ಟೆ ಉರಿಗೆ ಮಾತನಾಡಬೇಕೇ ವಿನಹ ಇದರಿಂದ ಏನೂ ಅನುಕೂಲವಾಗುವುದಿಲ್ಲ. ನಾನು ಎರಡು ವಿಷಯಗಳನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ವರ್ಷದ ರಾಜ್ಯಪಾಲರ ಭಾಷಣದ ಪುಟ 2 ರಲ್ಲಿ ಒಂದು ಮಾತನ್ನು ಹೇಳುತ್ತಾರೆ.

"My Government took prompt action to provide immediate relief to the victims of the earthquake and heavy rains. The cash ex-gratia relief payable to the next of kin of the deceased was raised from Rs. 20,000 to Rs. 1.00 lakh; relief payable for fully collapsed houses was increased from Rs. 5,000 to Rs.10,000 and for partially collapsed houses, the maximum relief payable was Rs. 5,000."

1992 Governor's Address - page-2:

"During the last year, the State has experienced heavy rainfall and loss of property in floods in some parts and drought conditions in few other areas. My Government has taken action to provide relief to the flood victims and reconstruct damaged houses belonging to economically weaker sections of the society and has undertaken adequate relief works in the drought affected areas."

What a difference between these two years could be found out here.

ನನ್ನ ಒಂದು ತಾಲ್ಲೂಕಿನ ಬಗ್ಗೆ ಮಾತನಾಡಬೇಕಾದರೆ, 1991ರ ಅಕ್ಟೋಬರ್ -ನವೆಂಬರ್ ತಿಂಗಳಲ್ಲಿ ಹದಿಮೂರುವರೆ ಸಾವಿರ ಮನೆಗಳು ಬಿದ್ದುಹೋದವು. ಮಂತ್ರಿಗಳು ಬಂದು ನೋಡಿದರು, ಅಧಿಕಾರಿಗಳು, ಪತ್ರಿಕೆಯವರು ಬಂದು ನೋಡಿದರು. ಅವುಗಳಲ್ಲಿ ನಾಲ್ಕೂವರೆ ಸಾವಿರ ಮನೆಗಳು ಸಂಪೂರ್ಣವಾಗಿ ನಿರ್ನಾಮವಾದವು. 1992 ಮತ್ತು 1994ರ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರಲ್ಲಾ, ಇದರಿಂದ ನಮ್ಮ ತಾಲ್ಲೂಕಿಗೆ ಒಂದು ಚಿಕ್ಕಾಸಿನಷ್ಟೂ ಅನ್ವಯಿಸುವುದಿಲ್ಲ. ಮನೆಗಳು ನಿರ್ನಾಮವಾಗಿರುವುದಕ್ಕೆ 200 ರೂ., 300 ರೂ., 400 ರೂ. ಹೀಗೆ ಪರಿಹಾರ ಕೊಟ್ಟಿದ್ದಾರೆ. ಈ ವಿಷಯ ಬಂದಾಗ ಮಾತನಾಡುತ್ತೇನೆ. ಆದರೆ, ಮನೆಗಳು ಸಂಪೂರ್ಣವಾಗಿ ನಿರ್ನಾಮವಾಗಿರುವ ಕಡೆ ಮನೆಗಳನ್ನು ಕಟ್ಟಿಸಿಕೊಡಲಿಲ್ಲ.

5.50 ಪಿ.ಎಂ.

ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದರು, ಅದನ್ನು ಕೂಡ ಕೊಡಲಿಲ್ಲ. ನಾನು ಸರ್ಕಾರಕ್ಕೆ ಒಂದು ಪ್ರಶ್ನೆಯನ್ನು ಕೇಳುತ್ತೇನೆ, ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿರುವ ಜನರು ಜನರೋ ಅಥವಾ ದನಗಳೋ ಎಂದು ಕೇಳುತ್ತಿದ್ದೇನೆ. ನಾನು ಆ ಕ್ಷೇತ್ರದ ಪ್ರತಿನಿಧಿಯಾಗಿದ್ದೇನಲ್ಲಾ, ನನಗೇನಾದರೂ ಮಾನ ಮರ್ಯಾದೆ ಇದೆಯೋ ಇಂಥ ಒಂದು ಸಭೆಗೆ ಬಂದು ನಮ್ಮ ಜನರನ್ನು ನೀವು ಸರಿಯಾಗಿ

ನೋಡಿಕೊಳ್ಳುತ್ತಿಲ್ಲವೆಂದು ಹೇಳುವುದಕ್ಕೆ ನನಗೆ ನಾಚಿಕೆಯಾಗುತ್ತಿದೆ. ಅದರ ಬದಲು ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋದರೆ ಒಳ್ಳೆಯದೆಂದು ನಾವು ಯೋಚನೆ ಮಾಡುತ್ತಿದ್ದೇನೆ. ಇದಕ್ಕೆ ಉತ್ತರ ತಮ್ಮಿಂದ ಬರಬೇಕು. ಯಾರಿಗೆ ಸಂಕಟವಿದೆಯೋ ಅವರಿಗೆ ಸಂಕಟ ಬರುತ್ತದೆ, ತಾವೆಲ್ಲರೂ ಮಜವಾಗಿದ್ದೀರಿ, ನಿಮಗೇನೂ ಯೋಚನೆ ಇಲ್ಲ. ಆದರೆ ಕಷ್ಟವನ್ನು ಅನುಭವಿಸುವವರು ನಾವು. ಆದರೆ ತಾವು ನಗುತ್ತಾ ಕುಳಿತಿದ್ದೀರಲ್ಲಾ?

ಶ್ರೀ ಕರಿಯಣ್ಣ : ತಾವು ಮಂತ್ರಿಗಳಾಗಿದ್ದವರು ತಮ್ಮ ಕ್ಷೇತ್ರವನ್ನೆಲ್ಲಾ ಬಹಳ ಚೆನ್ನಾಗಿ ಮಾಡಿಕೊಂಡಿದ್ದೀರೆಂಬುದು ನಮ್ಮ ಭಾವನೆ.

ಶ್ರೀ ಆರ್.ಎಲ್. ಜಾಲಪ್ಪ : ತಮ್ಮ ಸರ್ಕಾರದಲ್ಲಿ ಮೋಸ ಮಾಡಿದಂತೆ ನಾವು ಮಾಡಲು ಹೋಗಲಿಲ್ಲ. ನಾವೆಲ್ಲರನ್ನೂ ಸರಿಸಮಾನರಾಗಿ ನೋಡಿಕೊಂಡಿದ್ದೇವೆ. ಅದೇ ತಪ್ಪು ನಮಗೆ ಬಂದಿದ್ದು. ನನಗೆ ಇದಕ್ಕೊಂದಕ್ಕೆ ಉತ್ತರವನ್ನು ಮಂತ್ರಿಗಳಾದರೂ ಕೊಡಿ, ನೀವಾದರೂ ಕೊಡಿ; ಯಾರಾದರೂ ಕೊಡಿ. 13 ಸಾವಿರ ಮನೆಗಳು ಬಿದ್ದು ಹೋದವಲ್ಲಾ, ಒಂದು ಮನೆಯನ್ನಾದರೂ ತಾವು ಕಟ್ಟಿಸಿಕೊಟ್ಟಿದ್ದೀರಾ ಈ ತಾಲ್ಲೂಕಿನಲ್ಲಿ? ಆಶ್ರಯ ಯೋಜನೆಯಲ್ಲಿ 200 ಮನೆಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಅಂಬೇಡ್ಕರ್ ಯೋಜನೆಯಲ್ಲಿ 100 ಮನೆ. ಹಣ ಯಾವುದಕ್ಕೂ ಬಿಡುಗಡೆ ಆಗುತ್ತಿಲ್ಲ. ಈ ಹದಿಮೂರುವರೆ ಸಾವಿರ ಮನೆಗಳನ್ನು ಕಟ್ಟುವುದು ಯಾವಾಗ? ಏಕೆ ಈ ರೀತಿ ಸುಳ್ಳನ್ನು ಹೇಳುತ್ತೀರಿ? ಇದನ್ನು ರಾಜ್ಯಪಾಲರ ಬಾಯಲ್ಲಿ ಏತಕೆ ಹೇಳಿಸುತ್ತೀರಿ? ರಾಜ್ಯಪಾಲರು ಒಳ್ಳೆಯವರು. ಅವರು ಇನ್ನು ಮೇಲಾದರೂ ಭಾಷಣವನ್ನು ಇಲ್ಲಿ ಬಂದು ಓದುವುದಕ್ಕೆ ಮೊದಲು ಹೋದ ವರ್ಷ ನಾನು ಓದಿದ್ದ ಭಾಷಣದ ಪ್ರಕಾರ ತಾವು 'ಏನೇನು ಕಾರ್ಯಕ್ರಮವನ್ನು ಕೈಗೊಂಡಿದ್ದೀರಿ ಎಂಬುದನ್ನು ನನಗೆ ತೋರಿಸಿ ಅನಂತರ ನಾನು ತಾವು ಬರೆದು ಕೊಟ್ಟಿರುವುದನ್ನು ಬೇಕಾದರೆ ಓದುತ್ತೇನೆಂದು ಹೇಳಬೇಕೇ ವಿನಹ ಈ ರೀತಿ ಅವರ ಕೈಯಲ್ಲಿ ಸುಮ್ಮನೆ ಹೇಳಿಸಬೇಡಿ ಎಂದು ಹೇಳಿ ಅವರ ಸ್ಥಾನಕ್ಕೆ ಕೆಟ್ಟ ಅಭಿಪ್ರಾಯ, ಅಗೌರವವನ್ನು ತರಬೇಡಿ ಎಂದು ಹೇಳುವುದರ ಜೊತೆಗೆ, ಮಂತ್ರಿಗಳು ಉತ್ತರವನ್ನು ಕೊಡುವಾಗ 'ಈ ಹದಿಮೂರುವರೆ ಸಾವಿರ ಮನೆಗಳನ್ನು ನೀವು ಕಟ್ಟಲು ಏಕೆ ಕಾರ್ಯಕ್ರಮವನ್ನು ಕೈಗೊಳ್ಳಲಿಲ್ಲ ಎಂಬ ಬಗ್ಗೆ ಹೇಳಬೇಕು. ಈಗಾಗಲೇ 27 ತಿಂಗಳಾಗಿದೆ. ಅಕ್ಟೋಬರ್, ನವೆಂಬರ್ ತಿಂಗಳಿನಲ್ಲಿ ಈ ಮನೆಗಳು ಬಿದ್ದು ಹೋಗಿದೆ. ಪರಿಹಾರವನ್ನು ಕೊಟ್ಟಿದ್ದಾರೆ. 95 ಲಕ್ಷದ 65 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅಂದರೆ ಒಂದು ಮನೆಗೆ ಸರಾಸರಿ 700 ರೂಪಾಯಿಯಾಗುತ್ತದೆ. ಬಿದ್ದಿರುವ ಮಣ್ಣು ಅದನ್ನೂ ಸಹ ಈ 700 ರೂಪಾಯಿಗಳಲ್ಲಿ ಸಾಗಿಸಲು ಆಗುವುದಿಲ್ಲ. ಈ ವಿಷಯವನ್ನು ಎರಡುಸಲ ವಿಧಾನಸಭೆಯಲ್ಲಿ ಮಾತನಾಡಿದರೂ ಸಹ ಬರೀ ಸುಳ್ಳನ್ನು ಹೇಳಿಕೊಂಡೇ ಕಾಲವನ್ನು ತಳ್ಳುತ್ತಾ ಬಂದಿರಿ. ಒಂದು ಸಾರಿ ಮನೆಯನ್ನು ಕಟ್ಟಿಸಿಕೊಡುತ್ತೇನೆಂದು ಹೇಳಿದಿರಿ. ಕಳೆದ ವರ್ಷ ಮಾನ್ಯಮುಖ್ಯಮಂತ್ರಿಗಳು, 7 ನೇ ತಾರೀಖಿನ ದಿವಸ ಶಾಸಕರ ಸಭೆಯನ್ನು ಕರೆದಾಗಿ ಈ ವಿಷಯವನ್ನು ಅವರ ಗಮನಕ್ಕೆ ತಂದೆ. ಆವತ್ತು ನಾನು ಇದರ ಬಗ್ಗೆ ಏನು ಮಾಡುತ್ತಿದ್ದೀರೆಂದು ಕೇಳಿದೆ; ಅವರು ಅವತ್ತು ಇಲ್ಲ, ಏನಾದರೂ ಮಾಡಿ 10ಸಾವಿರ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಲು ಆಗುತ್ತದೆಯೋ ಎಂಬುದನ್ನು ಡೆಪ್ಯೂಟಿ ಕಮಿಷನರ್‌ರವರೇ ನೋಡಿ ಎಂದು ಹೇಳಿದರು. ಡೆಪ್ಯೂಟಿ ಕಮಿಷನರ್‌ರವರು ಅದನ್ನು ನೋಡುತ್ತೇನೆಂದು ಹೇಳಿದರು. ಅವರು ಅದನ್ನು ನೋಡಲೂ ಇಲ್ಲ, ಇವರು ಅದನ್ನು ಪರ್ಸ್ಯೂ ಮಾಡಲೂ ಇಲ್ಲ. ಇದರ ಬಗ್ಗೆ ತಾವು ತಮ್ಮ ಉತ್ತರದಲ್ಲಿ ಹೇಳಬೇಕೆಂದು ಒತ್ತಾಯ ಮಾಡುತ್ತೇನೆ. ಲಕ್ಷಾಂತರ, ಕೋಟ್ಯಾಂತರ ರೂಪಾಯಿಯ ಬೆಳೆ ಹಾಳಾಗಿ ಹೋಯಿತು. ಒಬ್ಬರಿಗೂ ಒಂದು ಬಿಡಿ ಗಾಸನ್ನು ಪರಿಹಾರವಾಗಿ ಕೊಡಲಿಲ್ಲ. ಅನಂತರ ಪೇಜ್ ನಂಬರ 4 ರಲ್ಲಿ - development of energy ಗೆ ಪ್ರಯಾರಿಟಿಯನ್ನು ಕೊಡುತ್ತೇವೆಂದು ಹೇಳಿದಿರಿ. ಇದನ್ನು ತಾವು ಮೊದಲಿನಿಂದಲೂ ಹೇಳಿಕೊಂಡೇ ಬಂದಿದ್ದೀರಿ. ಈಗ

ಏನು ಆಗಿದೆ ಎಂದರೆ, ಈಗಾಗಲೇ ಜನವರಿ ತಿಂಗಳಿನಿಂದಲೇ ಪವರ್ನ ಶಾರ್ಟೇಜ್ ಪ್ರಾರಂಭವಾಯಿತು. ರೇಡಿಯೋ ಮತ್ತು ಟಿ.ವಿ.ಗಳಲ್ಲಿ ಬೆಳಿಗ್ಗೆ 6 ರಿಂದ 9 ಗಂಟೆಯುವರೆಗೆ ಮತ್ತು ಸಂಜೆ 6 ರಿಂದ 9 ಗಂಟೆಯವರೆಗೆ ರೈತರು ಪಂಪುಸೆಂಟ್‌ನ್ನು ಉಪಯೋಗ ಮಾಡಬಾರದೆಂದು ಪ್ರಚಾರ ಮಾಡಿದ್ದಿರಿ. ಈಗಲೇ ಜನವರಿ, ಫೆಬ್ರವರಿಯಲ್ಲಿ ಇದು ಪ್ರಾರಂಭವಾದರೆ ಮುಂದೆ ನಮ್ಮ ಗತಿ ಏನು? ರೈತರು ಇದರಿಂದ ಬದುಕುವ ಸ್ಥಿತಿ ಇದೆಯೋ ಏನೋ ಎಂದು ನನಗೆ ಅರ್ಥವಾಗಲಿಲ್ಲ. ಅದರಲ್ಲಿ ಖಾಸಗಿಯವರಿಗೆ ವಿದ್ಯುತ್ ಉತ್ಪಾದನೆ ಮಾಡುವುದನ್ನು ವಹಿಸಿಕೊಡುತ್ತೇವೆಂದು ಹೇಳಿದ್ದೀರಿ. ಆ ರೀತಿ ಎಷ್ಟು ಜನರಿಗೆ ವಹಿಸಿಕೊಟ್ಟಿದ್ದೀರಿ? ಎಷ್ಟು ಜನರು ವಿದ್ಯುತ್ ಉತ್ಪಾದನೆಯನ್ನು ಮಾಡಲು ಮುಂದೆ ಬಂದಿದ್ದಾರೆ? ಎಷ್ಟು ಮೆಗವ್ಯಾಟ್ ವಿದ್ಯುತ್ತನ್ನು ಉತ್ಪಾದನೆ ಮಾಡಿ ಸಪ್ಲೆ ಮಾಡಿಕೊಡುತ್ತಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕು. ಇದರ ಜೊತೆಗೆ ಗಂಗಾ ಕಲ್ಯಾಣ ಕಾರ್ಯಕ್ರಮವಿಲ್ಲ, ಒಂದೊಂದು ತಾಲ್ಲೂಕಿಗೆ ಒಂದೆರಡೂ ಸಹ ಸಿಗಲಿಲ್ಲ. 2-3 ವರ್ಷದಿಂದ ಗಂಗಾಕಲ್ಯಾಣ ಇಲ್ಲ. ಎಸ್.ಸಿ.ಪಿ.ಯ ಅಡಿಯಲ್ಲಿ ಪರಿಶಿಷ್ಟವರ್ಗದವರಿಗೆ ಬೋರ್‌ವೆಲ್ ಹಾಕಿ ಪಂಪ್ಸೆಟ್ಟನ್ನು ಹಾಕಿಕೊಡುತ್ತಿದ್ದೀರಿ, ಅದರ ಯೋಜನೆಯೂ ಇಲ್ಲ.

ಹೀಗಾಗಿ ಇವತ್ತು ವ್ಯವಸಾಯವು ಕುಂಠಿತವಾಗುತ್ತಿದೆ. ರೈತನೂ ಸಹ ಬಹಳ ಕಷ್ಟಪರಿಸ್ಥಿತಿಯಲ್ಲಿದ್ದಾನೆ ಮತ್ತು ರಾಜ್ಯದ ಉತ್ಪಾದನಾ ಶಕ್ತಿ ಇವತ್ತಿನ ದಿವಸ ಕುಗ್ಗುತ್ತಿದೆ. ರಾಜ್ಯದ ರೈತ ಮುಂದೆ ಹೋಗುವ ಬದಲು ಇವತ್ತು ತಿರುಗಿ 10 ವರ್ಷ 20 ವರ್ಷ ಹಿಂದಕ್ಕೆ ಹೋಗುವ ಪರಿಸ್ಥಿತಿ ಬಂದಿದೆ. ಇದರ ಬಗ್ಗೆ ಏನಾದರೂ ಸ್ವಲ್ಪ ಮಾಡಿ, ಬರೀ ಸುಳ್ಳು ಹೇಳುವುದರಿಂದ ನಾವು ಈ ರಾಜ್ಯ ಕಟ್ಟಬಹುದಾಗಿದ್ದರೆ ಎಷ್ಟು ಬೇಕಾದರೂ ಸುಳ್ಳು ಹೇಳಿ ಕಟ್ಟಬಹುದಾಗಿತ್ತು. ಸುಳ್ಳಿನಿಂದ ರಾಜ್ಯವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಇದರ ಕಡೆ ಹೆಚ್ಚಿನ ಗಮನ ಕೊಡಬೇಕು ಎಂದು ಒತ್ತಾಯ ಮಾಡುತ್ತೇನೆ. ಇನ್ನೊಂದು ಕಡೆ ಲಾ ಅಂಡ್ ಆರ್ಡರ್ ಬಹಳ ಚೆನ್ನಾಗಿದೆ ಎಂದು ಹೇಳಿದ್ದಾರೆ. ಬಹುಶಃ ಪ್ರೆಸ್ ಸೆಕ್ರೆಟರಿಗಳು ಮುಖ್ಯಮಂತ್ರಿಗಳಿಗೆ ವರದಿ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಸ್ವಾಮಿ. ಈಗಾಗಿರುವಷ್ಟು ಡಕಾಯಿತಿಗಳು ಮತ್ತು ರೇಪ್ ಪ್ರಕರಣಗಳು ಯಾವತ್ತು ಆಗಿರಲಿಲ್ಲ. ಆಕ್ಸಿಡೆಂಟ್ಗಳು, ನೋಡಿ ತಾವು ನಾಲ್ಕು ವರ್ಷದ ಇತಿಹಾಸವನ್ನು ತರಿಸಿ ನೋಡಿ, ಇದು ಅವರಿಗೆ ಪರಿಸ್ಥಿತಿ ಅರಿವಿಲ್ಲದೆ ಸುಮ್ಮನೆ ಸುಳ್ಳು ಹೇಳಿಸುವುದು ಬೇಡ. ಹೋದ ವರ್ಷವೂ ಸಹ ಮಹಿಳೆಯರ ರಕ್ಷಣೆ ಮಾಡುತ್ತೇವೆ ಎಂದು ಹೇಳಿದ್ದೀರಿ; ಮಹಿಳೆಯರದ್ದೇ ಒಂದು ಪೋಲಿಸ್ ಸ್ಟೇಷನ್ ಮಾಡುತ್ತೇವೆ ಎಂದು ಸಹ ಹೇಳಿದ್ದೀರಿ. ಈ ವರ್ಷವೂ ಅದನ್ನೇ ಹೇಳಿದ್ದೀರಿ. ವರ್ಷ ವರ್ಷ ಇದನ್ನು ಹೇಳುವುದರ ಬದಲು 5 ವರ್ಷಕ್ಕೆ ಇದು ಆಗುತ್ತದೆ ಎಂದು ಹೇಳಿದರೆ ನಾವು ಒಂದೇ ಸಾರಿ ಮಾತನಾಡಿಬಿಟ್ಟು ಹೋಗಬಹುದು. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಇನ್ನು ಮೈನಾರಿಟೀಸ್ಗೆ ನಾವು ಬಹಳಷ್ಟು ಮಾಡಿದ್ದೇವೆ ಎಂದು ತಾವು ಈ ಸಾರಿ ಹೇಳಿದ್ದೀರಿ. ತಾವು ಹೋದ ಸಲವೂ ಹೇಳಿದ್ದೀರಿ ಬಹುಶಃ ಈ ಬಾಬರಿ ಮಸೀದಿ ನಿರ್ನಾಮ ಆದ ನಂತರ ಅವರ ವಿಶ್ವಾಸಗಳಿಸುವುದಕ್ಕೆ ತಾವು ಬಹಳಷ್ಟು ಈ ಸ್ಕೀಂಗಳನ್ನು ಹಮ್ಮಿಕೊಂಡು ಮಾಡುತ್ತೇವೆ ಎಂದು ಹೇಳಿದ್ದೀರಿ. ಇದರಲ್ಲಿ ಕಾಲುಭಾಗವಾದರೂ ಮಾಡುವಂಥ ಶಕ್ತಿ ಸರ್ಕಾರಕ್ಕೆ ಇದೆಯೇ? ನಿಮ್ಮ ಬಡ್ಜೆಟ್ ಬರಲಿ ಏನು ಬರುತ್ತದೆಯೋ ನೋಡೋಣ. ಬಡ್ಜೆಟ್ ಏನೋ ಬರುತ್ತದೆ; ಚಂದ್ರೇಗೌಡರು ಹೇಳಿದರಲ್ಲಾ 67 ಪರ್ಸೆಂಟ್ ಮಾತ್ರ ಖರ್ಚು ಮಾಡಿ ಇನ್ನು 33 ಪರ್ಸೆಂಟ್ ಖರ್ಚು ಮಾಡಬೇಡಿ ಎಂದು ಹೇಳಿ. ಬಡ್ಜೆಟ್ನಲ್ಲಿ ಏನು ಬೇಕಾದರೂ ಬರೆಯಬಹುದು. ಆಕ್ಚುಲ್ಲಾಗಿ ಹಣ ಬಿಡುಗಡೆ ಮಾಡಿ ಖರ್ಚಾದರೆ ತಾನೇ; ಆ ಹಣ ಬಿಡುಗಡೆ ಮಾಡಿದ ಶಕ್ತಿ ತಮ್ಮಲ್ಲಿ ಈಗ ಉಳಿದಿಲ್ಲ. ಆಮೇಲೆ

ಹೋದವರ್ಷ ಬಡ್ಜೆಟ್ಭಾಷಣದಲ್ಲಿ ಉತ್ತರ ಕೊಡುವಾಗ ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜೂನ್ ತಿಂಗಳೊಳಗೆ ನಾವು ಜಾರಿಗೆ ಕೊಡುತ್ತೇವೆ ಎಂದು ಇಲ್ಲಿ ಹೇಳಿದರು. ಅದಾದ ಎರಡು ದಿವಸದ ನಂತರ ನಿಮ್ಮ ಶಾಸಕರ ಲೆಜಿಸ್ಲೆಚರ್ ಕಮಿಟಿಯೊಳಗೆ ನಾವು ಜಾರಿಗೆ ಕೊಡುತ್ತೇವೆ ಎಂದು ಇಲ್ಲಿ ಹೇಳಿದರು. ಆದಾದ ಎರಡು ದಿವಸದ ನಂತರ ನಿಮ್ಮ ಶಾಸಕರ ಲೆಜಿಸ್ಲೆಚರ್ ಕಮಿಟಿಯೊಳಗೆ ಮಾತನಾಡುವಾಗ ಜೂನ್ ಒಳಗೆ ಇದನ್ನು ನಾನು ಕನ್ಸಿಡರ್ ಮಾಡುತ್ತೇನೆ ಎಂದು ಹೇಳಿದ್ದೇನೆ; ಜಾರಿಗೆ ತರುತ್ತೇನೆ ಎಂದು ಹೇಳಲಿಲ್ಲ ಎಂದು ಹೇಳಿದರು.

ನಾನು ಮೋಷನ್ ಮೂವ್ ಮಾಡಿದೆ. ಪ್ರಿವಿಲೇಜ್ ಮೋಷನ್ ಹಾಕಿ ನಾನು ಕೇಳಿದೆ ಇದೇನು ಈ ಸದನಕ್ಕೆ ಮೋಸ ಮಾಡುತ್ತಿದ್ದೀರಾ ಅಥವಾ ನಿಮ್ಮ ಸಿಎಲ್ಪಿಗೆ ಮೋಸ ಮಾಡುತ್ತಿದ್ದೀರಾ ಎಂದು ಕೇಳಿದಾಗ ಘಂಟಾಘೋಷವಾಗಿ ಅವರು ಹೇಳಿದರು ಇಲ್ಲ ನಾನು ಸದನದಲ್ಲಿ ಏನು ಮಾತು ಕೊಟ್ಟಿದ್ದೇನೆ ಇದನ್ನು ಜಾರಿಗೆ ಕೊಡುತ್ತೇನೆ ಕಳೆದ ವರ್ಷದ ಜೂನ್ ಒಳಗಾಗಿ ಎಂದು ಅದಕ್ಕೆ ನಾನು ಬದ್ಧನಾಗಿದ್ದೇವೆ; ಇದನ್ನು ಜಾರಿಗೆ ಕೊಡುತ್ತೇನೆ ಎಂದು ಹೇಳಿದರು. ಎಲ್ಲಿ ಹೋಯಿತು ಸ್ವಾಮಿ ಅದು? ಜೂನ್ ಹೋಯಿತು ಇನ್ನೊಂದು ಜೂನ್ ಬರುತ್ತಿದೆ ಮತ್ತೆ ಡಿಸೆಂಬರ್ ಒಳಗಾಗಿ ಕೊಡುತ್ತೇವೆ ಎಂದು ಹೇಳಿದ್ದಾರೆ; ಈ ಡಿಸೆಂಬರ್ಗೆ ಅವರು ಇರುವುದೂ ಇಲ್ಲ; ಆ ವಿಷಯ ಬೇರೆ. ಆದರೆ ನಿಮಗೆ ಕಮಿಟ್ಮೆಂಟ್ ಇಲ್ಲ. ನೀವು ಮಾಡಬೇಕೆನ್ನುವ ಯೋಜನೆ ಇಲ್ಲ. ಸುಮ್ಮನೆ ಏನೋ ಹೇಳಿಕೊಂಡು ಕಾಲ ಕಳೆದುಕೊಂಡು ಹೋಗೋಣ ಎಂದು ಇದ್ದೀರಿಯೇ ವಿನಹ ನಿಮಗೆ ಏನೆ ಆಗಲಿ ಇದನ್ನು ಸಾಧಿಸಬೇಕು ಎಂಬ ಛಲ ಇಲ್ಲ, ಕಮಿಟ್ಮೆಂಟೂ ಇಲ್ಲ ಹಾಗೂ ನಿಮಗೆ ಆ ಧೈರ್ಯಾನೂ ಇಲ್ಲ ಆದ್ದರಿಂದ ಇದನ್ನು ಸುಮ್ಮಸುಮ್ಮನೆ ಅವರ ಕೈಯಲ್ಲಿ ಹೇಳಿಸುವುದರಿಂದ ಪ್ರಯೋಜನ ಇಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇನ್ನು ಕಡೆಯದಾಗಿ ಒಂದೇ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ.

ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ಸ್ ಸಾವಿರ ಹಾಸಿಗೆಯದ್ದು ಎರಡು ಕಡೆ ಮಾಡುತ್ತೇವೆ ಎಂದು ಹೇಳಿದ್ದೀರಿ. ನಿಮ್ಮದು ನಿಜವಾಗಲೂ ಸುಪರ್ ಸ್ಪೆಷಾಲಿಟಿಲ್ಲೇ. ಅಲ್ಲ ಸ್ವಾಮಿ, ಇರೋ ಹಾಸ್ಪಿಟಲ್ಗೆ ಸುಣ್ಣ ಬಣ್ಣ ಬಳೆಯುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಆಸ್ಪತ್ರೆಯಲ್ಲಿ ಇರುವ ಡಾಕ್ಟರ್ಗಳನ್ನು ಆ ಊರುಗಳಲ್ಲಿ ನಿಲ್ಲಿಸುವುದಕ್ಕೆ ಆಗಲಿಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರ್ ಗತಿ ಇಲ್ಲ. ಲಿನೆನ್ ಸಪ್ಲೈ ಮಾಡುವುದಕ್ಕೆ ಆಗುತ್ತಿಲ್ಲ; ಔಷಧಿಗಳು ಇಲ್ಲ. ಆ ಹಾಸಿಗೆಗಳಲ್ಲಿ ಮಲಗಿಕೊಂಡು ಬಿಟ್ಟರೆ ಇಲ್ಲದಿದ್ದ ಖಾಯಿಲೆಗಳು ಅವನಿಗೆ ಬರುತ್ತದೆ; ಅವನ ಹತ್ತಿರ ಇರುವ ಖಾಯಿಲೆ ಹೋಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್ : ಮೊನ್ನೆ ಮೊನ್ನೆ 800 ಡಾಕ್ಟರುಗಳನ್ನು ನೇಮಕ ಮಾಡಿಕೊಂಡು ಮಾಡಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಆಯಿತು 800 ಡಾಕ್ಟರ್ಗಳನ್ನು ನೇಮಕ ಮಾಡಿಕೊಂಡಿದ್ದೀರಿ. ಬಹಳ ವಂದನೆಗಳು. ಎಲ್ಲೆಲ್ಲಿಗೆ ತಾವು ನೇಮಕ ಮಾಡಿದ್ದೀರಿ ಅಲ್ಲಿ ಅವರು ಇರುವ ಹಾಗೆ ಮಾಡುವುದಕ್ಕೆ ತಾವು ಏನಾದರೂ ಯೋಚನೆ ಮಾಡಿ. ಒಂದೊಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಎಲ್ಲಾ ಸ್ಪೆಷಾಲಿಟಿ ಪ್ರೊವೈಡ್ ಮಾಡಬೇಕಾದರೆ ಕೊನೇಪಕ್ಷ 80 ರಿಂದ 100 ಎಕರೆ ಜಮೀನು ಬೇಕು. ಕಡೆ ಪಕ್ಷ ಎಷ್ಟೇ ಕಡಿಮೆ ಎಂದರೂ 80ಕೋಟಿ ಆದರೂ ಬೇಕು. ಈಗ 2E3 ಉದಾಹರಣೆಗಳನ್ನು ನಾನು ಕೊಡುತ್ತೇನೆ ಈ ಜಯದೇವ ಕಾರ್ಡಿಯಾಲಜಿ ಆಸ್ಪತ್ರೆ ಇದೆ. ಅಲ್ಲಿ ಒಳ್ಳೆಯ ಡಾಕ್ಟರುಗಳು ಇದ್ದಾರೆ. ಬಹಳ ಚೆನ್ನಾಗಿ ನೋಡುತ್ತಾರೆ. ರೈಲ್ವೆ ಸ್ಟೇಷನ್ ಪ್ಲಾಟ್ಫಾರಂ ಇದ್ದಂತೆ ಇದೆ ಅಲ್ಲಿ; ಅಲ್ಲಿ ಅಷ್ಟೊಂದು ರಷ್ ಇರುತ್ತದೆ. ಇದನ್ನು ನಾವು ಬೇರೆ ಕಡೆ ಶಿಫ್ಟ್ ಮಾಡುತ್ತೇವೆ ಎಂದು ಹೇಳಿ ಬನ್ನೇರುಘಟ್ಟ ರಸ್ತೆಯಲ್ಲಿ ಒಂದು

ಫೌಂಡೇಷನ್ ಹಾಕಿಸಿದರು. ಅದು 30 ಅಥವಾ 29 ಕೋಟಿಗೋ ಒಂದು ಎಸ್ಟಿಮೇಟ್ ಈಗ ಅದನ್ನು ವಾಪಸ್ಸು ಕಳುಹಿಸಿದ್ದಾರೆ, 28 ಕೋಟಿ ಕೊಡುವುದಕ್ಕೆ ಆಗುವುದಿಲ್ಲ 13,14 ಕೋಟಿಗೆ ಅದನ್ನು ಕಳಿಸಿ ಎಂದು. ಈ ಕಾಲದಲ್ಲಿ ಹೇಗೆ ಅದನ್ನು ಇಳಿಸುವುದು? ವರ್ಷ ವರ್ಷ ಎಸ್ಕಲೇಷನ್ ಆಗುತ್ತದೆ. ಅದನ್ನು ಇಳಿಸುವುದು ಹೇಗೆ ಅದನ್ನು ಇಳಿಸುವುದಕ್ಕೆ ಸಾಧ್ಯವೇ? ಆ ಪ್ಲಾನ್ ಕೂಡ ಇನ್ನೂ ಸರಿಯಾಗಿ ಅಪ್ರೂವ್ ಆಗಿಲ್ಲ. ಎರಡನೆಯದಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮಾನ್ಯ ದೇವರಾಜ್ ಅರಸ್ ಅವರ ಕಾಲದಲ್ಲಿ ಒಂದು ಮಾಸ್ಟರ್ ಪ್ಲಾನ್ ಮಾಡಿದರು. ಫೌಂಡೇಷನ್ ಹಾಕಿದರು ಸ್ವಾಮಿ, ಇವತ್ತಿನವರೆಗೂ ಅದು ಕಂಪ್ಲೀಟ್ ಆಗಿಲ್ಲ. 50 ಭಾಗ ಮಾತ್ರ ಕೆಲಸವಾಗಿದೆ ಈಗ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಉಳಿದಿರುವಂತಹ ಕೆಲಸ ನೀವು ಯಾವತ್ತು ಮಾಡಿಸುತ್ತೀರಿ? ಮತ್ತು ಇನ್ಫ್ರಾಸ್ಟ್ರಕ್ಚರ್ ಯಾವತ್ತು ಇದಕ್ಕೆ ಪ್ರೊವೈಡ್ ಮಾಡುತ್ತೀರಿ? ಮ್ಯಾನ್ ಪವರ್ ಯಾವಾಗ ಪ್ರೊವೈಡ್ ಮಾಡುತ್ತೀರಿ? ಇದನ್ನೆಲ್ಲಾ ನೀವು ಮೊದಲು ಮಾಡುವುದನ್ನು ಬಿಟ್ಟು ನಾವು ಸೂಪರ್ ಸ್ಪೆಷಲ್ ಆಸ್ಪತ್ರೆ ಮಾಡುತ್ತೇವೆ ಎಂದು ಹೇಳುತ್ತೀರಲ್ಲಾ ಎಷ್ಟು ವರ್ಷ ಇರಬೇಕು ಎಂದು ಮಾಡಿದ್ದೀರಿ ಸ್ವಾಮಿ ನೀವು? ಸಧ್ಯಕ್ಕೆ ಒಂದು ಇಪ್ಪತ್ತು ವರ್ಷ ಹೀಗೆ ಖಾಯಂ ಆಗಿ ಇರುತ್ತೀರಾ ನೀವು? ಇದು ಒಂದು ವರ್ಷದ ಯೋಜನೆ ಅಲ್ಲ. ನಮ್ಮ ರಾಜ್ಯಪಾಲರು ಹೇಳಿರುವುದು ಒಂದು ವರ್ಷದ್ದು ಅಲ್ಲ, 20 ವರ್ಷ ಇದ್ದರೆ ಏನಾದರೂ ಅಲ್ಪ ಸ್ವಲ್ಪ ಆಗಬಹುದು ಬೋರಿಂಗ್ ಹಾಸ್ಪಿಟಲ್ ಇದೆಯಲ್ಲಾ, ಈ ಓಟಿಬ್ಲಾಕ್ ಶುರು ಮಾಡಿ 8 ವರ್ಷವಾಯಿತು. ಇನ್ನೂ ಕಂಪ್ಲೀಟ್ ಆಗಲಿಲ್ಲ. ಮೈಸೂರಿನಲ್ಲಿ ಒಂದು ಕೆಆರ್ ಆಸ್ಪತ್ರೆ ಇದೆಯಲ್ಲಾ, ಈ ಆಸ್ಪತ್ರೆಯ ರೆಕ್ಟಿಫಿಕೇಷನ್ ಪ್ಲಾನ್ ಎಂದು ಏನು ಮಾಡಿದರು ಅದು 10ವರ್ಷದಿಂದ ಮುಗಿದಿಲ್ಲ ಸ್ವಾಮಿ. ಅದು ಯಾವತ್ತು ಬಿದ್ದು ಹೋಗುತ್ತದೆಯೋ ಯಾವತ್ತು ಏನು ಆಗುತ್ತದೆಯೋ ಗೊತ್ತಿಲ್ಲ. ಅದಕ್ಕೆ ಏನೇನೋ ರಿಪೇರಿ ಮಾಡುತ್ತಿದ್ದರು, ಅದು ಇನ್ನೂ ಆಗಲಿಲ್ಲ. ಇದರ ಕಡೆ ಸ್ವಲ್ಪ .....

ಶ್ರೀ ಕೆ.ಹೆಚ್. ರಂಗನಾಥ್ : ನೀವು ದೊಡ್ಡ ಬಳ್ಳಾಪುರ ಬಿಟ್ಟು ಏತಕ್ಕೆ ಮುಂದಿನ ಊರಿಗೆ ಹೋಗುವುದಿಲ್ಲ ನೀವು? ಮೈಸೂರಿಗೆ ಈ ಕಡೆ, ಆ ಕಡೆ ಏತಕ್ಕೆ ಹೋಗುವುದಿಲ್ಲ? ಇಲ್ಲಿಂದ ದೊಡ್ಡ ಬಳ್ಳಾಪುರ, ದೊಡ್ಡ ಬಳ್ಳಾಪುರದಿಂದ ಇಲ್ಲಿಗೆ, ಇಲ್ಲೇ ಓಡಾಡುತ್ತೀರಲ್ಲಾ ನೀವು. ಏಕೆ ನೀವು ಮೈಸೂರಿಗೆ ಹೋಗಿ ಬರಬಾರದು? ನಾಳೆ ಯುಗಾದಿಗೆ ಓಪನ್ ಆಗುತ್ತದೆ ಸ್ವಾಮಿ ಆ ಕಟ್ಟಡ. ತಾವು ಹೋಗಿ ನೋಡಿದರೆ ಸಂತೋಷ ಪಡುತ್ತೀರಿ ಈಗ. ನೀವೇ ಅದನ್ನು ಮಾಡಿ ಇಟ್ಟು, ನಾವು ಅದನ್ನು ಸರಿ ಪಡಿಸಿದರೆ ಅದಕ್ಕೂ ಮನ್ನಿಸುವುದಿಲ್ಲವೇ ನೀವು?

ಆರ್.ಎಲ್. ಜಾಲಪ್ಪ : ನಾವು ಮಾಡಿದ್ದು ಅಲ್ಲ ಸ್ವಾಮಿ ಅದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಅದು ಯಾವಾಗ ಆಗಿದ್ದು 1980 ರಲ್ಲಿ.

ಶ್ರೀ ಕೆ.ಹೆಚ್. ರಂಗನಾಥ್ : ನಾವು ಹೇಳುವುದು ನೀವು ಡಿಫೆಕ್ಟ್ ಮಾಡಿದಿರಿ ಎಂದು ಅಲ್ಲ. ಕಂಬ ಗಿಂಬ ಎಲ್ಲಾ ಸೊಟ್ಟಗೆ ಆಗಿತ್ತು ಆ ಕಾಲದಲ್ಲೇ. ಅದನ್ನೆಲ್ಲಾ ನೋಡಿ ನೀವು ಸುಮನಿದ್ದಿರಿ. ಈಗ ಹೊಸ ವರ್ಷ ಬರುತ್ತದೆಯಲ್ಲಾ, ಯುಗಾದಿಗೆ ಅದು ಸರಿಹೋಗುತ್ತದೆ. ಈ ಇಂಗ್ಲೀಷ್ ಸಂವತ್ಸರ ಅಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕಂಬ ಬಂದೋಬಸ್ತು ಆಗುವ ಹಾಗೆ ಮಾಡಿದ್ದುದು ನೀವೇ ಅಲ್ಲಿ.

ಶ್ರೀ ಆರ್.ಎಲ್. ಜಾಲಪ್ಪ : ನಂತರ ಈ ಆಸ್ಪತ್ರೆಗಳ ಸುತ್ತಮುತ್ತ ಯಾರಾದರೂ ಓಡಾಡಿದ್ದೀರೋ ಏನೋ ಗೊತ್ತಿಲ್ಲ. ಉಪಯೋಗಿಸಿರುವ ಬ್ಯಾಂಡೇಜ್ ಬಟ್ಟೆ, ಸಿರೇಂಜ್ ಎಲ್ಲಾ ಸುತ್ತಮುತ್ತ ಬಿದ್ದಿದೆ. ಇನ್ಸಿನೇಟರ್‌ಗಳನ್ನು ಉಪಯೋಗಿಸುವುದಕ್ಕೆ ಏನು ಕಷ್ಟ? ಇದನ್ನೆಲ್ಲಾ ತಾವು ದಯವಿಟ್ಟು ನೋಡಬೇಕು. ಇದೆಲ್ಲಾ ಬಹಳ ಸಿಂಪಲ್ ಥಿಂಗ್ಸ್. ಇನ್ನು ಅಂಬ್ಯುಲೆನ್ಸ್ ಇದೆಯಲ್ಲಾ ಅದರಲ್ಲಿ ಎಷ್ಟು ಅಂಬ್ಯುಲೆನ್ಸ್ ಓಡುತ್ತಿವೆ. ಇವತ್ತು

ನೀವು ಡ್ರೈವರ್‌ಗೆ ಸಂಬಳ ಕೊಡುತ್ತಿದ್ದೀರಿ. ಇದರಿಂದ ಏನು ಪ್ರಯೋಜನವಾಗುತ್ತಿದೆ? ಇದನ್ನೆಲ್ಲಾ ತಾವು ದಯವಿಟ್ಟು ನೋಡಿ. ಇನ್ನು ಈ ಫ್ಲೂಯಿಡ್ ಬ್ಯಾಂಕ್ ಬಗ್ಗೆ ಹೇಳುವುದಾದರೆ ನೀವೇ ಈ ಗ್ಲೋಕೋಸ್‌ನೆಲ್ಲಾ ಮಾಡಿಕೊಂಡರೆ ಒಂದೊಂದಕ್ಕೆ ನಾಲ್ಕೂವರೆ 5 ರೂಪಾಯಿಗೆ ಒಂದೊಂದು ಬಾಟಲ್ ಬೀಳುತ್ತದೆ. ಶೇಕಡ 80 ಭಾಗ ಇವತ್ತು ಕೆಲಸ ಮಾಡುತ್ತಾ ಇಲ್ಲ. ಇದೆಲ್ಲಾ ನಾನು ಏಕೆ ಹೇಳುತ್ತಿದ್ದೇನೆ ಎಂದರೆ ನಾನೇ ಒಂದು ಆಸ್ಪತ್ರೆಯನ್ನು ಕಟ್ಟುತ್ತಿದ್ದೇನೆ. ನಾನೇ ಹೋಗಿ ನೋಡಿಕೊಂಡು ಬರೋಣ ಎಂದು ಕೆಲವು ಆಸ್ಪತ್ರೆಗಳಿಗೆ ಹೋಗಿದ್ದೆ. ಆಗಲೇ ಇದೆಲ್ಲಾ ನನಗೆ ಗೊತ್ತಾಗಿದ್ದು. ಇದನ್ನು ಯಾರೂ ನನಗೆ ಹೇಳಿಕೊಟ್ಟಿದು ಅಲ್ಲ. ಮೈಸೂರು ಆಸ್ಪತ್ರೆ ಒಂದನ್ನು ನಾನು ನೋಡಿಲ್ಲ. ಐ ಅಗ್ರಿ ವಿತ್ ಯೂ. ನಾನು ಬೇರೆ ಆಸ್ಪತ್ರೆಗಳನ್ನು ಏನು ಹೇಳಿದ್ದೇನೆ ಇವುಗಳನ್ನೆಲ್ಲಾ ಸ್ವತಃ ನಾನೇ ಕಣ್ಣಲ್ಲಿ ನೋಡಿಕೊಂಡು ಬಂದಿದ್ದೇನೆ. ಲಾಂಡ್ರಿ ನೋಡೋಣ ಎಂದು ಹೋಗಿದ್ದೆ. ಮಾರ್ಚ್ಯುಯರಿ ಕಟ್ಟುತ್ತಿದ್ದಾರೆ, ಅದನ್ನು ನೋಡೋಣ ಎಂದು ಹೋಗಿದ್ದೆ.

ಎಲ್ಲಾ ಆಸ್ಪತ್ರೆಗಳನ್ನು ನೋಡಿದ ಮೇಲೆ ತಾವು ಏನು ಸೂಪರ್ ಸ್ಪೆಷಾಲಿಟಿಯ ಬಗ್ಗೆ ಮಾತನಾಡಿದಿರಲ್ಲಾ ಇದರ ಬಗ್ಗೆ ತಿಳುವಳಿಕೆ ಇದ್ದು ಇದನ್ನೆಲ್ಲಾ ಬರೆಯುತ್ತಿದ್ದಾರೋ ಏನೋ ಎಂದು ಆಶ್ಚರ್ಯವಾಗಿ ನಾನು ಕೇಳುತ್ತಿದ್ದೇನೆ. ಇನ್ನು ಬ್ಲಡ್ ಬ್ಯಾಂಕ್‌ನಲ್ಲಿ ಏಯ್ಡ್ಸ್ ಬಗ್ಗೆ ಟೆಸ್ಟ್ ಮಾಡಲು ಎಷ್ಟು ಕಡೆ ಅರೇಂಜ್ ಮಾಡಿದ್ದೀರಿ? ವಿಕ್ಟೋರಿಯಾ ಆಸ್ಪತ್ರೆಯಲ್ಲಿ 5 ಲಾಂಡ್ರಿ ಮೆಷಿನ್ಸ್ ಇವೆ. ಅಲ್ಲಿನ ಬಾಯ್ಲರ್ ಕೆಟ್ಟು ಹೋಗಿ 5 ವರ್ಷವಾಯಿತು. 5 ಲಾಂಡ್ರಿಯ ಪೈಕಿ 3 ಕೆಟ್ಟುಹೋಗಿ ಇನ್ನು 2 ಮಾತ್ರ ಕೆಲಸ ಮಾಡುತ್ತಿವೆ. ಸುಮಾರು ಮೂರುವರೆ ಕೋಟಿ ರೂ. ಖರ್ಚು ಮಾಡಿ 4 ಮೆಷಿನನ್ನು ತರಿಸಿದ್ದೀರಿ. 6 ತಿಂಗಳಾದರೂ ಇನ್ನೂ ಆ ಮೆಷಿನ್ಸ್‌ನ ಪ್ಯಾಕ್ನೂ ಕೂಡ ಒಡೆದಿಲ್ಲ. ಅವುಗಳು ಹಾಗೆಯೇ ಬಿದ್ದಿವೆ. ಇವುಗಳ ಮೇಲ್ವಿಚಾರಣೆ ನೋಡಿಕೊಳ್ಳುವವರಿಲ್ಲವೇ? ನಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಈ ರಾಜ್ಯದಲ್ಲಿ ಏನು ನಡೆಯುತ್ತಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ಆಸ್ಪತ್ರೆಗಳನ್ನು ತೆಗೆದುಕೊಂಡರೂ ಎಲ್ಲೂ ಕೂಡ ಒಂದೇ ಒಂದು ಕ್ಯಾಟ್ಸ್ ಸ್ಕ್ಯಾನ್ ಇಲ್ಲ. ಇಷ್ಟೆಲ್ಲಾ ಲೋಪದೋಷಗಳಿರುವಾಗ ನಾವು ಸೂಪರ್ ಸ್ಪೆಷಾಲಿಟಿ ಮಾಡುತ್ತೇವೆ ಒಂದೊಂದು ಸಾವಿರದ ಬೆಡ್ಡಿನದ್ದು ಎರಡು ಹೇಳಿದರೆ ಇದು ಎಷ್ಟು ಅಭಾಸದ ಮಾತು ಎಂಬುದನ್ನು ಮಾನ್ಯ ರಾಜ್ಯಪಾಲರೂ ಯೋಚನೆ ಮಾಡಲಿಲ್ಲ. ತಾವು ಬರೆದು ಅವರಿಂದ ಓದಿಸಿದಿರಲ್ಲಾ, ತಾವೂ ಕೂಡ ಇದನ್ನು ಯೋಚನೆ ಮಾಡಲಿಲ್ಲ. ಇದರ ಬಗ್ಗೆ ತಾವು ದಯವಿಟ್ಟು ಗಮನಕೊಡಬೇಕು. ಇವತ್ತು ಹಳ್ಳಿ ಡಾಕ್ಟರ್‌ಗಳದ್ದು ಬಹಳ ಹಿಂಸೆಯಾಗಿದೆ. ನಾವು ಎಲ್ಲೇ ಹೋದರೂ ಮೊದಲು ಕೇಳುವುದು ಡಾಕ್ಟರ್‌ಗಳು ಆ ಊರಿನಲ್ಲೇ ಇರುವಂತೆ ಮಾಡಿಸಿ ಎಂದು. ಏಕೆಂದರೆ ಈ ಡಾಕ್ಟರ್‌ಗಳು 2-3 ದಿವಸಕ್ಕೊಂದು ಸಾರಿ 11ಗಂಟೆಗೆ ಬಂದು ಸಾಯಂಕಾಲ 4ಗಂಟೆಗೆ ಹೊರಟುಹೋಗುತ್ತಾರೆ. ಲೇಡಿ ಡಾಕ್ಟರ್‌ಗಳಂತೂ ಅಲ್ಲಿ ವಾಸವೇ ಇರುವುದಿಲ್ಲ. ಇದರಿಂದಾಗಿ ಹಳ್ಳಿಗಳಲ್ಲಿ ಆಸ್ಪತ್ರೆಗಳಿದ್ದರೂ ಏನೇನೂ ಪ್ರಯೋಜನವಾಗುತ್ತಿಲ್ಲ. ಇದರ ಬಗ್ಗೆ ತಾವು ಹೆಚ್ಚಿನ ಗಮನವನ್ನು ಕೊಡಬೇಕಾಗುತ್ತದೆ. ಕೇವಲ ಸುಳ್ಳಿನಿಂದ ಈ ರಾಜ್ಯವನ್ನು ನೀವು ನಡೆಸುವುದಕ್ಕಾಗುವುದಿಲ್ಲ. ನಿಮ್ಮ ನಿಮ್ಮ ಕಿತ್ತಾಟದಲ್ಲಿ ರಾಜ್ಯದ ರಿಸೋರ್ಸಸ್ ಮೊಬಲೈಸೇಷನ್ ಬಗ್ಗೆ ಹೆಚ್ಚು ಗಮನವನ್ನು ಕೊಡುವುದಕ್ಕೆ ಆಗಲಿಲ್ಲ. ಹಳ್ಳಿಗಳ ಕಡೆ ಅಭಿವೃದ್ಧಿ ಕಾರ್ಯಗಳು ಏನೇನೂ ಇಲ್ಲ. ಮಾನ್ಯ ರಂಗನಾಥರವರ ಗಮನಕ್ಕೆ ನಾನೇ ಒಂದು ವಿಚಾರವನ್ನು ತಂದಿದ್ದೇನೆ. ನನ್ನ ಕ್ಷೇತ್ರದಲ್ಲಿ ಒಂದು ತಾಲೂಕಿಗೆ ಇಡೀ ವರ್ಷದಲ್ಲಿ ಖರ್ಚಾಗಿರುವುದು ಕೇವಲ 18.5 ಲಕ್ಷ ರೂ. ಮಾತ್ರ. ಇದು ಆಸ್ಪತ್ರೆ ಮತ್ತು ಬ್ರಿಡ್ಜಸ್‌ಗೆ ಸಂಬಂಧಪಟ್ಟ ಸ್ಪಿಲ್‌ಓವರ್ ವರ್ಕ್ಸ್‌ಗೆ ನಾನು ತಮಗೆ ಒಂದು ಕಾಗದವನ್ನು ಬರೆದು ಕಳುಹಿಸಿದ್ದೆ.

ಶ್ರೀ ಕೆ.ಹೆಚ್. ರಂಗನಾಥ್ : ನಾನು ತರಿಸಿ ನೋಡಿದ್ದೇನೆ. ಅದರ ಬಗ್ಗೆ ಪತ್ರ ಬರುತ್ತದೆ. ಅದು ನನಗೆ ತೃಪ್ತಿಯಾಗಿದೆ ಎಂದು ಹೇಳುವುದಿಲ್ಲ. ಇನ್ನೂ ಸಾಕಷ್ಟು ಕೆಲಸ ಆಗಬೇಕಾಗಿದೆ. ಆದರೆ ಕನಸ್ಟ್ರೈನ್ಟ್ಸ್ ಎಂದು ನಾವು ಏನು ಹೇಳುತ್ತೇವೆ ಅದರಿಂದಾಗಿ ನಾವು ಸ್ವಲ್ಪ ಹಿಡಿತಮಾಡಬೇಕಾಗುತ್ತದೆ.

ಶ್ರೀ ಆರ್.ಎಲ್. ಜಾಲಪ್ಪ : ಹಣ ಇಲ್ಲದಿರುವಾಗ ಮಾನ್ಯ ಮುಖ್ಯ ಮಂತ್ರಿಗಳು ಯಾವುದೇ ಸಭೆಗೆ ಹೋದರೂ ಅಲ್ಲಿ ಭರವಸೆಗಳನ್ನು ಕೊಡುತ್ತಿರುತ್ತಾರೆ. ಅದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿ.

ಶ್ರೀ ಕೆ.ಹೆಚ್. ರಂಗನಾಥ್ : ಇದು ಒಂದು ರೀತಿಯ ರೋಗ. ಇರತಕ್ಕ ವಿಚಾರವನ್ನು ಹೇಳಿದರೆ ಹೀಗೆ ಹೇಳುತ್ತೀರಿ. ಹಾಗಾದರೆ ತಾವು ಅಧಿಕಾರದಲ್ಲಿದ್ದಾಗ ಇತ್ತೇ? ತಾವು ಅಧಿಕಾರದಲ್ಲಿದ್ದಾಗ ನೀರಾವರಿ, ಸಣ್ಣ ನೀರಾವರಿ, ದೊಡ್ಡ ನೀರಾವರಿ ಪಿ.ಡಬ್ಲ್ಯೂ.ಡಿ. ಎಲ್ಲಾ ಖಾತೆಗಳನ್ನೂ ಒಬ್ಬರ ಕೈಯಲ್ಲೇ ಕೊಟ್ಟು ಸಾಕಷ್ಟು ಹಣವನ್ನು ಕೊಟ್ಟಿತ್ತಲ್ಲಾ, ಹಾಗಾದರೆ ಆ ರಸ್ತೆಗಳೆಲ್ಲಾ ಎಲ್ಲಿವೆ? ಎಲ್ಲಿಯವರೆಗೆ ಇದೆ. ಕಳೆದ ಒಂದು ದಶಕದಿಂದ ಇದೆಲ್ಲಾ ಹಾಳಾಗಿದೆ. ಇದಕ್ಕೇನು ಅನ್ನುತ್ತೀರಿ? ತಕ್ಷಣ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇಲ್ಲ ಎಂದು ಹೇಳಿದ ತಕ್ಷಣ ಏನೂ ಇಲ್ಲವೆಂದು ವ್ಯಾಖ್ಯಾನ ಮಾಡುವುದು, ಮಾಡಿದ್ದೇವೆಂದರೆ, ಎಷ್ಟು ಮಾಡಿದ್ದೀರಿ, 2 ಕಿ.ಮೀ. ಮಾಡಿದ್ದೀರಿ, 3 ಕಿ.ಮಿ. ಮಾಡಿದ್ದೀರಿ ಎಂದು ಹೇಳುತ್ತೀರಿ. ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲಿತ್ತು ಎನ್ನುವಂತಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ಆ ರೀತಿ ತಾವು ಭಾವನೆ ಇಟ್ಟುಕೊಳ್ಳಬೇಡಿ. ಕೆಲಸ ಆಗಿದ್ದರೆ ಕೆಲಸ ಆಗಿದೆ ಎಂದು ಹೇಳುತ್ತೇವೆ. ನಾವು ಅಷ್ಟೊಂದು ಕೆಳಮಟ್ಟಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್.ಏಕಾಂತಯ್ಯ : 10 ಲಕ್ಷದಲ್ಲಿ 5 ಲಕ್ಷ ರೂ.ಗಳನ್ನು ತಾವು ಕೊಟ್ಟಿದ್ದೀರಿ ಎಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ಇನ್ನೂ 5 ಲಕ್ಷ ರೂ. ಕೊಡುತ್ತೇವೆಂದು ನೀವು ಹೇಳಿರುವುದನ್ನೂ ನಾವು ಒಪ್ಪಿಕೊಳ್ಳುತ್ತೇವೆ. ಅದೇ 10 ಲಕ್ಷ ರೂ.ಗಳನ್ನು ಕೊಟ್ಟಿಲ್ಲ ಎಂಬುದನ್ನು ನಾವು ಹೇಳುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಆ 5 ಲಕ್ಷವನ್ನೂ ಕೂಡ ಇನ್ನೂ ರಿಲೀಸ್ ಮಾಡಿಲ್ಲ. 20 ಲಕ್ಷಗಳ ಪೈಕಿ ಕೇವಲ 5 ಲಕ್ಷ ಮಾತ್ರ ರಿಲೀಸ್ಮಾಡಿರತಕ್ಕದ್ದು. ಇನ್ನು 5 ಲಕ್ಷ ರೂ.ಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ, ಅದು ಇನ್ನೂ ಬಂದಿಲ್ಲ. ಇನ್ನು ಇರುವುದು ಒಂದೂವರೆ ತಿಂಗಳು. ಅಷ್ಟರಲ್ಲಿ ಯಾವಾಗ ಕೆಲಸಮಾಡಿಸುವುದು?

ನನ್ನ ಅನಿಸಿಕೆ ಇಷ್ಟೇ. ಯಾವುದೇ ಜವಾಬ್ದಾರಿ ಸ್ಥಾನದಲ್ಲಿರುವವರ ಕೈಯಿಂದ ಭಾಷಣಗಳನ್ನು ಮಾಡಿಸುವಾಗ ಅದು ವಾಸ್ತವಿಕ ಸಿದ್ಧತೆ ಮೇಲಿರಲಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ. ಅದಕ್ಕೆ ಸುಳ್ಳು ಏತಕ್ಕೆ ಹೇಳಬೇಕು? ಎಲ್ಲಿ ಕೇಳಲಿ. I have reserved Rs. 786 Crores for poverty alleviation. ನಾನು 2 ಕೋಟಿ ಕೊಟ್ಟಿದ್ದೇನೆ, 1 ಕೋಟಿ ಕೊಟ್ಟಿದ್ದೇನೆ ಎಂದು ಹೇಳುತ್ತಿರುತ್ತೀರಿ. ಕಳೆದ ಒಂದು ವರ್ಷದಲ್ಲಿ ನೀವು ಏನೇನು ಭರವಸೆಗಳನ್ನು ಜನರಿಗೆ ಕೊಟ್ಟಿದ್ದೀರಿ ಅದರ ಬಗ್ಗೆ ತಾವು ಒಂದು ಶ್ವೇತ ಪತ್ರವನ್ನು ಹೊರಡಿಸಿ. ನಮ್ಮನ್ನೇ ಮಾಡಿ ಎಂದರೆ ನಾವೇ ಮಾಡುತ್ತೇವೆ. ಏಕೆಂದರೆ ನಾವು ಎಲ್ಲಾ ಪೇಪರ್ ಕಟಿಂಗ್ಸನ್ನೂ ಇಟ್ಟುಕೊಂಡಿದ್ದೇವೆ. ತಮಗೆ ತಂದು ತೋರಿಸುತ್ತೇವೆ; ತಾವು ಏತಕ್ಕೆ ಈ ರೀತಿಯ ಭರವಸೆಗಳನ್ನು ಕೊಡುತ್ತೀರಿ? ಈ ರೀತಿ ಕೊಡುವುದರಿಂದ ತಮ್ಮ ವ್ಯಕ್ತಿತ್ವವೇ ಹಾಳಾಗಿ ಹೋಗುತ್ತದೆ. ಸರ್ಕಾರದ ವ್ಯಕ್ತಿತ್ವ ಹಾಳಾಗಿ ಹೋಗುತ್ತದೆ. ಕ್ರೆಡಿಬಿಲಿಟಿ ಹೋಗುತ್ತದೆ. ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಬಗ್ಗೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತೇನೆ. ....

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಹಿರಿಯ ಮಾನ್ಯ ಸದಸ್ಯರಾದ ಜಾಲಪ್ಪನವರು ಒಂದು ಮಾತನ್ನು ಹೇಳಿದರು. ದುಡ್ಡಿಲ್ಲದಿದ್ದರೆ, ಇಲ್ಲ ಎಂದು ಹೇಳಬೇಕು, ಸುಳ್ಳು ಆಶ್ವಾಸನೆಗಳನ್ನು ಏತಕ್ಕೆ ಕೊಡಬೇಕೆಂದು ಹೇಳಿದರು. ಅವರ ಕಾಲದಲ್ಲಿ ಕೂಡ ಸಾಕಷ್ಟು ಹಣದ ಅಭಾವ ಇತ್ತು. ಆಗ ಅವರು ತಮ್ಮಲ್ಲಿ ಹಣ ಇಲ್ಲವೆಂದು ಹೇಳಿಕೊಂಡಿದ್ದರೆ? ನಮ್ಮಲ್ಲಿ ಹಣವಿಲ್ಲದ್ದರಿಂದ ಇಂಥಿಂಥ ಯೋಜನೆಗಳನ್ನು ಕಾರ್ಯಗತಾ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿಕೊಂಡಿದ್ದರೆ?

ಶ್ರೀ ಹೆಚ್. ಏಕಾಂತಯ್ಯ : ತಾವು ಹಿಂದೆ ಚರ್ಚೆ ಮಾಡುವಾಗಲೆಲ್ಲಾ ಈ ಮಾತನ್ನು ಹೇಳಿದ್ದೀರಿ.

ಶ್ರೀಮತಿ ಮೋಟಮ್ಮ : ನಾವು ಬಸವಣ್ಣನವರನ್ನು ನೆನೆಸಿಕೊಳ್ಳಬೇಕಾಗುತ್ತದೆ. ಇದಿರ ಹಳಿಯಲು ಬೇಡ, ತನ್ನ ಬಣ್ಣಿಸಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂಬುದನ್ನು ಅವರು ನೆನಪು ಮಾಡಿಕೊಳ್ಳಬೇಕು. ನಾವು ಸರಿ, ನೀವು ಸರಿ ಎಂದು ಹೇಳುವುದು ಸರಿಯಲ್ಲ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಕಾಲದಲ್ಲಿ ಏನು ಬೋರ್‌ವೆಲ್ಲಗಳನ್ನು ಮಾಡಿದ್ದೇವೆ ಅವುಗಳಲ್ಲಿ ಕೆಟ್ಟು ಹೋಗಿರುವುಗಳನ್ನು ಇವರು ಸರಿಯಾಗಿ ರಿಪೇರಿ ಮಾಡಿದ್ದಾರೆಯೇ ಎಂದು ಕೇಳಬಯಸುತ್ತೇನೆ. ತಮಗೆ ಹೇಳುವುದಾದರೆ, ಈ ವಿಚಾರದಲ್ಲಿ ನಾನು ಛಾಲೆಂಜ್ ತೆಗೆದುಕೊಳ್ಳುತ್ತೇನೆ. ನಾನು ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ನಾನು ಇಲ್ಲಿಗೆ ಸುಮ್ಮನೆ ಬಂದು ಗಾಸಿಫ್ ಹೊಡೆಯುತ್ತಿಲ್ಲ. ದಯವಿಟ್ಟು ಕೇಳಿ. ನಾನು ಕಳೆದ 8-10 ದಿನದ ಹಿಂದೆ ನನ್ನ ತಾಲ್ಲೂಕಿಗೆ ಹೋಗಿದ್ದಾಗ ನನಗೆ ಕಂಪ್ಲೇಂಟ್ಸ್ ಬಂತು. ಅಲ್ಲಿ 60 ಬೋರ್‌ವೆಲ್ಸ್ ಕೆಟ್ಟುಹೋಗಿವೆ ಎಂದು. ಏಕೆ ಎಂದು ಕೇಳಿದರೆ ಡೀಸೆಲ್ ಇಲ್ಲ ಎಂದು ಹೇಳಿದರು. ಜಿಲ್ಲಾಪರಿಷತ್ತಿನ ಇಂಜನಿಯರ್‌ರವರನ್ನು ಕರೆದು ಕೇಳಿದರೆ, ಅವರು ಏನು ಹೇಳಿದರೆಂಬುದನ್ನು ನಾನು ಈ ತುಂಬಿದ ಸದನದಲ್ಲಿ ಹೇಳುತ್ತಿದ್ದೇನೆ. ಡೀಸಲ್ ಬಿಲ್ ಪಾವತಿ ಮಾಡಿಲ್ಲ ಆದ್ದರಿಂದ ಅವರು ಡೀಸೆಲ್ ಕೊಡುತ್ತಿಲ್ಲ ಎಂದು ಹೇಳಿದರು. ಆಗ ನಾನು ಹೇಳಿದೆ, ನಾನೇ 4-5ಸಾವಿರ ರೂ. ಕೊಡುತ್ತೇನೆ, ನೀವು ಕೊಟ್ಟರೆ ಕೊಡಿ, ಇಲ್ಲದಿದ್ದರೆ ಬೇಡ ಮೊದಲು ಡೀಸೆಲ್ ತೆಗೆದುಕೊಂಡು ಹೋಗಿ ಕೆಲಸಮಾಡಿ ಎಂದು ಹೇಳಿ ಬೋರ್‌ವೆಲಸ್ನು ರಿಪೇರಿ ಮಾಡಿಸಿ ಬಂದೆ. ಮಾರನೇ ದಿನ ನಾನು ಇಲ್ಲಿಗೆ ಬಂದು ಕಾರ್ಯದರ್ಶಿಯವರ ಜೊತೆ ಮಾತನಾಡಿದಾಗ ಚೀಫ್ ಸೆಕ್ರೆಟರಿಯವರು ಹೇಳಿದರು, ಏನೋ ವ್ಯತ್ಯಾಸವಾಗಿದೆ, ನಾನು ಇವತ್ತು ಹಣವನ್ನು ರಿಲೀಸ್ ಮಾಡುತ್ತೇನೆಂದು ಹೇಳಿದರು. 60 ಬೋರ್‌ವೆಲ್ಲಳು ಏನು ಕೆಟ್ಟಿದ್ದುವು ಅವುಗಳನ್ನು ಮೊನ್ನೆ ತಾನೇ ರಿಪೇರಿಗೆ ತೆಗೆದುಕೊಂಡಿದ್ದಾರೆ. ಇದರಲ್ಲಿ ಏನು ಸುಳ್ಳಿದೆ?

## ಶಾಸನ ರಚನಾ ಕಾರ್ಯಕಲಾಪಗಳು.

### (ಎ) ವಿಧೇಯಕಗಳ ಮಂಡನೆ.

### 1994 ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರ್‍ನಹಳ್ಳಿ ರಾಮಸ್ವಾಮಿ (ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ;

"1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ: "1994ರ ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.';